ಕರ್ನಾಟಕದ ಗಾಂಧಿ
ಡಾ. ಹೊ. ಶ್ರೀನಿವಾಸಯ್ಯ

• ಪ್ರೊ. ಜಿ.ಬಿ. ಶಿವರಾಜು



ಕರ್ನಾಟಕದ ಗಾಂಧೀ
ಡಾ|| ಹೊ. ಶ್ರೀನಿವಾಸಯ್ಯ

ಪ್ರಕಾಶಕರು
ಡಾ|| ಹೊ. ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್ (ರಿ)
102, ಡಾ|| ಹೊ. ಶ್ರೀನಿವಾಸಯ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560 003.

"Karnatakada Gandhi Dr. H. Srinivasaiah" a brief biography of Dr. H. Srinivasaiah freedom fighter, veteran Gandhian and president of Gandhi Bhavan, Bangalore. Written by Prof. G.B. Shivaraju and published by Dr. H. Srinivasaiah charitable Trust (R), Bangalore - 3.

ಮೊದಲ ಮುದ್ರಣ : 2016

₹ : 10/-

ಪ್ರತಿಗಳು : 2000

ಪ್ರಕಾಶಕರು

ಡಾ॥ ಹೊ. ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್ (ರಿ)
೧೦೨, ಡಾ॥ ಹೊ. ಶ್ರೀನಿವಾಸಯ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩.

ಮುದ್ರಕರು

ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್
ರಾಜಾಜಿನಗರ, ಬೆಂಗಳೂರು–560 044
ದೂರವಾಣಿ : 080–23357963

ಕರ್ನಾಟಕದ ಗಾಂಧೀ
ಡಾ|| ಹೊ. ಶ್ರೀನಿವಾಸಯ್ಯ

ಲೇಖಕ : **ಪ್ರೊ|| ಜಿ.ಬಿ. ಶಿವರಾಜು**

ಪ್ರಕಾಶಕರು:
ಡಾ|| ಹೊ. ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್ (ರಿ)
102, ಡಾ|| ಹೊ. ಶ್ರೀನಿವಾಸಯ್ಯ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560 003.

ಪರಿವಿಡಿ

ಮುನ್ನುಡಿ

ಶ್ರೀ ಹೊ. ಶ್ರೀನಿವಾಸಯ್ಯನವರ ಮಾದರಿ ನಮಗೆ ಬೇಕು

ಡಾ॥ ಪಾಟೀಲ್ ಪುಟ್ಟಪ್ಪ



ಸಾರ್ವಜನಿಕರಿಗೆ ತಮ್ಮ ಜೀವನವನ್ನು ಮುಡಿಪಾಗಿರಿಸಿಕೊಂಡಿರುವ ಜನರ ಕೊರತೆ ಇಂದು ದೇಶದಲ್ಲಿ ಎದ್ದು ಕಾಣುತ್ತಿದೆ. ಬಹಳಷ್ಟು ಜನರು ತಮ್ಮ ಸ್ವಂತದ ವಿಚಾರದಲ್ಲಿಯೇ ಮಗ್ನರಾಗಿದ್ದಾರೆ. ಅವರಿಗೆ, ಜನಸಾಮಾನ್ಯರಿಗೆ ಏನೇನಾಗುತ್ತದೆ ಎನ್ನುವ ಅರಿವು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕರ ಬಗ್ಗೆ ಆಲೋಚನೆ ಮಾಡುವ ಜನರು ಇನ್ನು ಅಲ್ಲಲ್ಲಿ ಇರುವುದು ಸೋಜಿಗ ಉಂಟುಮಾಡುವ ಸಂಗತಿಯಾದರೂ ಸತ್ಯವಾಗಿದೆ. ಅಂತಹ ವಿರಳ ವರ್ಗದ ಜನರಲ್ಲಿ ಬೆಂಗಳೂರಿನ ಗಾಂಧೀಭವನದಲ್ಲಿರುವ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ॥ ಹೊ.ಶ್ರೀನಿವಾಸಯ್ಯ ಅವರು ಒಬ್ಬರು. ಅವರು ನಮ್ಮ ರಾಜ್ಯದ ದರಿದ್ರ ನಾರಾಯಣನ ಸೇವೆಗೋಸ್ಕರವೇ ತಮ್ಮ ಜೀವನವನ್ನು ಮೀಸಲಿರಿಸಿದ್ದಾರೆ. ಅವರಿಗೆ ಮನೆಮಾರು ಎನ್ನುವುದೇ ಇಲ್ಲ. ಸ್ವಂತದ ಮನೆಯನ್ನೂ ಕೂಡ ಅವರು ಸಾರ್ವಜನಿಕರಿಗೆ ಅರ್ಪಿಸಿದ್ದಾರೆ. ಹಗಲಿರುಳು ಮಾಡುತ್ತಿರುವ ಅವರ ಚಿಂತನೆ ಎಲ್ಲವೂ ದುರ್ಬಲರಾದ ಜನರ ಸೇವೆಗೋಸ್ಕರ ಅರ್ಪಿತವಾಗಿದೆ. ಅವರಿಗೆ ವಯಸ್ಸಾಗಿದ್ದರೂ ತರುಣ ವಿದ್ಯಾರ್ಥಿಗಳಲ್ಲಿ ಉತ್ಸಾಹ ತುಂಬುವ ಪ್ರಶ್ನೆ ಬಂದರೆ ಅವರು ತರುಣರಿಗಿಂತ ಹೆಚ್ಚು ತರುಣರಾಗುತ್ತಾರೆ. ಯುವಜನರು ಪರಿವರ್ತನೆಗೊಂಡರೆ ದೇಶವು ಅದ್ಭುತ ರೀತಿಯಿಂದ ಬದಲಾವಣೆಯಾಗುತ್ತದೆ ಎಂದು ಅವರು ಭಾವನೆ ಮಾಡಿಕೊಂಡಿದ್ದಾರೆ. ತರುಣ ವರ್ಗವನ್ನು ಜಾಗೃತಗೊಳಿಸುವ ಕೆಲಸ ವಿದ್ಯಾರ್ಥಿ ಜೀವನದಿಂದಲೇ ಆರಂಭವಾಗಬೇಕೆಂದು ಅವರು ನಂಬಿದ್ದಾರೆ. ವಿದ್ಯಾರ್ಥಿಗಳಲ್ಲಿ ರಾಷ್ಟ್ರ ಪ್ರೇಮವನ್ನು ತುಂಬಿದರೆ, ದೇಶವನ್ನು ಬದಲಿಸುವ ಗಾಂಧಿ ಕೆಲಸ ಸುಲಭವಾಗಿ

ನೆರವೇರುತ್ತದೆ ಎಂದು ನಂಬಿಕೊಂಡು ಅವರು ತಮ್ಮನ್ನು ಆ ಕೆಲಸಕ್ಕೆ ಅರ್ಪಿಸಿಕೊಂಡಿದ್ದಾರೆ.

ಭಾರತದ ಜನಪದವನ್ನು ಬದಲಿಸುವುದು ನಮ್ಮಿಂದಲೇ ಆಗಬೇಕು ಎಂದು ಅವರು ಸಂಕಲ್ಪ ತೊಟ್ಟು ಆ ಕೆಲಸಕ್ಕೆ ತನ್ನ ಶಕ್ತಿ ಸರ್ವಸ್ವವೆಲ್ಲವನ್ನೂ ಧಾರೆ ಎರೆದಿದ್ದಾರೆ. ಅವರ ಜೀವನದ ಈ ಆದರ್ಶವು ಸರ್ವರಿಗೂ ಮಾದರಿ ಎನಿಸುವಂತಿದೆ. ಗಾಂಧೀಜಿ ಅವರು ದೇಶದ ಪರಿವರ್ತನೆಗೋಸ್ಕರ ತೊಟ್ಟ ಪಣಕ್ಕಾಗಿ ನಮ್ಮನ್ನು ನಾವು ಪ್ರಾಮಾಣಿಕವಾಗಿ ಅರ್ಪಿಸಿಕೊಂಡರೆ ಇದು ಅಸಾಧ್ಯವಾದುದೇನೂ ಅಲ್ಲ. ಡಾ॥ ಹೊ. ಶ್ರೀನಿವಾಸಯ್ಯ ಅವರನ್ನು ನಮ್ಮ ಯುವಜನರಲ್ಲಿ ಕಾಣಿಸಬೇಕು. ಅಂದರೆ ಮಾತ್ರ ಅವರು ತೊಟ್ಟ ಸಂಕಲ್ಪ ನಿಜವಾಗಿ ಪರಿಣಮಿಸುತ್ತದೆ.

ಸರ್ವಕಾರ್ಯಗಳಲ್ಲಿಯೂ ಅವರೊಂದಿಗೆ ಜೀವನದುದ್ದಕ್ಕೂ ಸಹಕರಿಸಿ ನಡೆದುಕೊಂಡಿದ್ದ ಅವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿ ಅವರು ಈಗ ಇಲ್ಲ. ಆದರೂ ಅವರ ನೆನಪನ್ನು ಹಸಿರಾಗಿಸಬೇಕೆಂದು ಅವರು ತಮ್ಮೊಂದಿಗೆ ಇದ್ದವರಂತೆ ಇಮ್ಮಡಿ ಶಕ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಜೀವನದ ಈ ರೀತಿಯು ಸರ್ವ ಜನರಿಗೆ ಮಾದರಿ ಎನಿಸಬೇಕು.

ಈ ಕಾರ್ಯಕ್ಕೋಸ್ಕರ ಅವರ ಆರೋಗ್ಯ ಸಮರ್ಥಿಸಿಸಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತಾ ಸರ್ವಶಕ್ತಿಮಯನಾದ ಭಗವಂತನು ನಮ್ಮೆಲ್ಲರ ಅಪೇಕ್ಷೆಯನ್ನು ನೆರವೇರಿಸಲೆಂದು ನಾನು ಪ್ರಾರ್ಥಿಸುತ್ತೇನೆ.

– ನಾಡೋಜ ಡಾ॥ ಪಾಟೀಲ್ ಪುಟ್ಟಪ್ಪ

“ಡಾ॥ ಹೊ. ಶ್ರೀನಿವಾಸಯ್ಯ ಪವಿತ್ರಾತ್ಮರು. ಗಾಂಧಿ ಪಡಿಯಚ್ಚಿನಲ್ಲಿ ಮೂರ್ತಿಯಾದವರು”

– ನಾಡೋಜ ಡಾ॥ ಪಾಟೀಲ ಪುಟ್ಟಪ್ಪ.

ಯುವಕರಿಗೆ ಬೇಕಿರುವುದು ಕಟುಟೀಕೆ, ವಿಮರ್ಶೆ, ನಿಂದನೆಗಳಲ್ಲ. ಯತಾರ್ಥ ಆದರ್ಶ. ಯೋಗ್ಯ ಮಾರ್ಗದರ್ಶನ. ಸಮಾಜದಲ್ಲಿ ಯತಾರ್ಥ ಆದರ್ಶದ ಬದುಕನ್ನು ಅತ್ಯಂತ ಕಠಿಣ ಪರಿಶ್ರಮದಿಂದ, ಸರಳತೆಯಿಂದ ಕಟ್ಟಿಕೊಂಡು ಆದರ್ಶಪ್ರಾಯರಾದವರ ಜೀವನ ಮತ್ತು ಸಾಧನೆಯನ್ನು ಯುವಜನರಿಗೆ ತಲುಪಿಸುವುದು ಇಂದು ಅತ್ಯಗತ್ಯವಾಗಿದೆ. ಇಂತಹ ಆದರ್ಶಪ್ರಾಯರಾದ ವ್ಯಕ್ತಿಗಳಲ್ಲಿ ಡಾ॥ ಹೊ. ಶ್ರೀನಿವಾಸಯ್ಯ ಅವರು ಈ ನಾಡು ಕಂಡ ಅಪರೂಪದ ಸಾಧಕರು. ನಮ್ಮ ನಾಡಿನಲ್ಲಿ ಹಿರಿಯ ಚಿಂತಕರು ಕೆಲವರಿದ್ದಾರೆ. ಇನ್ನೂ ಕೆಲವರು ಸಮಾಜ ಸೇವಕರೂ, ಗಾಂಧೀವಾದಿಗಳೂ ಇದ್ದಾರೆ. ಅವರಲ್ಲಿ ಇನ್ನೂ ಕೆಲವರು ಪ್ರಕೃತಿಚಿಕಿತ್ಸಾ ತಜ್ಞರು, ಯೋಗ ಪಟುಗಳೂ ಇದ್ದಾರೆ. ಆದರೆ ಈ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು ವಿರಳ. ಅಂತಹ ವಿರಳರಲ್ಲಿ ವಿರಳರು ಡಾ॥ ಹೊ. ಶ್ರೀನಿವಾಸಯ್ಯ. ಅವರು. ಶ್ರೀಯುತರು ಅಪ್ಪಟ ಗ್ರಾಮೀಣ ಪ್ರತಿಭೆ. ಡಾ॥ ಹೊ. ಶ್ರೀನಿವಾಸಯ್ಯ ಅವರ ಜೀವನದ 9 ದಶಕಗಳ ಕಲ್ಲು ಮುಳ್ಳುಗಳ ಹಾದಿಯಲ್ಲಿ ಅತ್ಯಂತ ಕಠಿಣ, ದುರ್ಗಮ ಹಾಗೂ ಜೀವನೋತ್ಸಾಹ ಹುಟ್ಟಿಸುವಂತಹ ಯಶೋಗಾಥೆಯನ್ನು ನಾವು ಕಾಣಬಹುದು.

ಡಾ॥ ಹೊ. ಶ್ರೀನಿವಾಸಯ್ಯ. ಅಪ್ಪಟ ಗಾಂಧಿ ಅನುಯಾಯಿ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಹರ್ನಿಸಿ ದುಡಿದವರು. 1949ರಲ್ಲೇ ಇಂಜಿನಿಯರಿಂಗ್ ಪದವಿ ಪಡೆದು ವೃತ್ತಿಯಲ್ಲಿ ಇಂಜಿನಿಯರಾದರೂ ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯಲೋಕಕ್ಕೆ 80ಕ್ಕೂ ಹೆಚ್ಚು ಮೌಲ್ಯಯುತ ಗ್ರಂಥಗಳ ಅಮೂಲ್ಯ ಕೊಡುಗೆ ನೀಡಿದ್ದಾರೆ. ತಮ್ಮ 9ನೇ ವಯಸ್ಸಿನಲ್ಲೇ ಅಂದರೆ 1934ರಲ್ಲಿ ಗಾಂಧೀಜಿಯವರನ್ನೂ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಬಹಳ ಸಮೀಪದಲ್ಲಿ ಕಂಡದ್ದನ್ನು ಅತ್ಯಂತ ಕೃತಾರ್ಥ

ಭಾವದಿಂದ ಸ್ಮರಿಸುತ್ತಾರೆ. 21ನೇ (1946) ವಯಸ್ಸಿನಲ್ಲಿ ಮದರಾಸಿನಲ್ಲಿ ಅಖಿಲಭಾರತ ಹಿಂದೀ ಸಮ್ಮೆಳನದಲ್ಲಿ ಗಾಂಧೀಜಿ ಅವರ ಜೊತೆ



ತಂದೆಯೊಡನೆ ಬಾಲಕ ಹೊ. ಶ್ರೀನಿವಾಸಯ್ಯ

ಸೇವಾಕಾರ್ಯದಲ್ಲಿ ತೊಡಗಿಸಿಕೊಂಡವರು. 12ನೇ ವಯಸ್ಸಿನಲ್ಲಿ ಖಾದಿ ಧರಿಸಲು ಪ್ರಾರಂಭಿಸಿದವರು ಇಂದಿಗೂ ಖಾದಿ ಬದುಕನ್ನು



ಪೂಜ್ಯೆ ನಿರತರಾದ ತಾಯಿ

ಅಪ್ಪಿಕೊಂಡು ಬದುಕುತ್ತಿರುವವರು. ಜರ್ಮನಿ ಮೊದಲಾದ ರಾಷ್ಟ್ರಗಳಲ್ಲಿ ಹಲವು ವರ್ಷಗಳ ಸೇವೆ ಸಲ್ಲಿಸಿದ್ದರೂ ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರಭಾವಿತರಾಗದೆ ಭಾರತೀಯತೆಯನ್ನು ಬಿಟ್ಟುಕೊಡದೆ ಇಂದಿಗೂ ಖಾದಿ ಧರಿಸಿ ಇತರರು ಅವರಿಂದ ಪ್ರಭಾವಿತರಾಗುವಂತೆ ಮಾಡಿದ್ದಾರೆ.



ವಿವಾಹ ಸಂದರ್ಭ
ಕುಳಿತವರಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮ, ಎಚ್.ಸಿ. ದಾಸಪ್ಪ,
ಹೊ. ಶ್ರೀ ದಂಪತಿ, ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ ಪತ್ನಿ

ಗಾಂಧೀಜಿ ಅವರಿಂದ ಪ್ರಭಾವಿತರಾದುದನ್ನು ಅವರೇ ವಿನಮ್ರವಾಗಿ ಹೀಗೆ ಸ್ಮರಿಸಿದ್ದಾರೆ "ಮಹಾತ್ಮಾ ಗಾಂಧೀಜಿ ನನ್ನ ಮೇಲೆ ತುಂಬಾ ಪ್ರಭಾವ ಬೀರಿದ್ದಾರೆ. ಅವರ ಸತ್ಯಪರತೆ ನನ್ನ ಮನಸ್ಸನ್ನು ತುಂಬಾ ಕಾಡಿಸಿತ್ತು. ನಾನು ಹಿರಿಯರ ಮತ್ತು ಗಾಂಧೀಜಿ ಅವರ ಹಾದಿಯಲ್ಲಿ ನಡೆಯಲು ಪ್ರಯತ್ನ ಪಟ್ಟು ಎಷ್ಟು ಸಾಧಿಸಿದೆನೊ ಗೊತ್ತಿಲ್ಲ. ನನ್ನ ತಂದೆ ತಾಯಿಗಳ ಆಶೀರ್ವಾದ, ನನ್ನ ಜೀವನದಲ್ಲಿ ದೊರಕಿದ ಅನೇಕ ಗುರುಹಿರಿಯರ ಮಾರ್ಗದರ್ಶನ, ಗಾಂಧೀಜಿ, ವಿನೋಬಾ ಅವರ ಸಾನಿಧ್ಯ ನನ್ನ ಬದುಕಿಗೆ ಪ್ರೇರಣೆ". ಡಾ॥ ಹೊ. ಶ್ರೀನಿವಾಸಯ್ಯ ಅವರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ಮಹಾನುಭಾವರನ್ನು ವಿನಮ್ರತೆಯಿಂದ ಹೀಗೆ ನೆನೆದಿದ್ದಾರೆ. "ನಾನೊಬ್ಬ ಹಳ್ಳಿಮುಕ್ಕ. ನಾನು

ಯಾವ ಧರ್ಮ-ಕರ್ಮ ಸಂಯೋಗವೋ, ಯೋಗಾ ಯೋಗವೋ ಅನೇಕ ಮಹನೀಯರ ಕೃಪೆಗೆ ಪಾತ್ರನಾದೆ. ಅವರ ಜೀವನಗತಿಯನ್ನು ತಿಳಿಯುವ ಪ್ರಯತ್ನ ಮಾಡಿದೆ. ಅದನ್ನು ನನ್ನ ಜೀವನದಲ್ಲಿ ಪ್ರಯೋಗಮಾಡಿ ನೋಡಿದೆ. ಅದು ಸರಿ ಎನಿಸಿತು, ಫಲಿಸಿತು. ಈ ಪ್ರಯೋಗದಲ್ಲಿ ನನ್ನ ಮಡದಿ ಶ್ರೀಮತಿ ಜಯಲಕ್ಷ್ಮಿಯ ಪಾತ್ರ ದೊಡ್ಡದು. ನನ್ನ ಬದುಕಿನ ದೊಡ್ಡ ಭಾಗದ ಚರಿತ್ರೆಯಲ್ಲಿ ಆಕೆಯ ಸ್ಥಾನ ದೊಡ್ಡದು. ಈ ಇಳಿಗಾಲದಲ್ಲಿ ಆಕೆಯನ್ನು ನೆನೆಯುವುದು ಸಂತೋಷ".

ಶ್ರೀ ಹೊ. ಶ್ರೀನಿವಾಸಯ್ಯ ಅವರ ಗುರು ಹಾಗೂ ಪಿತೃ ಸಮಾನರಾದ ಅಪ್ಪಟ ಗಾಂಧಿ ಅನುಯಾಯಿ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ ವಿಷಯ ಬಂದಾಗ ಅವರ ಕಣ್ಣಾಲಿಗಳು ತೇವವಾಗುತ್ತವೆ. ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು ತಾಯಿಯ ತೆಕ್ಕೆಯಲ್ಲಿ ಬೆಳೆದ ಶ್ರೀ ಹೊ. ಶ್ರೀನಿವಾಸಯ್ಯ ಅವರು ವಿವಾಹವಾದಾಗ ತಮ್ಮ ಲಗ್ನ ಪತ್ರಿಕೆಯಲ್ಲಿ ಎಲ್ಲರನ್ನೂ ಆಹ್ವಾನ ಮಾಡಿದವರೇ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮಾಜಿ ಅವರು. ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮಾಜಿ ಶ್ರೀ ಹೊ. ಶ್ರೀನಿವಾಸಯ್ಯ ಅವರಿಗೆ ತಂದೆ, ತಾಯಿ, ಗುರುಶ್ರೇಷ್ಠ ಮಾರ್ಗದರ್ಶಕ, ದೈವ ಎಲ್ಲವೂ ಆಗಿದ್ದರು.

1949ರಲ್ಲೇ ಮೆಕ್ಯಾನಿಕಲ್ ಇಂಜಿನಿಯರ್ ಪದವಿ ಪಡೆದು ಹೆಚ್.ಎ.ಎಲ್. ಸಂಸ್ಥೆಯಲ್ಲಿ ಇಂಜಿನಿಯರ್ ಆಗಿ ತಮ್ಮ ವೃತ್ತಿ ಪ್ರಾರಂಭಿಸಿದರು. 1983ರಲ್ಲಿ ಜಿ.ಇ.ಎಂ.ಎಲ್. ಸಂಸ್ಥೆಯಲ್ಲಿ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾದರು. ಅವರ ಗಾಂಧೀ, ಖಾದಿ, ಪ್ರಕೃತಿ ಚಿಕಿತ್ಸೆ, ಯೋಗ ಸಾಹಿತ್ಯದ ಪ್ರೀತಿ, ಬದುಕು ಅನುಕರಣೀಯ.

ಅವರು ಬರೆದ "ನಾ ಕಂಡ ಜರ್ಮನಿ" ಪುಸ್ತಕ ಇಂಗ್ಲೀಷ್ ಹಾಗೂ ತಮಿಳು ಭಾಷೆಗೂ ಭಾಷಾಂತರವಾಗಿರುವುದಲ್ಲದೆ ಕೆಲವು ವಿಶ್ವ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿತ್ತು. ಈ ಪುಸ್ತಕ ಇವರನ್ನು ಎಷ್ಟು ಜನಪ್ರಿಯಗೊಳಿಸಿದೆ ಎಂದರೆ "ನಾ ಕಂಡ ಜರ್ಮನಿ ಶ್ರೀನಿವಾಸಯ್ಯ" ಎಂದೇ ಜನ ಪ್ರೀತಿಯಿಂದ ಗುರುತಿಸುವಂತೆ ಮಾಡಿತು. ರಾಷ್ಟ್ರಕವಿ

ಕುವೆಂಪು ಅವರು ಶ್ರೀನಿವಾಸಯ್ಯರವರನ್ನು ಜರ್ಮನಿ ಶ್ರೀನಿವಾಸಯ್ಯ ಎಂದು ಕರೆಯುತ್ತಿದ್ದರು.

2013ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಇವರ ಸ್ವಾತಂತ್ರ್ಯ ಹೋರಾಟ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ನೀಡಿರುವುದನ್ನು ಒಳಗೊಂಡಂತೆ ಪ್ರಕೃತಿ ಚಿಕಿತ್ಸೆಯಲ್ಲಿ ಗೌರವ ಡಾಕ್ಟರೇಟ್ ಪದವಿ, ರಾಜ್ಯ ಪ್ರಶಸ್ತಿ, ಪ್ರತಿಷ್ಠಿತ ಕರ್ನಾಟಕ ಸರ್ಕಾರದ ಗಾಂಧಿ ಸೇವಾ ಪ್ರಶಸ್ತಿ–2015 ಹಾಗೂ ರಾಷ್ಟ್ರ ಮಟ್ಟದ ಹಲವಾರು ಪ್ರಶಸ್ತಿಗಳು ಇವರ ಸಾಧನೆಯ ಬತ್ತಳಿಕೆಗೆ ಸೇರಿವೆ. 1985ರಿಂದ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾಗಿ (ರಾಷ್ಟ್ರ ಮಟ್ಟದಲ್ಲಿ ಇಷ್ಟೊಂದು ಸುದೀರ್ಘ ಸೇವೆಯನ್ನು ಗಾಂಧಿ ಸಂಸ್ಥೆಯಲ್ಲಿ ಸಲ್ಲಿಸಿದವರು ಇವರು ಒಬ್ಬರೇ ಆಗಿರುವುದು ಹೆಮ್ಮೆಯ ಸಂಗತಿ) ನಾಡಿನಾದ್ಯಂತ ಜನಮಾನಸದಲ್ಲಿ, ವಿಶೇಷವಾಗಿ ಯುವಜನರಲ್ಲಿ ಗಾಂಧಿ ವ್ಯಕ್ತಿ ವಿಚಾರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ, ನಿರಂತರವಾಗಿ ಬಿತ್ತುತ್ತಾ ಬಂದಿರುವ ಪರಿ ಡಾ॥ ಹೊ. ಶ್ರೀನಿವಾಸಯ್ಯ ಅವರ ಗುಣ ಸ್ವಭಾವವನ್ನು, ಅವರ ವ್ಯಕ್ತಿತ್ವದ ಹಿರಿಮೆಯನ್ನು ಸಾರುತ್ತದೆ. ಅವರನ್ನು ಹತ್ತಿರದಿಂದ ಬಲ್ಲವರು ಹೋರಾಟದ ಶ್ರೀನಿವಾಸಯ್ಯ, ಹೊನ್ನಿನ, ಹೂವಿನಂತಹ ಶ್ರೀನಿವಾಸಯ್ಯ ಎಂದುಕೊಳ್ಳುತ್ತಿರುವುದು ಉಂಟು. ಡಾ॥ ಹೊ. ಶ್ರೀನಿವಾಸಯ್ಯ ಅವರು ಜೀವನದ ವಿವಿಧ ಮಜಲುಗಳಲ್ಲಿ ಕ್ರಿಯಾತ್ಮಕ ಕೆಲಸಗಳನ್ನು ಮಾಡಿ ಜನಸಾಮಾನ್ಯರ ಹೃದಯವನ್ನು ಗೆದ್ದಿರುವಂತಹ ಅಪರೂಪದ ಸಮಾಜ ಸೇವಕರು. ಸಮಾಜಸೇವೆ ಬದುಕಿನ ನೋವನ್ನು ಹೋಗಲಾಡಿಸುತ್ತದೆ, ಅದರ ಉದ್ದೇಶ ಸಂಘರ್ಷ ಆಗಬಾರದು. ಬದುಕಿನ ನೋವು ನಲಿವನ್ನು ಅನುಭವಿಸುತ್ತಲೇ ಬೆಳೆಯಬೇಕೆಂದು ಪ್ರತಿಪಾದಿಸುವ ಡಾ॥ ಹೊ. ಶ್ರೀನಿವಾಸಯ್ಯನವರು ಪ್ರಕೃತಿ ಪುರುಷರೂ ಹೌದು ಹಾಗೂ ಮಣ್ಣಿನಲ್ಲಿಯೇ ಹುಟ್ಟಿ ಅರಳಿದ ಪರಿಮಳಯುಕ್ತವಾದ ಸುಂದರ ಕುಸುಮದಂಥವರೂ ಹೌದು.

ಡಾ॥ ಹೊ. ಶ್ರೀನಿವಾಸಯ್ಯ ಅವರು ಗಾಂಧೀ ಸಿದ್ಧಾಂತಕ್ಕೆ ಬದ್ಧರಾಗಿ ಸರ್ವೋದಯ ತತ್ವಗಳನ್ನು ಒಪ್ಪಿಕೊಂಡು ಬದುಕುತ್ತಿರುವ ನಿಷ್ಕಾಮ ಸೇನಾನಿ. ಜನಸೇವೆಗಾಗಿಯೇ ಜನ್ಮ ತಳೆದವರಂತೆ ಜನಸೇವೆಯಲ್ಲಿಯೇ ತೃಪ್ತಿಪಡುತ್ತಿರುವ ಅಪೂರ್ವ ವ್ಯಕ್ತಿಗಳಾಗಿದ್ದಾರೆ. ಖ್ಯಾತ ವಿಜ್ಞಾನಿ ಆಲ್‌ಬರ್ಟ್ ಐನ್‌ಸ್ಟೀನ್ ಹೇಳಿದ "ಗಣ್ಯರ ಈ ಪ್ರಮಾಣದ ಜನಪ್ರೇಮಕ್ಕೆ, ಅವರ ನಡೆ ನುಡಿ ಹಾಗೂ ಕೃತಿಯೇ ಆಧಾರ. ಇಂತಹ ವ್ಯಕಿಗಳು ಅತಿವಿರಳ ಹಾಗೂ ಅಪರೂಪ. ಪ್ರಾಮಾಣೀಕತೆ, ಸರಳತೆ ಹಾಗೂ ಪರಿಶುದ್ಧತೆಯಲ್ಲಿ ಇವರಿಗೆ ಸಾಟಿಯಿಲ್ಲ" ಎಂಬ ಮಾತು ಇವರನ್ನೇ ಕುರಿತು ಹೇಳಿದಂತಿದೆ. ಇಂತಹ ಹಿನ್ನೆಲೆಯಲ್ಲಿ ಜೀವನ ಸಾಗಿಸುತ್ತಿರುವ ಇವರು ಸಮಾಜದ ಅಪರೂಪದ ಅಪರಂಜಿಯಾಗಿದ್ದಾರೆ.

ಬಾಲ್ಯ

ಶ್ರೀ ಹೊ. ಶ್ರೀನಿವಾಸಯ್ಯ ಅವರು ಹುಟ್ಟಿ ಬೆಳೆದದ್ದು ಬೆಂಗಳೂರಾದರೂ, ಅವರ ತಂದೆ ಶ್ರೀ ಹೊನ್ನಪ್ಪ ಹೊಟ್ಟೆ ಪಾಡಿಗಾಗಿ ನಾಲಮಂಗಲ ತಾಲ್ಲೂಕು ದೇವಲಾಪುರದ ಹತ್ತಿರದ ಪುಟ್ಟ ಗ್ರಾಮ ಚೌದ್ರಿಕೊಪ್ಪಲುನಿಂದ ಬೆಂಗಳೂರಿಗೆ ಸುಮಾರು 1895ರಲ್ಲಿ ಬಂದು ನೆಲೆಸಿದರು. ತಾಯಿ ಶ್ರೀಮತಿ ತಿಮ್ಮಮ್ಮ ಚೌದರಿ ಕೊಪ್ಪಲಿಗೆ ಒಂದು ಕಿ.ಮೀ ದೂರದ ಅದಮಗೆರೆಯ ದೊಡ್ಡಕುಟುಂಬದಿಂದ ಬಂದವರು. ತಿಮ್ಮಮ್ಮ ಅವರಿಗೆ 13ನೇ ವಯಸ್ಸಿನಲ್ಲಿ ಹೊನ್ನಪ್ಪನವರೊಡನೆ ಲಗ್ನವಾಯಿತು. ನಾಗಮಂಗಲ ತಾಲ್ಲೂಕು ಅಂದು ಬಹಳ ಬಡತನದ ಬೇಗೆಯಲ್ಲಿದ್ದು, ಅದರಿಂದ ಪಾರಾಗಲು ರೈತ ಕುಟುಂಬಗಳು ಜೀವನೋಪಾಯಕ್ಕಾಗಿ ಬೆಂಗಳೂರನ್ನು ಒಳಗೊಂಡಂತೆ ರಾಜ್ಯದ ಹಲವು ಪ್ರದೇಶಗಳಲ್ಲಿ ನೆಲೆಸುವುದು ಅನಿವಾರ್ಯವಾಗಿತ್ತು. ಪ್ರಾಮಾಣೀಕತೆಯಿಂದ ಬದುಕಿದ್ದುದರಿಂದ ಬಡತನವನ್ನು ಒಂದು ಶಾಪವೆಂದು ತಿಳಿಯದೇ ಪರಿಶ್ರಮದಿಂದ ಅದನ್ನು ಒಂದು ವರವನ್ನಾಗಿಸಿಕೊಂಡು ಬಾಳಿದವರು. ತಂದೆ ಹೊನ್ನಪ್ಪ ಉದ್ಯೋಗ ಹರಸಿ ಬೆಂಗಳೂರಿಗೆ ಬಂದಾಗ ಸಿಕ್ಕಿದ್ದು ಕೌನ್ಸಿಲರೊಬ್ಬರ ಮನೆಯಲ್ಲಿ ಜವಾನರ ಕೆಲಸ. ನಂತರ ಅಠಾರ ಕಛೇರಿಯಲ್ಲಿ ದಫೇದಾರ್ ಆಗಿದ್ದರು.

ಈ ಹುದ್ದೆಯಿಂದ ಇವರ ತಂದೆಯವರನ್ನು ಎಲ್ಲರೂ ಜಮೇದಾರ್ ಹೊನ್ನಪ್ಪ ಎಂದು ಕರೆಯುತ್ತಿದ್ದರು.

ಸರ್.ಎಂ. ವಿಶ್ವೇಶ್ವರಯ್ಯನವರ ಬಳಿಯೂ ಸೇವಕರಾಗಿ ದುಡಿದ ತಂದೆ ಹೊನ್ನಪ್ಪ ಅವರ ಸೇವೆಗೆ ಮೆಚ್ಚಿ ಸರ್.ಎಂ. ವಿಶ್ವೇಶ್ವರಯ್ಯ ಅವರಿಂದ ಬೆಳ್ಳಿ ಪದಕ ಪಡೆದಿದ್ದರು. ಶ್ರೀ ಹೊ. ಶ್ರೀನಿವಾಸಯ್ಯ ಅವರ ಅಣ್ಣ ಶ್ರೀ ಪುಟ್ಟಸ್ವಾಮಿ ಅವರು ಶಾಲೆಯಲ್ಲಿ ಬುದ್ಧನ ಕಥೆ ಕೇಳಿ ಪರಿವರ್ತಿತರಾಗಿ ಮಾಂಸಾಹಾರ ತ್ಯಜಿಸಿ ಸಸ್ಯಹಾರಿಯಾದುದರ ಪರಿಣಾಮವಾಗಿ ಇಡೀ ಕುಟುಂಬ ಸಸ್ಯಾಹಾರಿ ಕುಟುಂಬವಾಯಿತು. ಅಷ್ಟೇ ಅಲ್ಲ ಅವರ ಮನೆಗಳನ್ನು ಸಸ್ಯಾಹಾರಿಗಳಿಗೆ ಮಾತ್ರ ಬಾಡಿಗೆ ಕೊಡುವುದನ್ನು ಕಡ್ಡಾಯ ಮಾಡಿಕೊಂಡರು. ಇವರು ಬೆಳೆದ ಪರಿಸರ ಇವರ ವ್ಯಕ್ತಿತ್ವದ ಮೇಲೆ ಅಪಾರವಾದ ಪ್ರಭಾವ ಬೀರಿದೆ. ಬೆಂಗಳೂರಿಗೆ ಬಂದ 6-7 ವರ್ಷಗಳಲ್ಲಿ ಹೊನ್ನಪ್ಪನವರು 30ರೂಗಳ ಮೊತ್ತದಿಂದ ಒಂದು ನಿವೇಶನ ಖರೀದಿಸಿ ಮಲ್ಲೇಶ್ವರಂನಲ್ಲಿ 30x100 ಅಡಿಯ ನಿವೇಶನದ ವಿಸ್ತೀರ್ಣದಲ್ಲಿ 3 ಹೆಂಚಿನ ಮನೆಗಳನ್ನು ಕಟ್ಟಿದ್ದರು. ಅಂದಿನ ದಿನಗಳಲ್ಲಿ ಎರಡು ಮನೆಯಿಂದ ಬರುತ್ತಿದ್ದ ಬಾಡಿಗೆ ಕೇವಲ 8 ರೂ ಮಾತ್ರ. ಹೊನ್ನಪ್ಪ ಮತ್ತು ತಿಮ್ಮಮ್ಮ ದಂಪತಿಗಳಿಗೆ 12 ಜನ ಮಕ್ಕಳಲ್ಲಿ ಶ್ರೀ ಹೊ.ಶ್ರೀನಿವಾಸಯ್ಯ ಹತ್ತನೆಯ ಮಗನಾಗಿ 1925 ಜನವರಿ 4ರಂದು ಜನಿಸಿದರು. 12ಜನ ಮಕ್ಕಳಲ್ಲಿ ಉಳಿದವರು ಇವರೊಬ್ಬರೇ ಗಂಡುಮಗ ಹಾಗೂ ಒಬ್ಬ ಅಕ್ಕ ಮತ್ತು ಒಬ್ಬಳು ತಂಗಿ. ಒಟ್ಟು 3 ಜನ ಮಕ್ಕಳು. ತಂದೆ ಚಿಕ್ಕಂದಿನಲ್ಲೇ ವಿಧಿವಶರಾದ್ದರಿಂದ ಡಾ|| ಹೊ. ಶ್ರೀನಿವಾಸಯ್ಯ ಅವರ ಜೀವನ ರೂಪು ಗೊಂಡಿದ್ದು ತಾಯಿ ಮಾರ್ಗದರ್ಶನದಲ್ಲಿ. ಶ್ರೀನಿವಾಸಯ್ಯನವರಿಗೆ ತಾಯಿ ತಿಮ್ಮಮ್ಮನವರೇ ಮೊದಲ ಗುರು.

ಕುಟುಂಬ

ಡಾ|| ಹೊ. ಶ್ರೀನಿವಾಸಯ್ಯ ತಂದೆಯವರು ಸತ್ತಾಗ ಶ್ರೀ ಹೊ. ಶ್ರೀನಿವಾಸಯ್ಯ ಅವರಿಗೆ ಕೇವಲ 12ವರ್ಷ. ಮನೆಯಲ್ಲಿ ಉಳಿದವರು ಇವರ ತಾಯಿ ಹಾಗೂ ತಂಗಿ ಪದ್ಮ ಮಾತ್ರ. ಇವರ ಅಕ್ಕ ವೆಂಕಟಲಕ್ಷ್ಮಮ್ಮ ಮದುವೆಯಾಗಿ ಬೇರೆ ಊರಿನಲ್ಲಿದ್ದರು. ಮೊದಲಿನಿಂದಲೂ ಇವರಿಗೆ ತಾಯಿಯವರನ್ನು ಕಂಡರೆ ಬಹಳ ಪ್ರೀತಿ.

ತಂದೆಯವರನ್ನು ಕಂಡರೆ ಹೆದರುತ್ತಿದ್ದರು. ಆಗ ಇವರಿಗೆ ಬರುತ್ತಿದ್ದ ಬಾಡಿಗೆ ಕೇವಲ 24ರೂ. ಮನೆ ಖರ್ಚಿಗಾಗಿ ಮೊದಲಿನಿಂದಲೂ ತಾಯಿಯವರು ಊಟದ ಎಲೆ ತಯಾರಿಸಿ ಮಾರುತ್ತಿದ್ದರು. ಮನೆಯಲ್ಲಿ ಮಣ್ಣಿನ ಮಡಕೆ ಬಿಟ್ಟರೆ ಬೇರೆ ಪಾತ್ರೆ ಇರಲಿಲ್ಲ. ದೈವಭಕ್ತರಾಗಿದ್ದ ಇವರು ಮಹಾಭಾರತ, ರಾಮಾಯಣ, ಪುರಾಣ, ಹರಿಕಥೆ ಮೊದಲಾದವುಗಳನ್ನು ಕೇಳಿ ಮನಸ್ಸಿಗೆ ಶಾಂತಿ ತಂದುಕೊಳ್ಳುತ್ತಿದ್ದರು.

ಚಿಕ್ಕ ವಯಸ್ಸಿನಿಂದಲೂ ತಾಯಿಯವರನ್ನು ಕೇಳದೆ ಶ್ರೀ ಹೊ. ಶ್ರೀನಿವಾಸಯ್ಯ ಅವರು ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಅವರಿಗೆ ನಮಸ್ಕರಿಸಿ ಪ್ರಯಾಣ ಮಾಡಿದರೆ ಎಲ್ಲ ಕೆಲಸವೂ ಫಲಿಸುತ್ತೆ ಎಂದು ನಂಬಿ ಬದುಕಿದವರು. ಇವರ ತಾಯಿಯವರು ಶಕ್ತಿ ಇರೋವರೆಗೆ, ಮನೆ ಕೆಲಸ, ತೋಟದ ಕೆಲಸ, ಮಾಡುತ್ತಲೇ ಇದ್ದರು. ಸುಮ್ಮನೆ ಕುಳಿತುಕೊಳ್ಳದ ಜೀವ ಅವರದ್ದು. ಕೆಲಸಕ್ಕೆ ಸೇರಿ ಮೂರು ನಾಲ್ಕು ವರ್ಷವಾದರೂ ಶ್ರೀನಿವಾಸಯ್ಯನವರು ತಮ್ಮ ಸಂಬಳವನ್ನೆಲ್ಲಾ ಅವರ ತಾಯಿ ಕೈಗೆ ಕೊಡುತ್ತಿದ್ದರು. ತಾಯಿ ಅವರೇ ಮನೆ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಬಡತನದಿಂದಲೇ ತಮ್ಮ ಕುಟುಂಬ ಸಾಗಿಸಿದ ಇವರ ತಾಯಿ 1972ರಲ್ಲಿ ಇಹಲೋಕ ತ್ಯಜಿಸಿದರು.

ಶಾಲಾ ಜೀವನ

ಇವರ ಶಿಕ್ಷಣ ಪ್ರಾರಂಭವಾದದ್ದು ಆರೇಳು ವರ್ಷದವರಾಗಿದ್ದಾಗ. ವೆಂಕಟಪ್ಪ ಮೇಷ್ಟ್ರ ಪ್ರೋತ್ಸಾಹದಿಂದ ಮೊದಲು ಮಲ್ಲೇಶ್ವರಂ ಡಿಸ್ಟ್ರಿಕ್ಟ್ ನಾರ್ಮಲ್ ಶಾಲೆಗೆ ಸೇರಿದರು. ಶಾಲೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಇವರು ವಿದ್ಯಾರ್ಥಿದೆಸೆಯಿಂದಲೂ ಶಿಸ್ತಿನಿಂದ ಬದುಕುವುದನ್ನು ರೂಢಿ ಮಾಡಿಕೊಂಡರು. ಗಣಿತದಲ್ಲಿ 100ಕ್ಕೆ 95 ಅಂಕ ಪಡೆದಿದ್ದರು. ವ್ಯಾಸಂಗಕ್ಕೆ 3ರೂಗಳ ವಿದ್ಯಾರ್ಥಿವೇತನ ಪಡೆಯುತ್ತಿದ್ದರು. ಚರ್ಚಾಸ್ಪರ್ಧೆ ಮತ್ತು ಇತರೆ ಸ್ಪರ್ಧೆಗಳಲ್ಲಿ ಬಹುಮಾನವನ್ನು ಗಳಿಸಿದ್ದರು. ಇವರ ಶಾಲೆಯ ಉಡುಪು ನಿಕ್ಕರ್, ಮೇಲೊಂದು ಅಂಗಿ, ಕೋಟ್ ಮತ್ತು ಟೋಪಿ, ಜೊತೆಗೆ ತಲೆಗೆ ಜುಟ್ಟು, ಕಿವಿಗೆ ತಟ್ಟು, ಹಣೆಗೆ ಮೂರು ನಾಮ, ತಲೆಗೆ ಎಣ್ಣೆ ಮೊದಲಾದವುಗಳನ್ನು ಅಪ್ಪಟ ಹಳ್ಳಿಹೈದನಂತೆ ಧರಿಸುತ್ತಿದ್ದರು. ಗ್ರಾಮೀಣ ಜಾನಪದ ಕಲೆಗಳಲ್ಲಿ ಇವರಿಗೆ ವಿಶೇಷ ಆಸಕ್ತಿ.

ಶ್ರೀ ಹೊ. ಶ್ರೀನಿವಾಸಯ್ಯ ಅವರು ತಂದೆಯ ನಿಧನದ ನಂತರ ಮನೆ ಬಾಡಿಗೆಯಿಂದ ಬರುತ್ತಿದ್ದ 24ರೂಗಳಲ್ಲೇ ಜೀವನ ಸಾಗಿಸಬೇಕಿತ್ತು. ಕ್ರಿಕೆಟ್ ಆಟ ಇವರಿಗೆ ಬಲು ಇಷ್ಟ. ಇದರ ಗೀಳು ಹೆಚ್ಚಿದ್ದನ್ನು ಗಮನಿಸಿದ ತಾಯಿ ಮನೆಗೆ ಸೇರಿಸದೆ ಶಿಕ್ಷಿಸಿದ್ದರಿಂದ ಕ್ರಿಕೆಟ್ ಹುಚ್ಚನ್ನು ಬಿಟ್ಟರು. ಸಂಸ್ಕೃತ ಹಾಗೂ ಹಿಂದಿಯಲ್ಲೂ ವಿಶೇಷ ಆಸಕ್ತಿ. ಇವರ ಶಿಕ್ಷಣದ ಮಾಧ್ಯಮ ಕನ್ನಡ. ಗೀತಾ ಸಂದೇಶದ ಬಗ್ಗೆ ಲೇಖನವನ್ನು ಬರೆಯುತ್ತಿದ್ದರು. ಅಬ್ರಹಾಂ ಲಿಂಕನ್, ಶಿವಾಜಿ ಮೊದಲಾದ ಗಣ್ಯರ ವಿಚಾರ ಓದಿ ರಾಷ್ಟ್ರಪ್ರೇಮ ಗಳಿಸಿಕೊಂಡರು. 'ದಿವಾಕರ' ಎಂಬ ಹಸ್ತಪತ್ರಿಕೆಯನ್ನು ಹೊರಡಿಸಿದ್ದರು. 4ವರ್ಷದ ನಂತರ ಮಲ್ಲೇಶ್ವರಂ ಬಾಯ್ಸ್ ಮಿಡಲ್ ಸ್ಕೂಲ್ ಸೇರಿದರು. ತಮ್ಮ ಶಿಕ್ಷಕರಾದ ಶ್ರೀ. ಎಂ. ಆರ್. ಶ್ರೀನಿವಾಸಮೂರ್ತಿ, ಶ್ರೀ ಎಲ್. ಸ್ವಾಮಿರಾವ್ ಅವರ ವ್ಯಕ್ತಿತ್ವವನ್ನು ಈಗಲೂ ಸ್ಮರಿಸುತ್ತಾರೆ.

ಬಾಲ್ಯದಲ್ಲಿ ಉತ್ತಮ ಹವ್ಯಾಸ

ಚಿಕ್ಕವಯಸ್ಸಿನಿಂದಲೂ ಚಿತ್ರ ಬರೆಯುವುದು, ಬಣ್ಣ ಹಾಕುವುದು ಇವರಿಗೆ ಇಷ್ಟ. ಹೈಸ್ಕೂಲಿನಲ್ಲಿದ್ದಾಗ ಇವರಿಗೆ ಬಹಳ ಅಚ್ಚುಮೆಚ್ಚಿನವರಾಗಿದ್ದ ಅಬ್ರಹಾಂ ಲಿಂಕನ್, ಟ್ಯಾಗೋರ್, ಮಹಾತ್ಮ ಗಾಂಧೀ ಇವರುಗಳ ಚಿತ್ರ ಬರೆಯುತ್ತಿದ್ದರು ಇವರಿಗೆ ಆಂಜನೇಯನ ಚಿತ್ರ ಬರೆಯುವ ಚಪಲ. ಭಗವದ್ಗೀತೆಯ ಚಿತ್ರ ಬರೆಯುತ್ತಿದ್ದುದನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ. ಪ್ರಾಣಿಗಳಲ್ಲಿ ಸಿಂಹ, ಜಿಂಕೆ, ಆನೆ, ನವಿಲು, ಹಂಸ ಇವುಗಳ ಚಿತ್ರಗಳನ್ನು ಉತ್ತಮವಾಗಿ ಬರೆಯುತ್ತಿದ್ದರು.

ಬಾಲ್ಯದಲ್ಲಿ ಇವರಿಗೆ ಸ್ವಾತಂತ್ರ್ಯದ ಆಕಾಂಕ್ಷೆ, ಸ್ವದೇಶಾಭಿಮಾನ. ಖಾಕಿ ತೊಟ್ಟ ಪೋಲೀಸಿನವರು ಮತ್ತು ಸೈನ್ಯದವರನ್ನು ಕಂಡರೆ ಯಾವಾಗಲೂ ದೂರ. ಆದರೆ ಇವರಿಗೆ ಶಿಸ್ತುಬೇಕು. ಅದಕ್ಕಾಗಿ ಆಗ ನಡೆಯುತ್ತಿದ್ದ ಸೇವಾದಳಕ್ಕೆ ಸೇರಿದರು. ಸ್ಕೌಟ್‌ನಲ್ಲಿ ಖಾಕಿಬಟ್ಟೆ ಹಾಕುತ್ತಿದ್ದುದರಿಂದ ಪರದೇಶೀಯರ ಅನುಕರಣೆ ಎಂದು ಅದರ ಕಡೆ ದೃಷ್ಟಿ ಕಡಿಮೆಯಾಯಿತು.

ಸ್ವಾತಂತ್ರ್ಯ ಹೋರಾಟಕ್ಕೆ ಇಳಿದ ಮೇಲೆ ಸಿನಿಮಾಗಳನ್ನು ನೋಡುವುದನ್ನು ಕಡಿಮೆ ಮಾಡಿದರು, ಕಡೆಗೆ ಸ್ವತಂತ್ರ್ಯ ಬರುವವರೆಗೆ ಚಿತ್ರಗಳನ್ನು ನೋಡುವುದಿಲ್ಲವೆಂದು ಶಪಥಮಾಡಿದರು. ನಾಟಕ ನೋಡುವುದರಲ್ಲಿ ಚಪಲ ಹೆಚ್ಚು. ಆಗ ಗುಬ್ಬಿ ವೀರಣ್ಣನವರ ನಾಟಕಗಳಿಗೆ ಇವರ ಮನೆ ಪಕ್ಕದಲ್ಲಿದ್ದ ವೀರಣ್ಣ ಕರೆದುಕೊಂಡು ಹೋಗಿ ತೋರಿಸುತ್ತಿದ್ದುದನ್ನು ನೆನೆಯುತ್ತಾರೆ. ಕೊನೆಯಲ್ಲಿ ನೆಲದ ಮೇಲೆ ಕುಳಿತುಕೊಳ್ಳಲು ನಾಲ್ಕಾಣೆ ಅದನ್ನು ಕೊಡಲೂ ನನಗೆ ಶಕ್ತಿ ಇಲ್ಲದ ಸ್ಥಿತಿಯನ್ನು ಈಗಲೂ ಸ್ಮರಿಸುತ್ತಾರೆ.

ಖಾದಿ ದಾರಿ

ಶ್ರೀ ಹೊ. ಶ್ರೀನಿವಾಸಯ್ಯ ಅವರು 12ನೇ ವಯಸ್ಸಿನಲ್ಲಿ ಖಾದಿ ಧರಿಸಲು ಪ್ರಾರಂಭಿಸಿದರು. ಇವರ ಖಾದಿ ವಸ್ತ್ರಧಾರಣೆ ಜೀವನದ ಪ್ರಾರಂಭಕ್ಕೆ ಪ್ರಭಾವ ಬೀರಿದವರೆಂದರೆ ಶ್ರೀ ಹೊ. ಶ್ರೀನಿವಾಸಯ್ಯ ಅವರ ಭಾವ. ಇವರ ಭಾವ ಹೊಲಿಸಿದ ಷರ್ಟಿನಿಂದ ಖಾದಿ ಬಟ್ಟೆ ಧರಿಸುವುದು



ಐ.ಸಿ.ಸಿ. ಅಧಿವೇಶನ ಬೆಂಗಳೂರಿನಲ್ಲಿ ನಡೆದಾಗ ಶ್ರೀ ಪುರುಷೋತ್ತಮದಾಸ್ ಟಂಡನ್ ಶ್ರೀ ಜವಾಹರ್‌ಲಾಲ್ ನೆಹರು, ಶ್ರೀ ಶೇಕ್ ಅಬ್ದುಲ್ಲ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ನಾ.ಸು. ಹರ್ಡೀಕರ್ ಶ್ರೀ ತಗಡೂರು ರಾಮಚಂದ್ರರಾವ್, ಶ್ರೀ ವಿ.ಎಸ್. ಕೃಷ್ಣ ಐಯ್ಯರ್ ಅವರ ಜೊತೆ ಹೊ. ಶ್ರೀನಿವಾಸಯ್ಯ

ಪ್ರಾರಂಭವಾಗಿ ಇಂದಿಗೂ ಖಾದಿ ಬದುಕನ್ನೇ ಅಪ್ಪಿಕೊಂಡು ಬದುಕುತ್ತಿದ್ದಾರೆ. ಶ್ರೀ ಹೊ. ಶ್ರೀನಿವಾಸಯ್ಯ ಅವರು ಸರಳ ಖಾದಿ ಉಡುಪಿನ, ಮೃದುಮಾತಿನ, ನಿರ್ಮಲ ನಗೆಯ, ನಿರಾಡಂಬರತೆಯ ಸಾಕಾರರೂಪ. ಅವರ ಖಾದಿ ಪ್ರೀತಿ ಎಷ್ಟಿದೆ ಎಂದರೆ ತಾವು ಅಧ್ಯಕ್ಷರಾಗಿರುವ ಮಲ್ಲೇಶ್ವರಂನ ಜಿ.ಇ.ಎಸ್ ಸಂಸ್ಥೆಯ ಎಲ್ಲ ಮಕ್ಕಳು ಮತ್ತು ಶಿಕ್ಷಕರು ವಾರಕ್ಕೆ ಎರಡು ದಿವಸ ಸ್ವಯಿಚ್ಛೆಯಿಂದ ಖಾದಿ ಧರಿಸುವಂತೆ ಪ್ರೇರೇಪಿಸಿ ಯಶಸ್ವಿಯಾಗಿದ್ದಾರೆ. ಅಲ್ಲದೆ ಕರ್ನಾಟಕ ರಾಜ್ಯದ ಕಾನೂನು ವಿಶ್ವವಿದ್ಯಾನಿಲಯದಲ್ಲಿ ಕುಲಪತಿಯಿಂದ ಜವಾನರವರೆಗೂ ಮತ್ತು ಶೇಷಾದ್ರಿ ಶಿಕ್ಷಣದತ್ತಿಯ 23,000 ಮಕ್ಕಳೂ ವಾರಕ್ಕೊಂದು ಬಾರಿ ಖಾದಿ ಧರಿಸುವಂತೆ ಮಾಡುವುದರಲ್ಲೂ ಇವರದ್ದು ಪ್ರಧಾನ ಪಾತ್ರವಿದೆ. ಇವರ ಪಾಲಿಗೆ ಖಾದಿ ಕೇವಲ ಮೈಮೇಲೆ ಧರಿಸುವ ಬಟ್ಟೆಯಲ್ಲ, ಅದರಲ್ಲಿ ಒಂದು ಉತ್ತಮ ಆದರ್ಶವಿದೆ. ಸರಳತೆಯ ಸಂದೇಶವಿದೆ, ಗ್ರಾಮೀಣ ಪ್ರದೇಶದ ಕೃಷಿಕರಿಗೆ ಆರ್ಥಿಕ ಶಕ್ತಿಗೆ ಆಧಾರವಾಗಿದೆ. ಒಟ್ಟಾರೆ ಉತ್ತಮ ಜೀವನದ ಮೌಲ್ಯ ಇದರಲ್ಲಿ ಅಡಕವಾಗಿದೆ.



ಅರುವತ್ತನೆಯ ಹುಟ್ಟುಹಬ್ಬದಂದು ಆದಿಚುಂಚನಗಿರಿ
ಶ್ರೀಗಳ ಜತೆ ಹೊ. ಶ್ರೀನಿವಾಸಯ್ಯ ದಂಪತಿ ಮತ್ತು ಪುತ್ರಿ ಶಶಿ



ಆಚಾರ್ಯ ವಿನೋಬಾ ಅವರಿಂದ ಗೀತಾ ಪ್ರವಚನ ಪುಸ್ತಕ ಪಡೆಯುತ್ತಿರುವುದು

ಸ್ವಾತಂತ್ರ್ಯ ಚಳವಳಿ

ಇಡೀ ವಿಶ್ವದಲ್ಲಿ ಸತ್ಯ ಮತ್ತು ಅಹಿಂಸೆಯನ್ನು ಪ್ರತಿಪಾದನೆ ಮಾಡಿ ನುಡಿದಂತೆ ನಡೆದು, ಜಗತ್ತಿಗೆ ಸ್ಫೂರ್ತಿಯಾದ ರಾಷ್ಟ್ರಪಿತ ಮಹಾತ್ಮಗಾಂಧಿ ಭಾರತದ ಸ್ವಾತಂತ್ರ್ಯ ಚಳವಳಿಯ ಪ್ರಮುಖ



ಪ್ಯಾರಿಸ್‌ನಲ್ಲಿದ್ದಾಗ ರಾಮಕೃಷ್ಣಾಶ್ರಮದ ಸ್ವಾಮಿ ಶ್ರೀ ಸಿದ್ಧೇಶ್ವರಾನಂದರ ಜತೆ ಡಾ॥ ಹೊ. ಶ್ರೀನಿವಾಸಯ್ಯನವರು

ನೇತಾರರಾಗಿದ್ದು ದೇಶದ ಕೋಟ್ಯಾಂತರ ಜನರು ಈ ಸಂಗ್ರಾಮದಲ್ಲಿ ದುಮುಕುವಂತೆ ಮಾಡಿದ್ದು ಒಂದು ಇತಿಹಾಸ. ಗಾಂಧೀಜಿ ಅವರಿಂದ ಪ್ರೇರಿತರಾದ ಯುವಸಾಗರದಲ್ಲಿ ಶ್ರೀ ಹೊ. ಶ್ರೀನಿವಾಸಯ್ಯ ಅವರು ಒಬ್ಬರು. ಶ್ರೀಯುತರು ಸ್ವಾತಂತ್ರ್ಯ ಚಳವಳಿಗೆ ಧುಮುಕಿದ್ದು ಆಕಸ್ಮಿಕ ಘಟನೆ. 1934ರಲ್ಲಿ ತಮ್ಮ 9ನೇ ವಯಸ್ಸಿನಲ್ಲಿ ರಾಷ್ಟ್ರಪಿತರನ್ನು ನೋಡುವ ಭಾಗ್ಯ ಹೊ. ಶ್ರೀನಿವಾಸಯ್ಯ ಅವರಿಗೆ ದೊರೆತು ಅವರಿಂದ ಸ್ಫೂರ್ತಿ ಪಡೆದರು. ಅಲ್ಲದೆ 21ನೇ ವಯಸ್ಸಿನಲ್ಲಿ ಚೆನ್ನೈನಲ್ಲಿ 3 ದಿವಸ ಅವರೊಡನೆ ಶಿಬಿರದಲ್ಲಿ ಉಳಿದಿದ್ದ ಘಟನೆ ನೆನೆದಾಗಲೆಲ್ಲ ಬಾವುಕರಾಗಿ ಇತರರೊಡನೆ ತಮ್ಮ ಅನುಭವ ಹಂಚಿಕೊಳ್ಳುವುದೆಂದರೆ ಅವರಿಗೆ ಮಹದಾನಂದ. ಆಚಾರ್ಯವಿನೋಬಾ ಅವರ ಸಂಪರ್ಕ, ಅವರಿಂದ ಗೀತಾಪ್ರವಚನ ಪುಸ್ತಕ ಪಡೆದಿದ್ದು, ಅವರೊಡನೆ ಭಾವಚಿತ್ರ ತೆಗೆಸಿಕೊಂಡಿದ್ದು, ವಿನೋಬಾ ಅವರಿಂದ ಹಸ್ತಾಕ್ಷರ ಪಡೆದ ಪ್ರಸಂಗಗಳನ್ನೂ ಸಹ ಅಷ್ಟೇ ಧನ್ಯತಾಭಾವದಿಂದ ಸ್ಮರಿಸುತ್ತಾರೆ.

1942ರ ನಂತರ ಸ್ವಾತಂತ್ರ್ಯ ಚಳವಳಿಯಲ್ಲಿ ಬಾಪು ಕರೆಯ ಮೇರೆಗೆ ಸಕ್ರಿಯವಾಗಿ ತೊಡಗಿಸಿಕೊಂಡರು. ಚಳವಳಿಯನ್ನು ತೀವ್ರಗೊಳಿಸುವ ಅಂಗವಾಗಿ ರಹಸ್ಯ ಪತ್ರಿಕೆಗಳ ಪ್ರಕಟಣೆ ಮತ್ತು ಹಂಚಿಕೆಯಲ್ಲಿ (ಭೂಗತ ಪತ್ರಿಕೆಗಳು) ಪ್ರಮುಖ ಪಾತ್ರ ವಹಿಸಿದರು. ಮಲ್ಲೇಶ್ವರಂ ಪ್ರೌಢಶಾಲೆ ಮತ್ತಿತರ ಕಡೆ ಬ್ರಿಟಿಷರ ಪ್ರತಿಭಟನೆಯ ಅಂಗವಾಗಿ ಕೈಬಾಂಬು ಇಡುವುದು, ಶಾಲಾಕಟ್ಟಡಕ್ಕೆ ಬೆಂಕಿ ಹಚ್ಚುವುದು ಮೊದಲಾದ ಚಟುವಟಿಕೆಗಳಲ್ಲಿ ತೊಡಗಿದ್ದರು. ಪೋಲಿಸರು ಅವರ ಮನೆಯನ್ನು 3ಸಾರಿ ಶೋಧಿಸಿದರು, ಆದರೆ ಏನೂ ಸಿಗಲಿಲ್ಲ. ಇವರು ಸ್ವಾತಂತ್ರ್ಯ ಚಳವಳಿಯ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದುದನ್ನು ಗಮನಿಸಿದ ಬ್ರಿಟಿಷ್ ಸರ್ಕಾರ ಶ್ರೀ ಹೊ. ಶ್ರೀನಿವಾಸಯ್ಯ ಅವರಿಗೆ 1942ರಲ್ಲಿ 6 ತಿಂಗಳು ಜೈಲು ಶಿಕ್ಷೆ ವಿಧಿಸಿತು. ಅಲ್ಲದೆ 1946ರಲ್ಲಿ ವಿದ್ಯಾರ್ಥಿಗಳ ವಂದೇಮಾತರಂ ಸಂಗ್ರಾಮದಲ್ಲಿಯೂ ಸಹ ಭಾಗವಹಿಸಿದ್ದರು, 1942–50ರವರೆಗೆ ವಿದ್ಯಾರ್ಥಿಕಾಂಗ್ರೆಸ್ ಮತ್ತು ಯುವಕಾಂಗ್ರೆಸ್ ಕಾರ್ಯದರ್ಶಿಯಾಗಿ, ಸದಸ್ಯರಾಗಿ ಹಾಗೂ ವಿದ್ಯಾರ್ಥಿನಿಲಯ ಸ್ಥಾಪಕ ಸದಸ್ಯರಾಗಿ ಸೇವೆ ಸಲ್ಲಿಸಿದರು. 1943ರಲ್ಲಿ ಚರಕಾಕೇಂದ್ರ ಸ್ಥಾಪನೆ,

ವಯಸ್ಕರ ಶಿಕ್ಷಣ ಕೇಂದ್ರ, ಖಾದಿ ಮತ್ತು ಗಾಂಧೀಸಾಹಿತ್ಯ ಮಾರಾಟ, 1943–44ರಲ್ಲಿ ವಿದ್ಯಾರ್ಥಿ ಸ್ವಯಂಸೇವಕರಾಗಿ ಆಹಾರ ಹಂಚಿಕೆಯಲ್ಲಿ ಸೇವೆ, ವಿದ್ಯಾರ್ಥಿಕಾಂಗ್ರೆಸ್ ಕಾರ್ಯದರ್ಶಿಯಾಗಿ ಗ್ರಾಮಸೇವಾ ಶಿಬಿರ, ಅದೇ ವರ್ಷ ಬಂಗಾಳದ ಕ್ಷಾಮ ಪೀಡಿತ ಜನರಿಗೆ ಹಣ ಸಂಗ್ರಹಣೆ, 1945–46ರಲ್ಲಿ ಹರಿಜನ ಸೇವಕ ಸಂಘದ ಕಾರ್ಯದರ್ಶಿ ಶ್ರೀ ಠಕ್ಕರ್‌ಬಾಪಾ ಅವರ ಸಂಪರ್ಕ, ಮೊದಲಾದವು ಇವರ ಸ್ವಾತಂತ್ರ್ಯ ಚಳವಳಿ ಘಟನೆಗಳು. ಇದಕ್ಕೆಲ್ಲಾ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ಮಾರ್ಗದರ್ಶನ ಮತ್ತು ಪ್ರೋತ್ಸಾಹ ಪ್ರಮುಖ ಕಾರಣ ಎಂದು ನೆನೆಯುತ್ತಾರೆ. ಮೇಲಿನ ವೈವಿಧ್ಯಮಯ ಚಟುವಟಿಕೆಗಳು ಶ್ರೀ ಹೊ. ಶ್ರೀನಿವಾಸಯ್ಯನವರು ಸ್ವಾತಂತ್ರ್ಯ ಚಳವಳಿಯಲ್ಲಿ ಎಷ್ಟು ಸಕ್ರಿಯವಾಗಿ ತೊಡಗಿಸಿಕೊಂಡು ಅಹರ್ನಿಶಿ ದುಡಿದಿದ್ದರು ಎಂಬುದನ್ನು ತಿಳಿಸುತ್ತವೆ. ಮತ್ತೊಂದು ವಿಶೇಷವಾದ ಸಂಗತಿ ಎಂದರೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಇವರು ಜೈಲು ಶಿಕ್ಷೆ ಅನುಭವಿಸಿದ್ದರೂ ಸಹ ಅದಕ್ಕಾಗಿ ಸರ್ಕಾರದಿಂದ ಯಾವುದೇ ಗೌರವ ಸಂಭಾವನೆಯನ್ನಾಗಲಿ, ಮಾಶಾಸನವನ್ನಾಗಲಿ ಪಡೆಯದೆ ನಿಸ್ವಾರ್ಥದ ದೇಶ ಸೇವೆಯಲ್ಲಿ ಶ್ರೀಯುತರು ಒಂದು ಆದರ್ಶವನ್ನು ಹಾಕಿಕೊಟ್ಟಿದ್ದಾರೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಸ್ವಾತಂತ್ರ್ಯಕ್ಕಾಗಿ ಚಳವಳಿಯಲ್ಲಿ ವಹಿಸಿದ ಪಾತ್ರ ಬಹಳ ಮುಖ್ಯವಾದುದು. ಎಲ್ಲಿ ನೋಡಿದರೂ ಮೆರವಣಿಗೆ, ಜೈಕಾರ, ದಸ್ತಗಿರಿಗಳ ಪ್ರವಾಹ ಶ್ರೀ ಹೊ. ಶ್ರೀನಿವಾಸಯ್ಯ ಅವರು ಸಹ ತಮ್ಮ ತಾಯಿಗೆ ಗೊತ್ತಾಗದಂತೆ ಎಲ್ಲದರಲ್ಲೂ ಭಾಗವಹಿಸುತ್ತಿದ್ದರು. ಶ್ರೀ ಹೊ. ಶ್ರೀನಿವಾಸಯ್ಯ ಅವರು ತಮ್ಮ ತಾಯಿಯವರನ್ನು ಎಲ್ಲರಂತೆ ದೇಶಕ್ಕೋಸ್ಕರ ನಾವೇಕೆ ಜೈಲಿಗೇಕೆ ಹೋಗಬಾರದು? ಎಂದು ಪ್ರಶ್ನಿಸುತ್ತಿದ್ದರು. ಜೈಲಿಗೆ ಹೋಗಕೂಡದು, ಹೋಗುವುದಾದರೆ ಮೊದಲೇ ಹೇಳಿಬಿಡು ಈಗಲೇ ಪ್ರಾಣ ಕಳೆದುಕೊಳ್ಳುತ್ತೇನೆ ಎಂದು ಅವರ ತಾಯಿ ಕಣ್ಣೀರು ಹಾಕಿದ್ದರು. ಶ್ರೀ ಹೊ. ಶ್ರೀನಿವಾಸಯ್ಯ ಅವರು ಸ್ನೇಹಿತರಿಗೆ ಮೊದಲೇ ಜೈಲಿಗೆ ಹೋಗುತ್ತೇನೆ ಎಂದು ಹೇಳಿದ್ದರು ಚಳವಳಿಯಲ್ಲಿ ಭಾಗವಹಿಸುವ ಆಶ್ವಾಸನೆಯನ್ನು ನೀಡಿದ್ದರು. ಅವರೇ ಹೇಳಿದಂತೆ "ಸ್ನೇಹಿತ ರಾಜಾರಾಂ ಕಳ್ಳಪತ್ರಿಕೆ ಹಂಚುವುದನ್ನು ನೀನು ನೋಡಿಕೋ ಅಂತ ಹೇಳಿದ. ಕಳ್ಳಪತ್ರಿಕೆ ಹಂಚುವುದರಲ್ಲಿ ನನಗೆ

ಅನುಭವವಿತ್ತು. ನಾನು ಆಗಲೇ ಹಂಚುತ್ತಿದ್ದೆ. ಆಗ ಯುವಕರಾಗಿದ್ದ ನಮಗೆ ಸ್ವಾತಂತ್ರ್ಯ ಪಡೆಯುವ ಹಂಬಲದಿಂದ ಸತ್ತರೂ ಚಿಂತೆಯಿಲ್ಲ ಎಂಬ ಧ್ಯೇಯದಿಂದ ಸ್ಫೋಟಕ ವಸ್ತುಗಳನ್ನು ಮೈದಾನದಲ್ಲಿ ಮಣ್ಣಿನಲ್ಲಿ ಹೂತಿಡುತ್ತಿದ್ದೆವು. ಬೇಕಾದಾಗ ತೆಗೆದುಕೊಂಡು ಹೋಗುತ್ತಿದ್ದೆವು. ಇದರಲ್ಲಿ ಹೆಚ್ಚು ಅನುಭವವಿದ್ದದ್ದು ನಾಗರಾಜ, ಮುಕುಂದ ಎಂಬ ಸ್ನೇಹಿತರಿಗೆ. ಒಮ್ಮೆ ಇಂಟರ್ ಮೀಡಿಯೆಟ್ ಕಾಲೇಜಿಗೆ (ಈಗಿನ ಸರ್ಕಾರಿ ಕಲಾ ಕಾಲೇಜು) ಒಂದು ಬಾಂಬ್ ಇಡಲಾಯಿತು. ಕೊಠಡಿಗೆ ಹೋದ ಆ ವೇಳೆಗೆ ಸರಿಯಾಗಿ ಈ ಸ್ಫೋಟಕ ವಸ್ತು ಸಿಡಿಯಿತು. ಕೊಠಡಿ ಬಾಗಿಲು, ಅಲ್ಮೇರಾದ ಬಾಗಿಲು ಚೂರು, ಚೂರು ಆಯಿತು" ಎಂದು ತಮ್ಮ ಅನುಭವ ಹಂಚಿಕೊಳ್ಳುತ್ತಾರೆ..



ಶೇಷಾದ್ರಿಪುರದ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ
ಕೆಂಗಲ್ ಹನುಮಂತಯ್ಯ ಅವರು ಬಂದಾಗ

ಡಾ॥ ಹೊ. ಶ್ರೀನಿವಾಸಯ್ಯ ಅವರು ಮತ್ತೊಂದು ಘಟನೆಯನ್ನು ಹೀಗೆ ಸ್ಮರಿಸುತ್ತಾರೆ "ಒಂದು ದಿನ ರಾತ್ರಿ 12 ಗಂಟೆಗೆ ಪೋಲಿಸರು ಬಂದು ದಸ್ತಗಿರಿ ಮಾಡಿ ನಮ್ಮನ್ನು ಜೈಲಿಗೆ ಹಾಕಿದರು. 5–6 ತಿಂಗಳಾದ ಮೇಲೆ ಬಿಟ್ಟರು. ತಾಯಿಯವರು ಈ ಘಟನೆಯಿಂದ ಹೆದರಿದ್ದಾರೆ

ಅಂದು ಕೊಂಡಿದ್ದೆ, ಆದರೆ ಅವರು ಧೈರ್ಯವಾಗಿದ್ದರು. ಪತ್ರಿಕೆಗಳಿಗೆ ಸುಖತೀರ್ಥ, ವ್ಯಾಸತೀರ್ಥ ಎಂಬುವರು ಮುಖ್ಯಸ್ಥರಾಗಿ ನಿಂತು ಗುಪ್ತಪತ್ರಿಕೆ ಹೊರಡಿಸುತ್ತಿದ್ದರು. ಕಡೆಗೆ ನಾವು ಈ ಚಳವಳಿಯನ್ನು ಬಿಟ್ಟು ಗಾಂಧೀಜಿಯವರ ರಚನಾತ್ಮಕ ಕಾರ್ಯ ಮಾಡಲು ಗಮನಹರಿಸಿದೆವು. ಚರಕಾ ಸಂಘದವರ ಸಹಾಯದಿಂದ ಚರಕಾ ತರಗತಿ ಪ್ರಾರಂಭಿಸಿದೆವು. ಮಲ್ಲೇಶ್ವರದಲ್ಲಿ ತರಗತಿ ಪ್ರಾರಂಭಿಸಿ, ತಕ್ಕಲಿಯಿಂದ ನೂಲು ತೆಗೆಯುವುದು ಹೇಳಿಕೊಟ್ಟೆವು. ಚರಕಾ ತಂದು ಮನೆಮನೆಗೂ ಮಾರಲಾಯಿತು. ಇಲ್ಲಿ ಬಡವರಿಗೆ ರೇಷನ್‌ಕಾರ್ಡ್ ಕೊಡಿಸುವುದರಿಂದ ಹಿಡಿದು, ಅಕ್ಕಿ, ರಾಗಿ ಇವುಗಳ ಕ್ರಮಬದ್ಧ ಹಂಚಿಕೆಯ ನಮ್ಮ ಕಾರ್ಯಗಳನ್ನು ಆಗಿನ ಪ್ರಸಿದ್ದ ಪತ್ರಿಕೆ 'ವಿಶ್ವ ಕರ್ನಾಟಕ'ದ ಸಂಪಾದಕರಿಗೆ ತಿಳಿಸಿದೆವು. ನಾವು ಮಲ್ಲೇಶ್ವರ ಅಂತ ಹೇಳಿದ ಕೂಡಲೇ ತಾನೂ ಮಲ್ಲೇಶ್ವರದಲ್ಲೇ ಇರೋದು ಎಂದು ವಿಳಾಸಕೊಟ್ಟು ರಾತ್ರಿ ಬಂದು ನೋಡುವಂತೆ ಹೇಳಿದರು. ನಮಗೆ ಸಂತೋಷವಾಯಿತು. ಹೊರಗಡೆ ಬಂದೆವು. ಅಲ್ಲಿಯ ಕೆಲಸಗಾರನನ್ನು ಸಂಪಾದಕರ ಹೆಸರೇನು ಎಂದು ವಿಚಾರಿಸಿದೆವು. ಸಂಪಾದಕರನ್ನೂ ನೇರವಾಗಿ ಕೇಳಲು ನಮಗೆ ಹೆದರಿಕೆ. ನಂತರ ತಿಳಿಯಿತು, ಅವರೇ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರು ಎಂದು. ಅಷ್ಟು ಹೊತ್ತಿಗೆ ಇವರ ಪುಸ್ತಕಗಳಾದ ಪರ್ಣಕುಟಿ, ವಾರ್ಧಾಯಾತ್ರೆ ಎರಡನ್ನೂ ನಾನು ಓದಿದ್ದೆ. ಶರ್ಮ ಅವರ ಕೈ ಬರವಣಿಗೆಯ ವಿಧಾನ, ರಚನೆ, ಗಾಂಧೀಜಿಯವರನ್ನು ಪರಿಚಯಿಸಿದ ವಿಧಾನ ನನಗೆ ಬಹಳ ಮೆಚ್ಚುಗೆಯಾಗಿತ್ತು. ನಾಳೆ ಪತ್ರಿಕೆಯಲ್ಲಿ ಬಂದ ಮೇಲೆ ಪುನಃ ನೋಡಿದರಾಯಿತು ಅಂತ ಹೊರಟೆವು" ಎಂದು ತಿಳಿಸುತ್ತಾ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ಪ್ರಥಮ ಪರಿಚಯದ ಘಟನೆಯನ್ನು ವಿವರಿಸಿದರು.

ಗಾಂಧೀ ಚಟುವಟಿಕೆಗಳು

ಸ್ವಾತಂತ್ರ್ಯದ ಆಕಾಂಕ್ಷೆ, ಕನಸು, ಆ ಉಡುಪು, ಓಡಾಟ, ಸಾಹಸ, ಪ್ರಭಾಪೇರಿಗಳ ಮೆರವಣಿಗೆ, ಸಭೆ, ವಿಧ್ವಂಸಕ ಸಾಹಸ ಕಾರ್ಯಗಳು, ಬಾಂಬು ಸಿಡಿತ, ನಿಗೂಢ ಪತ್ರಿಕೆ ತಯಾರಿಕೆ, ಹಂಚಿಕೆ ಒಂದೊಂದು ಬಹು ರೋಮಾಂಚಕ ಸಂಗತಿಗಳು. ಇಷ್ಟಾದರೂ ಗಾಂಧೀ ಮಾರ್ಗದಲ್ಲಿ ನಡೆಯುವ ರೀತಿ ಮತ್ತೊಂದು ಕಡೆ. ಚರಕಾ ತರಗತಿ, ಹಿಂದಿ ತರಗತಿ

ಮುಂತಾದವು. ಕಾಲೇಜಿಲ್ಲದೆ ಅಲೆಯುವ ಹುಡುಗರನ್ನು ಕಲೆಹಾಕಿ ಏನಾದರೂ ರಚನಾತ್ಮಕ ಕಾರ್ಯ ಮಾಡಬೇಕೆಂದು ಹಿರಿಯರಾದ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರನ್ನು ಸಂಪರ್ಕಿಸುವುದಕ್ಕೆ ಶ್ರೀ ಮಂಜುನಾಥ, ಶ್ರೀಕೃಷ್ಣಸ್ವಾಮಿ ಮುಂತಾದವರು ಯೋಜನೆ ಹಾಕಿದರು. ಗಜೇಂದ್ರ (ಸ್ವಾಮಿ ವಿಶ್ವಾನಂದ), ರಾಮಚಂದ್ರ, ರಾಮಮೂರ್ತಿ, ಚಂದ್ರಶೇಖರ, ಸಿ.ಆರ್. ರಾಮು, ಕೃಷ್ಣಸ್ವಾಮಿ ಮುಂತಾದ ಮಾರಾಟ



ಶ್ರೀ ಕುವೆಂಪು ದರ್ಶನ ಹೊ. ಶ್ರೀನಿವಾಸಯ್ಯ ಕುಟುಂಬ ಹಾಗೂ ಮಿತ್ರರು

ಮಾಡುತ್ತಿದ್ದರು. ಹೀಗೆ ಪ್ರಾರಂಭವಾಯಿತು ಇವರ ಗಾಂಧೀಸಾಹಿತ್ಯ ಸಂಘ. 1943ರಲ್ಲಿ ಗಾಂಧೀಜಯಂತಿ ಮಾಡಲು ಶರ್ಮಾಜೀ ಇವರಿಗೆ ಹೇಳಿದರು. ಕಾರ್ಯಕ್ರಮ ಬೆಳಿಗ್ಗೆ ಪ್ರಾರ್ಥನೆಯಿಂದ ಪ್ರಾರಂಭ ವಾಗುತ್ತಿತ್ತು. ಹುಡುಗರೆಲ್ಲ ಅಲ್ಲೇ ಮಲಗುತ್ತಿದ್ದರು. ಉಳಿದವರು ಪ್ರಾರ್ಥನೆಗೆ ಬೆಳಿಗ್ಗೆಯೇ ಮನೆಯಿಂದ ಬರುತ್ತಿದ್ದರು, ಆಶ್ರಮದ ಮಾದರಿ ಭಜನೆ. ಮದ್ಯಾಹ್ನ ಒಂದು ಗಂಟೆಗೆ ನೂಲುವುದು. ಸಂಜೆ ಪ್ರಾರ್ಥನೆ, ಭಾಷಣ. ದಸರಾ ಕಾಲ ಬೇರೆ. ಹುಡುಗರಿಗೆ ಸಡಗರವೋ ಸಡಗರ. ಖಾದಿ ಬಟ್ಟೆ ತಂದು ಮನೆಮನೆಗೆ ಮಾರುವುದು. ಸುಮಾರು 2, 3 ಸಾವಿರ ರೂಗಳಷ್ಟು ಬಟ್ಟೆ ಮಾರಾಟವಾಗುತ್ತಿತ್ತು. ನೂಲುವ ಸ್ಪರ್ಧೆ, ರಾಷ್ಟ್ರಗೀತೆಯ ಸ್ಪರ್ಧೆಯನ್ನು ಏರ್ಪಡಿಸುತ್ತಿದ್ದರು. ಒಂದು

ಸಾರಿ ಏಪ್ರಿಲ್‌ನಲ್ಲಿ ರಾಷ್ಟ್ರೀಯವಾರ ಆಚರಣೆಯ ರಚನಾತ್ಮಕ ಕಾರ್ಯದಲ್ಲಿ ಠಕ್ಕರ್‌ಬಾಪಾ ಅವರ ಭಾಷಣ ಕೇಳಿ ಸ್ಫೂರ್ತಿಗೊಂಡರು. ಶ್ರೀ ಗೋಪಾಲಸ್ವಾಮಿಯವರ ಸಲಹೆಯಂತೆ ಒಂದು ಸಾರಿ ಮಲ್ಲೇಶ್ವರ ಕೋ ಆಪರೇಟಿವ್ ಬ್ಯಾಂಕಿನ ವರದಿಗಳನ್ನು ಸದಸ್ಯರಿಗೆ ತಲುಪಿಸಿ ಮೂವತ್ತರಿಂದ ಮೂವತ್ತೈದು ರೂ ಸಂಪಾದಿಸಿದರು. ಇದೆಲ್ಲವನ್ನು ಸಂಘದ ಕಾರ್ಯಕ್ರಮಗಳಿಗೆ ವಿನಿಯೋಗಿಸುತ್ತಿದ್ದರು.



ಆದಿಚುಂಚನಗಿರಿ ಕ್ಷೇತ್ರದಲ್ಲಿ ಹಿರಿಯ ಸಾಹಿತಿಗಳೊಡನೆ
1. ಶ್ರೀ ಕೆ.ಟಿ. ವೀರಪ್ಪ 2. ಡಾ॥ ಸಿ.ಪಿ.ಕೆ. 3. ಶ್ರೀ ಮಾಸ್ತಿ 4. ಶ್ರೀಗಳು
5. ಶ್ರೀ ನಿಟ್ಟೂರು ಶ್ರೀನಿವಾಸರಾವ್ 6. ಶ್ರೀ ಪು.ತಿ. ನರಸಿಂಹಾಚಾರ್
7. ಶ್ರೀ ಎಂ.ವಿ. ಸೀತಾರಾಮಯ್ಯ

1943ರಲ್ಲಿ ಬಡವರಿಗೆ ಅನ್ನದಾನ ವ್ಯವಸ್ಥೆಯಲ್ಲಿ ತೊಡಗಿದರು. ಇದಕ್ಕೆ ಜನರು ಕಾಣಿಕೆ ಹಾಗೂ ಧನಧಾನ್ಯ ನೀಡಿದರು. ಸುಮಾರು ಒಂದೂವರೆ ಸಾವಿರ ಜನಕ್ಕೆ ಅನ್ನದಾನದ ಖರ್ಚಾಯಿತು. ಖಾದಿ, ಪುಸ್ತಕ, ಮಾರಾಟ ಜೇರೆ. ಇತರ ಸಂಘಗಳೊಡನೆ ಸಹಕಾರ ಪಡೆದು ಗಾಂಧೀಜಯಂತಿ ಆಚರಿಸಿದರು. ನಾಯಕರು ಬಂದಾಗ ಅವರ ಭಾಷಣದ ವ್ಯವಸ್ಥೆ ಮೊದಲಾದವುಗಳು ಸಂಘದ ಆಶ್ರಯದಲ್ಲಿ ರಾಮಮಂದಿರದಲ್ಲಿ ನಡೆಯುತ್ತಿದ್ದವು.

1942ರ ರಾಷ್ಟ್ರೀಯ ಆಂಧೋಲನದಲ್ಲಿ ಮುಖ್ಯವಾದ ಕಾರ್ಯಕ್ರಮ ಎಂದರೆ ನಿಗೂಢ ಪತ್ರಿಕೆಗಳನ್ನು ಹೊರಡಿಸುವುದು. ಮಲ್ಲೇಶ್ವರ ವೃತ್ತದ ಹತ್ತಿರ ಪೊಲೀಸ್ ಠಾಣೆ. ಅದರ ಪಕ್ಕದ ಮಹಡಿಯ ಮೇಲೆ ಒಂದು ಟೈಪ್ರೈಟಿಂಗ್ ಸಂಸ್ಥೆ. ಅಲ್ಲಿಯೇ ಇವರ ಪತ್ರಿಕೆಯ ಮುದ್ರಣದ ಕಚೇರಿ. ಪತ್ರಿಕೆ ಹಂಚುವುದು ರಾತ್ರಿ ವೇಳೆ. ಡಾ॥ ಹೊ. ಶ್ರೀನಿವಾಸಯ್ಯ ಅವರು ನಿಕ್ಕರ್ ಒಳಗಡೆ ಪತ್ರಿಕೆ ಮಡಚಿಟ್ಟು ಗುರುತು ಇದ್ದವರಿಗೆ ಒಂದೊಂದನ್ನು ಕಳ್ಳತನದಲ್ಲಿ ಹಂಚುತ್ತಿದ್ದರು. ಮೂರು ಕಾಸು, ಒಂದಾಣೆ ಕೊಡುತ್ತಿದ್ದರು. ಪತ್ರಿಕೆಯನ್ನು ಹಂಚಬೇಕಾದರೆ ಇವರ ಪ್ರಧಾನ ಕಛೇರಿ ವೆಂಕಟೇಶ ಸ್ಟೋರ್ಸ್. ಇದರ ಯಜಮಾನ ವೆಂಕಟಾಚಾರ್, ಅವರು ಆಗ ಬ್ರಹ್ಮಚಾರಿ. ಅಂಗಡಿಗೆ ಹೋದವರಿಗೆಲ್ಲಾ ಅವರು ಕಾಫಿ ಕೊಡುತ್ತಿದ್ದರು. ಡಾ॥ ಹೊ. ಶ್ರೀನಿವಾಸಯ್ಯ ಅವರು ಒಂದು ಸಾರಿ ಪತ್ರಿಕೆ ಕೊಟ್ಟು



ಪತ್ನಿ ಶ್ರೀಮತಿ ಜಯಲಕ್ಷ್ಮಮ್ಮ ಅವರೊಡನೆ 2013ರಲ್ಲಿ

ಹೋದಾಗ. ಅಲ್ಲಿಗೆ ಸಿಐಡಿ ಬಂದ. ಅಂಗಡಿ ಶೋಧಿಸಿದ. ಪತ್ರಿಕೆ ಸಿಕ್ಕಿತು. ಅವರನ್ನು ಬಂಧಿಸಿದರು. ಐದಾರು ತಿಂಗಳು ಜೈಲು ಶಿಕ್ಷೆ ವಿಧಿಸಿದರು. ಆಗ ಡಾ॥ ಹೊ. ಶ್ರೀನಿವಾಸಯ್ಯ ಅವರು ಅಂಗಡಿ ನೋಡಿಕೊಂಡು ವ್ಯಾಪಾರ ಮಾಡಿದ್ದುಂಟು.

ಪತ್ರಿಕೆಯನ್ನು ಮನೆಮನೆಗೆ ಹಂಚುವುದು ರಾತ್ರಿ ವೇಳೆಯಲ್ಲಿ. ಇವರು ಮನೆಯ ವರಾಂಡದಲ್ಲಿ ಮಲಗುತ್ತಿದ್ದರು. ಡಾ॥ ಹೊ. ಶ್ರೀನಿವಾಸಯ್ಯ ಅವರು ತಮ್ಮ ತಾಯಿ ಕೊಠಡಿ ಬಾಗಿಲು ಹಾಕಿ ಮಲಗಿದ ಮೇಲೆ ನಿಶ್ಯಬ್ದವಾಗಿ ಎದ್ದು, ರಾತ್ರಿಯೆಲ್ಲಾ ಪತ್ರಿಕೇನ ಹಂಚಿ, ರಾತ್ರಿ ಒಂದೋ, ಎರಡೋ ಗಂಟೆಗೆ ಬಂದು ಮಲಗುತ್ತಿದ್ದರು.

ಡಾ॥ ಹೊ. ಶ್ರೀನಿವಾಸಯ್ಯ ಅವರು ಒಂದು ದಿನ ಪತ್ರಿಕೆಯನ್ನು ಗೋಂದು ಹಾಕಿ ಕಂಬಕ್ಕೆ ಅಂಟಿಸುತ್ತಿದ್ದರು. ಚೀಟಿ ಅಂಟಿಸಿದ ಕೂಡಲೇ ಅವರನ್ನು ಹಿಡಿಯಲು ಒಬ್ಬ ಮೋರಿಯಿಂದ ಎದ್ದ. ಸ್ವಲ್ಪ ಸುಳಿವು ತಿಳಿದ ಕೂಡಲೇ ಡಾ॥ ಹೊ. ಶ್ರೀನಿವಾಸಯ್ಯ ಅವರು ವೇಗವಾಗಿ ಓಡಿದರು. ಇಬ್ಬರು ಪೋಲಿಸಿನವರು ಇವರನ್ನು ಹಿಂಬಾಲಿಸಿದರು. ಗಿಡದ ಮರೆಯಲ್ಲಿದ್ದ ಡಾ॥ ಹೊ. ಶ್ರೀನಿವಾಸಯ್ಯ ಅವರು ಪೋಲಿಸರಿಗೆ ಕಾಣಲಿಲ್ಲ. ಎದ್ದರೆ ಮನೆಯವರಿಗೆ ಗೊತ್ತಾಗುತ್ತೆ ಅಂತ ಅನಂತರ ಕಾಂಪೌಂಡು ಪಕ್ಕದಲ್ಲಿ ಗೊತ್ತಾಗದಂತೆ ಬಂದು ಮನೆ ಸೇರಿದರು.

ಸ್ವಾತಂತ್ರ್ಯದ ಸಂಭ್ರಮ

ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂದಾಗ ಇವರೆಲ್ಲರ ಆನಂದ ಹೇಳತೀರದು. ಖಾದಿಬಟ್ಟೆ ತೊಡುವುದು ಇವರ ಧ್ಯೇಯ. ವ್ಯರ್ಥವಾಗಿ ಒಂದು ಕಾಸೂ ವ್ಯಯಮಾಡುತ್ತಿರಲಿಲ್ಲ. ದೇಶಪ್ರೇಮ, ರಾಷ್ಟ್ರೀಯ ನಾಯಕರದೇ ಹಂಬಲ. ಅವರ ಭಾಷಣಗಳನ್ನು ಓದದೆ ಇರುತ್ತಿರಲಿಲ್ಲ. ಮಹಾತ್ಮ ಗಾಂಧೀಜಿಯವರ ಆತ್ಮಕಥೆ, ಸಿದ್ಧವನಹಳ್ಳಿ ಕೃಷ್ಣಶರ್ಮರ ವಾರ್ಧಾಯಾತ್ರೆ, ಪರ್ಣಕುಟಿ, ರಂಗನಾಥ ದಿವಾಕರರ ಬಾಪೂ, ಹೀಗೆ ಗಾಂಧೀಜಿ ಮತ್ತು ರಾಷ್ಟ್ರೀಯ ಸಾಹಿತ್ಯ ಓದುವುದು, ಇತರರಿಗೆ ಓದಿಸುವುದು ಇವರ ಹವ್ಯಾಸವಾಗಿತ್ತು.

ಗಾಂಧೀ ದರ್ಶನ

ಗಾಂಧೀಜಿಯವರು ಮದರಾಸಿಗೆ 1946ರಲ್ಲಿ, ಹಿಂದೀ ಪ್ರಚಾರ ಸಮ್ಮೇಳನಕ್ಕೆ ಬಂದಾಗ ಡಾ॥ ಹೊ. ಶ್ರೀನಿವಾಸಯ್ಯ ಮತ್ತು ಎಂ.ಎಸ್.ಕೆ. ಮದರಾಸಿಗೆ ಹೋಗಿದ್ದರು. ಗಾಂಧೀಜಿ ಇಳಿದುಕೊಂಡಿದ್ದ ಸ್ಥಳ ಹಾಗೂ

ಸಣ್ಣಸಣ್ಣ ಸಭೆ ಉದ್ದೇಶಿಸಿ ಮಾತನಾಡುತ್ತಿದ್ದ ಸ್ಥಳಕ್ಕೆ ಹೋಗುತ್ತಿದ್ದರು. ಸಂಘಟಕರು ಒಳಕ್ಕೆ ಹೋಗಲು ಪಾಸ್ ಕೇಳುತ್ತಿದ್ದರು. ಆಗ ಶ್ರೀ ಎಚ್.ಸಿ. ದಾಸಪ್ಪನವರು ಗಾಂಧೀಜಿಯವರ ಜೊತೆಯಲ್ಲಿದ್ದಾರೆ ಅಂತ ಇವರಿಗೆ ಗೊತ್ತಾಯಿತು. ಪತ್ರಿಕೆಯಲ್ಲೂ ಓದಿದ್ದರು. ಅವರನ್ನು ಕಂಡು ಒಂದು ಪಾಸ್ ಪಡೆದರು. 3 ದಿನ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದರು. ಗಾಂಧೀಜಿಯವರು ಒಂದು ಸಭೆ ಮುಗಿಸಿಕೊಂಡು ಮತ್ತೊಂದು ಸಭೆಗೆ ಹೊರಟಿದ್ದರು. ಸಮ್ಮೇಳನದಲ್ಲಿ ಚಿಕ್ಕ ಸಭೆ ಅಂದರೆ ಗೊತ್ತೇ ಇದೆ. ಗಾಂಧೀಜಿಯವರು ಹಿಂದೀ ವಿದ್ಯಾರ್ಥಿಗಳ ಸಭೆಯನ್ನು ಕುರಿತು ಮಾತನಾಡಿದರು. ಗಾಂಧೀಜಿಯವರನ್ನು ಹತ್ತಿರದಿಂದ ನೋಡುವ ಸುಯೋಗ ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ದೊರಕಿದ್ದು ಆಗಲೇ. ಗಾಂಧೀಜಿ ಅವರ ಅಂದಿನ ಸಭೆಯಲ್ಲಿ ಸುಮಾರು ಅರ್ಧಗಂಟೆ ಮಾತಾಡಿದರು. ನಗುತ್ತಾ ಗಾಂಧೀಜಿಯವರು ಮಾತನಾಡಿದ ದೃಶ್ಯ ಅವರ ಕಣ್ಮುಂದೆ ನಿಂತಂತಿತ್ತು. ಅದಾದ ನಂತರ, ಸಂಜೆ ಪ್ರಾರ್ಥನಾ ಸಭೆಗೂ ಹಾಜರಾದರು. ಅಲ್ಲಿ ಲಕ್ಷಾಂತರ ಜನ ಸೇರಿದ್ದರು. ಗಾಂಧೀಜಿ ಬಂದ ತಕ್ಷಣ ಸಭೆ ನಿಶ್ಶಬ್ದ. 'ರಾಮಧುನ್' ಪ್ರಾರಂಭವಾಗಿ ಪೂರ್ತಿ ಭಜನೆ ನಡೆಸಿದರು. ಬೆಂಗಳೂರಿಗೆ ಬಂದು ಶರ್ಮಾಜಿ ಹತ್ತಿರ ವರದಿ ಸಲ್ಲಿಸಿದರು. (ಡಾ॥ ಹೊ. ಶ್ರೀನಿವಾಸಯ್ಯ ಅವರು ಸ್ನೇಹಿತ ಎಂ.ಎಸ್.ಕೆ. ರಾಮುಜೊತೆಯಲ್ಲಿ ನೆಹರು ಅವರ ದರ್ಶನ ಪಡೆದಿದ್ದು ಮದರಾಸಿನಲ್ಲಿ.)

1934ರಲ್ಲಿ ಮಲ್ಲೇಶ್ವರದಲ್ಲಿ ಗಾಂಧಿ

ಒಮ್ಮೆ ಮಲ್ಲೇಶ್ವರಕ್ಕೆ ಗಾಂಧೀಜಿಯವರನ್ನು ಕರೆಸಿದರು. ಶ್ರೀ ಹೊ. ಶ್ರೀನಿವಾಸಯ್ಯ ಅವರು ಆಗ ಸುಮಾರು ಒಂಭತ್ತು ವರ್ಷದವರು. ಅಂದು ಶಾಲೆಗೆ ರಜೆ. ಮಲ್ಲೇಶ್ವರಂ ಅಸೋಸಿಯೇಷನ್ ಮೈದಾನದಲ್ಲಿ ಸಭೆ. ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಅನ್ನದಾನ. ಗಾಂಧೀಜಿಯವರು ಅನ್ನದಾನ ಮಾಡುವ ಬದಲು ಆ ಹಣವನ್ನು ನಿಧಿಗೆ



ಟೋಕಿಯೋದಲ್ಲಿ ಸರ್ವೋದಯ ಕಾರ್ಯಕರ್ತರಾದ
ಶ್ರೀಮತಿ ಶ್ರೀ ಒಕಮಾತೋ ಅವರೊಡನೆ

ಕೊಡಿ ಎಂದು ಹೇಳಿದ್ದರು. ಅವರಿಗಾಗಿ ತಂದಿದ್ದ ಹೂ, ಹಣ್ಣುಗಳನ್ನು ಅಲ್ಲೇ ವಿನಿಮಯ ಮಾಡಿಸಿದರು. ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ಸಭೆ ನಡೆಯಿತು. ಅನೇಕರು ಹೋಗಿ ಅವರಿಗೆ ನಮಸ್ಕಾರ ಮಾಡಿ ಬರುತ್ತಿದ್ದರು. ಯಾರೇ ನಮಸ್ಕರಿಸಲಿ, ಅವರ ಕೈಯಲ್ಲಿ ಉಂಗುರ, ಹೆಂಗಸರಾದರೆ ಅವರ ಒಡವೆ, ಕೊಡುವಂತೆ ಗಾಂಧೀಜಿ ಕೇಳುತ್ತಿದ್ದರು. ಹೆಣ್ಣುಮಕ್ಕಳು ಎರಡು ಕೈಜೋಡಿಸಿ ನಮಸ್ಕರಿಸಿದರೆ, ಅವರನ್ನು ಕೇಳುತ್ತಿದ್ದುದು, ಅವರ ಚಿನ್ನದ ಬಳೆ, ಒಡವೆಗಳು. ಕೆಲವರು ಕೊಡುತ್ತಿದ್ದರು.ಡಾ॥ ಹೊ. ಶ್ರೀನಿವಾಸಯ್ಯ ಅವರು ಗಾಂಧೀಜಿಯವರನ್ನು ನೋಡಿದ್ದು ಇದೇ ಪ್ರಥಮ. ಶ್ರೀನಿವಾಸಯ್ಯನವರು ಗಾಂಧೀಜಿ ಹತ್ತಿರ ಹೋಗಿ ನಮಸ್ಕಾರ ಮಾಡಲಿಲ್ಲ ಕಾರಣ ಕೈಯಲ್ಲಿರುವ ಒಡವೆಯನ್ನು ಗಾಂಧೀಜಿ ಕಿತ್ತು ಕೊಂಡರೆ, ಬೈಯ್ಯುತ್ತಾರೆ ಎಂಬ ಭಯ.

1943ರಲ್ಲಿ ವಿದ್ಯಾರ್ಥಿ ಸಂಘವನ್ನು (Student Union) ಸ್ಥಾಪಿಸಿದರು. ಆಗ ವಿದ್ಯಾರ್ಥಿ ನಾಯಕರಾಗಿದ್ದ ಎಂ.ಎಸ್. ಕೃಷ್ಣನ್, ವಿ.ಎಸ್. ಕೃಷ್ಣಯ್ಯರ್, ವಸಂತಯ್ಯ ಎಲ್ಲರೂ ಸಂಘದಲ್ಲಿದ್ದರು. ಚಳವಳಿ ಕಾಲದಲ್ಲಿ ವಿದ್ಯಾರ್ಥಿಗಳು ಗುಂಪುಗೂಡಿ, ಸ್ವತಂತ್ರ ವಿಚಾರ ಮಾತನಾಡಿ,



ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ ಅವರಿಂದ
ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಅಭಿನಂದನೆ

ಯಾವುದಾದರೂ ಒಂದು ಕಾರ್ಯಕ್ರಮ ಮಾಡಲು ಹಂಬಲಿಸುತ್ತಿದ್ದರು. ಎಂ.ಎಸ್. ಕೃಷ್ಣನ್ ಧೈರ್ಯಮಾಡಿ ಇವರೆಲ್ಲರ ಗುಂಪು ಕಟ್ಟಿ "ಬರಗಾಲ ಕ್ಷಾಮ ಪರಿಹಾರದ ನಿಧಿ ವಿದ್ಯಾರ್ಥಿ ವಿಭಾಗ"ವನ್ನು ಆರಂಭಿಸಿದರು. ಮನೆಮನೆಗೂ ಹೋಗಿ ಹಣ, ಬಟ್ಟೆ, ದವಸ, ಧಾನ್ಯ ಸಂಗ್ರಹಿಸಿದ್ದರು. ನಿತ್ಯವೂ ಇವರು ಸಂಗ್ರಹ ಮಾಡಿದ್ದ ಹಣ ಮತ್ತು ಅದನ್ನು ನೀಡಿದವರ ಹೆಸರನ್ನು 'ವಿಶ್ವಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಿಸಿದರು. ಅಂದು ಅದರ ಸಂಪಾದಕರಾಗಿದ್ದವರು ಸಿದ್ಧವನಹಳ್ಳಿ ಕೃಷ್ಣಶರ್ಮರು.

ವಿದ್ಯಾರ್ಥಿ ಫೆಡರೇಷನ್‌ನಲ್ಲಿ ಒಬ್ಬರಿಗೆ ಅಸಮಾಧಾನ ಶುರುವಾಯಿತು. ಕೃಷ್ಣಯ್ಯರ್, ಅಣ್ಣಯ್ಯ ಮುಂತಾದ ವಿದ್ಯಾರ್ಥಿ ನಾಯಕರು ಫೆಡರೇಷನ್ನಿನಿಂದ ದೂರವಾದರು. ದೊಡ್ಡಣ್ಣ ಮೈದಾನದಲ್ಲಿ ಅಂದೇ ಸಭೆ ಸೇರಿ ಸ್ಟೂಡೆಂಟ್ ಕಾಂಗ್ರೆಸ್ ಸ್ಥಾಪಿಸಿದರು. ವಿದ್ಯಾರ್ಥಿಕಾಂಗ್ರೆಸ್ ಕಾಂಗ್ರೆಸ್ಸಿನ ಒಂದು ಅಂಗ ಸಂಸ್ಥೆಯಂತೆ ನಡೆಯಿತು. ಕಾಲೇಜುಗಳಲ್ಲಿ ಅದು ಬಲಗೊಂಡಿತು. ಚಳವಳಿಯಲ್ಲಿ ಭಾಗವಹಿಸಿದ್ದ



ಹರಿಜನರ ಗುಡಿಸಲು ಮುಂದೆ ಡಾ॥ ಹೊ. ಶ್ರೀನಿವಾಸಯ್ಯನವರು 1943ರಲ್ಲಿ ಸೇವಾಕಾರ್ಯದಲ್ಲಿ ತೊಡಗಿದ್ದಾಗ

ಕೆಲವು ವಿದ್ಯಾರ್ಥಿಗಳ ತಂದೆ ತಾಯಿಗಳಿಗೆ ಕಾಲೇಜಿನಿಂದ ನೋಟೀಸ್ ಬಂತು. ನೋಟೀಸಿನಲ್ಲಿ ನಿಮ್ಮ ಹುಡುಗನನ್ನು ಕಾಲೇಜಿನಿಂದ ಏಕೆ ತೆಗೆಯಬಾರದು? ಎಂದು ಕೇಳಿದ್ದರು. ಅದರಲ್ಲಿ ತಪ್ಪಿಸಿಕೊಂಡವರೆಂದರೆ ಡಾ॥ ಹೊ. ಶ್ರೀನಿವಾಸಯ್ಯ ಮತ್ತು ಜಿ.ಪಿ.ಕೃಷ್ಣರಾವ್ ಇಬ್ಬರೇ. ಅಂತೂ ಡಾ॥ ಹೊ. ಶ್ರೀನಿವಾಸಯ್ಯ ಅವರು ಕಾಲೇಜಿನಿಂದ ಡಿಸ್ಮಿಸ್ ಆಗದೆ ಉಳಿದ ನಾಲ್ಕು ವರ್ಷವೂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಿ ಮುಂದಿನ ತರಗತಿಗೆ ಹೋದರು. ಆದರೂ ಇವರು ರಚನಾತ್ಮಕ

ಕಾರ್ಯಕ್ರಮದಲ್ಲಿ ಭಾಗವಹಿಸುವುದು ಮಾತ್ರ ತಪ್ಪಲಿಲ್ಲ. ವಿದ್ಯಾರ್ಥಿ ಕಾಂಗ್ರೆಸ್‌ನವರು ಪರೀಕ್ಷೆಯ ವೇಳೆಯಲ್ಲಿ ಪಾಠ ವ್ಯವಸ್ಥೆ ಮಾಡುತ್ತಿದ್ದರು. ಕಾಲೇಜುಗಳಲ್ಲಿ ವಂದೇಮಾತರಂ ಪ್ರಾರ್ಥನೆ ಹಾಡಿಸುತ್ತಿದ್ದರು. ಕಾಲೇಜು ಅಧಿಕಾರಿಗಳು ಬೇಡವೆಂದರೂ "ವಂದೇ ಮಾತರಂ" ಹಾಡುವುದನ್ನು ಇವರು ಬಿಟ್ಟಿರಲಿಲ್ಲ.

ಮಜುರಾ ಹೊಸಹಳ್ಳಿಯಲ್ಲಿ ಗ್ರಾಮಸೇವೆ

1949ರಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಬೃಹತ್ ಯೋಜನೆ ಹಾಕಿಕೊಂಡಿತು. ಹಳ್ಳಿಗಳಲ್ಲಿ ವಯಸ್ಕರ ಶಿಕ್ಷಣ, ಹರಿಜನ ದೇವಸ್ಥಾನ ಪ್ರವೇಶ, ಅಕ್ಷರಾಭ್ಯಾಸ, ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು. ಯೋಜನೆ ತಯಾರಿಸಿ ವಿಶ್ವವಿದ್ಯಾಲಯಕ್ಕೂ, ಗ್ರಾಮಾಭಿವೃದ್ಧಿ ಇಲಾಖೆಯವರಿಗೂ ನೀಡಿದರು. ಗಾಂಧೀಜಿ ಅನುಯಾಯಿ ಜೆ.ಸಿ. ಕುಮಾರಪ್ಪನವರ ಸಿದ್ಧಾಂತದಂತೆ ಹಳ್ಳಿಯ ಆರ್ಥಿಕ ಯೋಜನೆ ತಯಾರಿಸಿ ಸರ್ಕಾರದ ಸಹಾಯವನ್ನು ಕೇಳಿದರು. ಸರ್ಕಾರದ ಸಲಹೆ ಮೇರೆಗೆ ದೊಡ್ಡಬಳ್ಳಾಪುರದ ಬಳಿ ಇರುವ ಮಜುರಾ ಹೊಸಹಳ್ಳಿ ಮತ್ತು ಅದರ ಸುತ್ತಮುತ್ತಲಿನ ಐದು ಗ್ರಾಮಗಳಲ್ಲಿ ಇವರ ಯೋಜನೆ ಕಾರ್ಯಗತ ಮಾಡಲು ವಿಶ್ವವಿದ್ಯಾನಿಲಯ ಮತ್ತು ಸರ್ಕಾರ ಒಪ್ಪಿದ್ದವು.

ವಿಶ್ವವಿದ್ಯಾನಿಲಯದಿಂದ ಆಗಿನ ಕುಲಪತಿಗಳಾಗಿದ್ದ ಶ್ರೀಮಾನ್ ಕಸ್ತೂರ ಶೆಟ್ಟಿಯವರು ಡಾ॥ ಹೊ. ಶ್ರೀನಿವಾಸಯ್ಯ ಮತ್ತು ಅವರ ಮಿತ್ರರ ಯೋಜನೆ ನೋಡಿ ಮೂರು ಸಾವಿರ ಧನ ಸಹಾಯ ಮಾಡಿದ್ದರು. ಎಲ್ಲಾ ಜಿಲ್ಲೆಗಳಿಂದ ಸುಮಾರು ನೂರುಜನ ವಿದ್ಯಾರ್ಥಿಗಳು ಬಂದರು. ಹತ್ತು ಜನರ ಒಂದೊಂದು ಗುಂಪು ಮಾಡಿ ಹತ್ತು ವಿಭಾಗ ಮಾಡಲಾಯಿತು. ಆಗಿನ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿ ಯಾಗಿದ್ದ ಜಿ.ಪಿ.ಕೃಷ್ಣರಾವ್ ಈ ಶಿಬಿರಕ್ಕೆ ಕಾರ್ಯದರ್ಶಿಯಾಗಿ ಡಾ॥ ಹೊ. ಶ್ರೀನಿವಾಸಯ್ಯ ಅವರು ಮತ್ತು ಟಿ.ಜಿ.ವೆಂಕಟೇಶ್‌ರವರು ಸಂಚಾಲಕರಾಗಿ ನೇಮಕಗೊಂಡರು. ಊರಿನ ಪಕ್ಕದಲ್ಲೇ ಕಣದಲ್ಲಿ ಬಿಡಾರ ಹಾಕಿದರು. ವೃತ್ತಾಕಾರದಲ್ಲಿ ಬಿಡಾರ. ಮಧ್ಯೆ ಶಿಬಿರದ ಕಚೇರಿ.

ಶೌಚಕ್ಕಾಗಿ ಪಕ್ಕದಲ್ಲಿಯೇ ಗುಂಡಿ ತೆಗೆದು ವ್ಯವಸ್ಥೆ ಮಾಡಲಾಗಿತ್ತು. ಇದರ ಪ್ರಾರಂಭೋತ್ಸವಕ್ಕೆ ಆಗಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಪಟ್ಟಾಭಿಸೀತಾರಾಮಯ್ಯನವರು ಬಂದರು. ಇವರೆಲ್ಲರ ಏರ್ಪಾಡು, ಕಾರ್ಯಕ್ರಮ ನೋಡಿ ಸಂತೋಷಪಟ್ಟರು. ಯಶಸ್ಸು ಕೋರಿ ಪ್ರಾರಂಭೋತ್ಸವ ನಡೆಸಿದರು, ಪತ್ರಿಕೋದ್ಯಮಿಗಳು ಬಂದಿದ್ದರಿಂದ ಎಲ್ಲಾ ಪತ್ರಿಕೆಗಳಲ್ಲಿ ದೊಡ್ಡ ಶಿರೋನಾಮೆಯಲ್ಲಿ ಶಿಬಿರದ ವಿಷಯ ಪ್ರಕಟಿಸಿ ಪ್ರಚಾರ ಕೊಟ್ಟರು. ಊರಿನವರು ರಸ್ತೆ ನಿರ್ಮಿಸುವಾಗ ಮನೆಗೊಬ್ಬ ಆಳು, ಗುದ್ದಲಿ ಪಿಕಾಸಿ ತೆಗೆದುಕೊಂಡು ಬರಲು ಪ್ರಾರಂಭಿಸಿದರು.

ಶ್ರಮದಾನದ ಅಂಗವಾಗಿ ಹೊಸಹಳ್ಳಿಯಿಂದ ಬೆಂಗಳೂರು, ದೊಡ್ಡಬಳ್ಳಾಪುರ ಮುಖ್ಯರಸ್ತೆಗೆ ಕಾರು ಬರುವ ಹಾಗೆ ರಸ್ತೆ ದುರಸ್ತಿ ಮಾಡಿದ್ದು ಮೊದಲನೆ ಕೆಲಸ. ಅಲ್ಲಿಂದ ಬೇರೆ ಊರಿಗೆ ಹೋಗುವ ಹಾಗೆ ರಸ್ತೆಗಳನ್ನು ಮಟ್ಟಮಾಡಲಾಯಿತು. ಗೋಡೆಗಳಿಗೆ ಮಣ್ಣು ಬಳಿದು ಸುಣ್ಣ ಹಚ್ಚಲಾಯಿತು. ಬಿಡುವಾದಾಗ ಮನೆಗಳನ್ನು ಹಂಚಿಕೊಂಡು ವಿದ್ಯಾರ್ಥಿಗಳು ಆರ್ಥಿಕ ಗಣನೆ ಕಾರ್ಯ ಮಾಡಿದರು. ಮೊದಲ ದಿನಸವೇ ಊರು ಊರಿಗೂ ಬ್ಯಾಂಡ್ ಜೊತೆಯಲ್ಲಿ ಹೋಗಿ ಪ್ರಭಾತ ಕಛೇರಿಯಿಂದ ಪ್ರಚಾರ ಮಾಡಿದರು. ಶ್ರೀ ಮತ್ತೂರು ಕೃಷ್ಣಮೂರ್ತಿಯವರು ನಮ್ಮ ಗುಂಪಿನಲ್ಲಿದ್ದರು. ಇಷ್ಟೆಲ್ಲಾ ಆದರೂ ಹರಿಜನರು ಗುಂಪಿನ ಜೊತೆ ಸೇರುತ್ತಿರಲಿಲ್ಲ. ಯಾರ ಮನೆಗೂ ಹೋದರೂ ಮನೆ ಬಾಗಿಲು ಹಾಕಿರುತ್ತಿತ್ತು. ಗಂಡಸರಿಲ್ಲ ಎನ್ನುತ್ತಿದ್ದರು. ಇದು ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಶೋಚನೀಯವಾಗಿ ಕಂಡರೂ ಅಲ್ಲೇನೋ ಸಮಸ್ಯೆ ಇದೆ ಎಂದುಕೊಂಡರು. ಒಂದು ಶನಿವಾರ ಹರಿಜನರಿದ್ದ ಗುಡಿಸಲಿನ ಮಧ್ಯೆ ಭಜನೆ ಶುರು ಮಾಡಿದರು. ಡಾ॥ ಹೊ. ಶ್ರೀನಿವಾಸಯ್ಯ ಅವರು ಮತ್ತು ಸ್ನೇಹಿತರು ಹರಿಜನ ಕೇರಿಯ ಮುದುಕಿಯೊಬ್ಬಳಿಂದ ಬಲವಂತ ಮಾಡಿ ನೀರು ತರಿಸಿ ಅಲ್ಲಿಯೇ ಕುಡಿದರು. ಕೇರಿಯ ಜನರಿಗೆಲ್ಲಾ ಆಶ್ಚರ್ಯ, ವಿದ್ಯಾರ್ಥಿಗಳೆಲ್ಲ ಯಾವುದೇ ಮುಜುಗರವಿಲ್ಲದೆ ನೀರು ಕುಡಿದರು. ಆ ದಿನಗಳಲ್ಲಿಯೇ ದೀನದಲಿತರ ಬಗ್ಗೆ ಸಮಾನಭಾವನೆ



ಯೋಗಪಟು
ಡಾ॥ ಹೊ. ಶ್ರೀನಿವಾಸಯ್ಯನವರು

ಡಾ॥ ಹೊ. ಶ್ರೀನಿವಾಸಯ್ಯ ಅವರ ಹೃದಯಾಂತ ರಾಳದಲ್ಲಿ ಬೇರೂರಿತ್ತು.

ಶ್ರೀ ಹೊ. ಶ್ರೀನಿವಾಸಯ್ಯ ಅವರು ಮತ್ತು ಸ್ನೇಹಿತರು ಭಾಗವಹಿಸಿದ್ದ ಶಿಬಿರಕ್ಕೆ ಆಗಿನ ಮುಖ್ಯಮಂತ್ರಿ ಶ್ರೀ. ಕೆ.ಸಿ. ರೆಡ್ಡಿ, ಮಂತ್ರಿ ಟಿ.ಮರಿಯಪ್ಪ, ಮುಂತಾದವರು ಬಂದಿದ್ದರು. ಮುಖ್ಯಮಂತ್ರಿಗಳು ಯುವ ಜನರ ಯೋಜನೆಯುನ್ನು ಓದುತ್ತಾ, ಅದರಲ್ಲಿನ ಒಂದು ವಾಕ್ಯಕ್ಕೆ ಪೆನ್ನಿನಿಂದ ಗೆರೆ ಹಾಕಿ, ಜಿಲ್ಲಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳೂ ಆಗಿದ್ದ ಶ್ರೀ ಶೇಷಗಿರಿರಾವ್‌ರವರಿಗೆ ತೋರಿಸಿದರು. ಆ ವಾಕ್ಯ ಹೀಗಿತ್ತು, "ಹಳ್ಳಿಯವರು ಯಾರೇ ಬಂದರೂ, ತಮಗೆ ಸೇರಿದವರೇ ಅಥವಾ ಬೇರೆಯವರೇ ಎಂಬುದನ್ನು ಬಹಳ ಬೇಗ ಗುರುತಿಸುತ್ತಾರೆ. ತಮಗೆ ಸೇರಿದವರಲ್ಲ ಅಂತ ಗೊತ್ತಾದರೆ ಆತ ದೂರವೇ ಇರುತ್ತಾನೆ. ಆದ್ದರಿಂದ ಹಳ್ಳಿಯಲ್ಲಿ ಕೆಲಸ ಮಾಡಬೇಕಾದರೆ ಸರಳ ಉಡುಪು ಧರಿಸಬೇಕು. ಸರಳವಾಗಿರಬೇಕು. ಅವರಂತೆಯೇ ಬದುಕಬೇಕು. ಆಗಲೇ ಹಳ್ಳಿಯವನ ಜೊತೆ ಸೇರಲು ಸಾಧ್ಯ" ಎಂಬುದನ್ನು ತೋರಿಸಿ. "ಇದೊಂದು ಪಾಠ. ಮುಂದೆ ಹಳ್ಳಿಗೆ ಬರಬೇಕಾದಾಗ ಸರಳವಾಗಿ ಬರುತ್ತೇನೆ" ಅಂದರು. ಮುಖ್ಯಮಂತ್ರಿಗಳು, ಇವರ ಕಾರ್ಯವನ್ನು ಮೆಚ್ಚಿಕೊಂಡರು. ಮಂತ್ರಿಗಳು ಇದೇ ರೀತಿ ಹಳ್ಳಿಯಲ್ಲಿ ಶಿಬಿರ ಹಾಕಿ ಗ್ರಾಮೋದ್ಧಾರ ಕಾರ್ಯಕ್ರಮ ಹಾಕಿಕೊಳ್ಳಬೇಕು. ಅರ್ಥ ಮಾಡಿಕೊಳ್ಳಬೇಕು. ಈ ರೀತಿಯ ಒಂದು ಯೋಜನೆ ಕೊಡಿ ಅಂದರು. "ಪ್ರತಿಯೊಬ್ಬ ವಿದ್ಯಾರ್ಥಿಯು ಕಡೆ ಪಕ್ಷ ಆರು ತಿಂಗಳು ಹಳ್ಳಿಯಲ್ಲಿ ಈ ರೀತಿಯಾಗಿ ಶಿಬಿರ ಹಾಕಿ ಕೆಲಸ ಮಾಡಿದರೆ, ಸರ್ಕಾರದ ಗ್ರಾಮಾಭಿವೃದ್ಧಿ ಇಲಾಖೆ ಐದು ವರ್ಷದಲ್ಲಿ ಮುಚ್ಚಿ ಬಿಡಬಹುದು. ಒಂದು ಹಳ್ಳಿಗೆ ಒಬ್ಬ ಇಂಜಿನಿಯರ್, ಒಬ್ಬ ವೈದ್ಯ, ವಿಜ್ಞಾನದ ವಿದ್ಯಾರ್ಥಿ, ಕಲೆ ವಿದ್ಯಾರ್ಥಿ ಹೀಗೆ ಐದು ಜನ ವಿದ್ಯಾರ್ಥಿಗಳ ಗುಂಪು ಒಂದೊಂದು ಹಳ್ಳಿಯಲ್ಲಿ ಆರು

ತಿಂಗಳು ಶಿಬಿರ ಮಾಡಿ, ಆ ಹಳ್ಳಿಯ ಅಭಿವೃದ್ಧಿಗಾಗಿ ಯೋಜನೆ ತಯಾರಿಸಿ ಸರ್ಕಾರಕ್ಕೆ ಕೊಟ್ಟರೆ ಅದಕ್ಕಿಂತಲೂ ಹೆಚ್ಚಾದ ಕೆಲಸ ಇನ್ನೇನು ಬೇಕು. ಹಳ್ಳಿಯ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆ. ವಿದ್ಯಾರ್ಥಿಗಳಿಗೂ ಹಳ್ಳಿಯ ಹಾಗೂ ಜನರ ಸಂಪರ್ಕ ಬೆಳೆಯುತ್ತದೆ" ಎಂದು ಸಚಿವರು ಅಭಿಪ್ರಾಯ ಪಟ್ಟರು.

ಸಮರೋಪ ಭಾಷಣವನ್ನು ಕುಲಪತಿಯಾದ ಶ್ರೀ ಕಸ್ತೂರಿರಾಜ ಶೆಟ್ಟಿಯವರು ಮಾಡಿದರು. ಸಭೆಗೆ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ ಮುಂತಾದ ನಾಯಕರು ಬಂದಿದ್ದರು. ಹಳ್ಳಿಯಲ್ಲಿ ಆ ದಿನ ಹಬ್ಬದ ವಾತಾವರಣ. ಹಳ್ಳಿ ಬಿಟ್ಟು ಬರಬೇಕಾದರೆ ವಿದ್ಯಾರ್ಥಿಗಳ ಕಣ್ಣಿನಲ್ಲೂ ನೀರು, ಹಳ್ಳಿಯ ಜನರಲ್ಲೂ ಕಣ್ಣೀರು. ಜೀವನದಲ್ಲಿ ಈ ಶಿಬಿರ ಮರೆಯಲಾಗದ ಸಂಗತಿಯಾಯಿತು. ವಿದ್ಯಾರ್ಥಿಕಾಂಗ್ರೆಸ್ ಆದ ಮೇಲೆ ಯೂತ್ ಕಾಂಗ್ರೆಸ್ ಕಟ್ಟಿದರು. ಈ ಮೂಲಕ ಅನೇಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ವಲ್ಲಭಬಾಯಿ ಪಟೇಲ್, ಪಂಡಿತ್ ನೆಹರನ್ನು, ಇವರುಗಳನ್ನು ಕರೆಸಿ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ಭಾಷಣ ಏರ್ಪಡಿಸಲಾಗಿತ್ತು. ಈ ಘಟನೆಗಳೆಲ್ಲ ಡಾ॥ ಹೊ. ಶ್ರೀನಿವಾಸಯ್ಯ ಅವರಲ್ಲಿ ನಾಯಕತ್ವದ ಗುಣ ಬೆಳೆಸಿಕೊಳ್ಳಲು ಸಹಕಾರಿಯಾಯಿತು.

ದೇವಾಲಯಕ್ಕೆ ಹರಿಜನರ ಪ್ರವೇಶಕ್ಕೆ ಮುಂದಾಳತ್ವ

ಶಿಬಿರ ನಡೆದ ಗ್ರಾಮದಲ್ಲಿ ಹರಿಜನರಿಗೆ ದೇವಸ್ಥಾನದ ಪ್ರವೇಶವಿಲ್ಲ ಎಂದು ತಿಳಿದು ಡಾ॥ ಹೊ. ಶ್ರೀನಿವಾಸಯ್ಯ ಮತ್ತು ಅವರ ಸ್ನೇಹಿತರೆಲ್ಲ ಒಂದು ಯೋಜನೆ ರೂಪಿಸಿಕೊಂಡರು. ಈ ಊರಿನಲ್ಲಿ ಹರಿಜನರಿಂದ ದೇವಸ್ಥಾನ ಪ್ರವೇಶ ಏಕಾಗಬಾರದು? ಎಂದು ಊರಿನ ಗೌಡರನ್ನೆಲ್ಲ ಕಂಡು ಇವರೇ ಮಾತನಾಡಿದರು. ಅದಕ್ಕೆ ಎಲ್ಲರೂ ಒಪ್ಪಿಕೊಂಡರು. ಆಗ ಮುಜರಾಯಿ ಮಂತ್ರಿಯಾಗಿದ್ದ ಶ್ರೀ ಪಾಮಡಿಸುಬ್ಬರಾಯ ಶೆಟ್ಟಿ ಅವರನ್ನು ಕರೆಸಲು ಏರ್ಪಾಡು ಮಾಡಿ, ಹರಿಜನರು ದೇವಸ್ಥಾನ ಪ್ರವೇಶಿಸಲು ದಿವಸವನ್ನು ಗೊತ್ತು ಮಾಡಿದರು.

ಆ ದಿನ ಹಳ್ಳಿಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಯಿತು. ಎಲ್ಲಿ ನೋಡಿದರೂ ಹಸಿರು ತೋರಣ. ಹರಿಜನರ ಕೇರಿಯಲ್ಲಿ ಸಾರಿಸಿ, ಗುಡಿಸಿ ಮಾವಿನ ಸೊಪ್ಪು ಕಟ್ಟಿದ್ದರು. ಊರಿನಲ್ಲಿ ದೊಡ್ಡ ಸಭೆ ಸೇರಿತು. ಮಂತ್ರಿಗಳು ಯುವಕರೆಲ್ಲ ಮಾಡಿದ ಕಾರ್ಯಕ್ರಮ ನೋಡಲು ಪ್ರಾರಂಭಿಸಿದರು. "ಹನುಮಂತನೆಂಬ ಬಡ ಹರಿಜನ ಯಜಮಾನ ಹೊದೆಯಲು ಇದೊಂದೇ ಕಂಬಳಿ ಎಲ್ಲರ ಮುಂದೆ ಹೇಗೆ ಸ್ವಾಮಿ ಬರೋದು" ಅಂದ. ಇದ್ದವರಿಗೆಲ್ಲ ಕಣ್ಣೀರು ಬಂತು. ಡಾ॥ ಹೊ. ಶ್ರೀನಿವಾಸಯ್ಯ ಅವರು ಬಾವಿಯ ಹತ್ತಿರ ಅವನನ್ನು ಕರೆದುಕೊಂಡುಹೋಗಿ ಸ್ನಾನಮಾಡಿಸಿದರು. ಪಂಚೆ ಸುತ್ತಿಸಿ, ಷರ್ಟು ಹಾಕಿಸಿ, ಟವಲ್ ಕೊಟ್ಟು ಮಂತ್ರಿಗಳ ಬಳಿ ಕರೆದುಕೊಂಡು ಬಂದುದ್ದರಿಂದ ಅವನಿಗಾದ ಸಂತೋಷ ಹೇಳತೀರದು. ಅವನಿಗಾಗಿ ಎಲ್ಲರೂ ಕಾಯುತ್ತಿದ್ದರು. 107 ವರ್ಷದ ಹರಿಜನ ಮುದುಕ ಕೋಲು ಹಿಡಿದು ಕುಣಿಯುತ್ತಿದ್ದ. ಎತ್ತು, ದನ ತಿನ್ನುವುದರಿಂದ ನಾನು ಒಳಗೆ ಬರುವುದಿಲ್ಲ. ಆಂಜನೇಯ ಕಣ್ಣು ಕಿತ್ತುಕೊಳ್ಳುತ್ತಾರೆ ಎಂದು ನಿರಾಕರಿಸಿದ. ಇನ್ನು ಮುಂದೆ ತಿನ್ನಬೇಡ ಎಂದು ಶ್ರೀನಿವಾಸಯ್ಯನವರು ಹೇಳಿದರು. ಗೌಡರು ಎತ್ತು, ಸತ್ತ ದನ ಕೊಡುತ್ತಾರೆ. ಚರ್ಮ ಸುಲಿದು ಕೊಟ್ಟರೆ ಚರ್ಮ ತೆಗೆದುಕೊಳ್ಳುತ್ತಾರೆ. ಮಾಂಸ ನಮಗೆ ಕೊಡುತ್ತಾರೆ ಎಂದ. ಗೌಡರ ಹತ್ತಿರ ಮಾತನಾಡಿ ಮಾಂಸ ಭೂಮಿಗೆ ಹೂಳುವಂತೆ ಹೇಳಿ ಒಪ್ಪಿಸಿದ್ದಾಯಿತು. ನಂತರ ಖುಷಿಯಾಗಿ ಬಂದ. ಹೆಣ್ಣುಮಕ್ಕಳು, ಗಂಡಸರು, ಒಗೆದ ಬಟ್ಟೆ ಹಾಕ್ಕೊಂಡು ಹಣ್ಣು ಹಂಪಲು ಇಟ್ಟುಕೊಂಡು ಬಂದರು. ದೇವಸ್ಥಾನದ ಒಳಗಡೆ ಎಲ್ಲರೂ ಹೋಗಬೇಕು ಎಂದು ಮಂತ್ರಿಗಳ ಸಮಕ್ಷಮ ಎಲ್ಲರೂ ತೀರ್ಪು ನೀಡಿದರು. ತಮಟೆ, ಗಂಟೆ, ವಾದ್ಯ ಸಮೇತ ಎಲ್ಲರೂ ದೇವಸ್ಥಾನದೊಳಗಡೆ ಹೋದರು. ಹರಿಜನರ ಕಣ್ಣಿನಲ್ಲಿ ಕಂಬನಿ ಹರಿಯಿತು. ಅನಂತರ ಪ್ರತಿ ಶನಿವಾರ ಭಜನೆ ಏರ್ಪಡಿಸಿ ಎಲ್ಲರೂ ದೇವಸ್ಥಾನಕ್ಕೆ ಹೋಗುವಂತೆ ಮಾಡಲಾಯಿತು. ಈ ಘಟನೆ ಹಳ್ಳಿಗಳಲ್ಲಿ ಅಂದಿನ ದಿನಗಳಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆ ಎಂದೇ ಹೇಳಬಹುದು. ಡಾ॥ ಹೊ. ಶ್ರೀನಿವಾಸಯ್ಯ ಅವರು ಇದರ ನಾಯಕತ್ವ ವಹಿಸಿದ್ದು ಹೆಮ್ಮೆಯ ಸಂಗತಿ.

ಅಸ್ಪೃಶ್ಯತಾ ನಿವಾರಣೆ ಕಡೆಗೆ ತಾಯಿ

ಡಾ॥ ಹೊ. ಶ್ರೀನಿವಾಸಯ್ಯ ಅವರು ತಾಯಿಯವರನ್ನು ನೆನೆದರೆ ಬಾವುಕರಾಗುತ್ತಾರೆ. ಇವರ ಮೇಲೆ ತಾಯಿ ಸಂಸ್ಕಾರ ಎಂತಹ ಪ್ರಭಾವ ಬೀರಿತು ಎಂಬುದನ್ನು ನೆನೆಯುವುದೆಂದರೆ ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಅತೀವ ಆನಂದ. ಇವರ ತಾಯಿಯವರು ಮನೆಗೆ ಬಂದವರನ್ನ ಹಾಗೆಯೇ ಕಳಿಸುತ್ತಿರಲಿಲ್ಲ. ತಿಂಡಿ, ಕೊನೇ ಪಕ್ಷ ಕಾಫಿಯನ್ನಾದರೂ ಕೊಟ್ಟು ಕಳುಹಿಸುತ್ತಿದ್ದರು. ಹೀಗೆ ಅವರ ಮನೆಗೆ ಬಂದು ಹೋಗುತ್ತಿದ್ದ ಮುದ್ದಣ್ಣನ ಬಗ್ಗೆ ಡಾ॥ ಹೊ. ಶ್ರೀನಿವಾಸಯ್ಯ ಅವರನ್ನು ತಾಯಿ ಒಮ್ಮೆ ಕೇಳಿದರು. ಮುದ್ದಣ್ಣ ಹರಿಜನ ಜಾತಿಗೆ ಸೇರಿದವನೆಂದು ಇವರ ತಾಯಿಗೆ ತಿಳಿಯಿತು. "ನಿನಗೆ ಮಡಿ ಮೈಲಿಗೆ ಏನೂ ಇಲ್ಲ" ಎಂದು ತಮ್ಮ ಮಗನನ್ನು ಬೈದರು. ಏನು ಮಾಡಬೇಕೆಂದು ಅವರಿಗೆ ತಿಳಿಯದೇ ಕೊನೆಗೆ, ಡಾ॥ ಹೊ. ಶ್ರೀನಿವಾಸಯ್ಯ ಅವರು 'ನೋಡಮ್ಮಾ ಸುಮಾರು ಐದಾರು ತಿಂಗಳಿನಿಂದ ಬರುತ್ತಿದ್ದಾನೆ. ನೀನು ತಿಂಡಿ ಕಾಫಿ ಕೊಟ್ಟು ಮಗನಾಗಿ ನೋಡಿಕೊಂಡೆ. ನಮಗೆ ಖಾಯಿಲೆ ಬಂದಾಗ ಔಷಧಿ ಕೊಟ್ಟು ನೋಡಿಕೊಂಡಿದ್ದಾನೆ. ನಾರಾಯಣನ ಕಾಲಿನ ಹುಣ್ಣು ವಾಸಿ ಮಾಡಿದ್ದಾನೆ. ಆತನೂ ಖಾದಿಬಟ್ಟೆ ಧರಿಸುತ್ತಾನೆ, ನಿತ್ಯ ಸ್ನಾನ ಮಾಡುತ್ತಾನೆ. ಶುದ್ಧವಾಗಿದ್ದಾನೆ. ಹುಟ್ಟಿನಲ್ಲಿ ಮನುಷ್ಯ ಮಾಡಿದ ಯಾವುದೇ ಜಾತಿಯಾದರೂ ಕಾರ್ಯದಲ್ಲಿ ನಮ್ಮೆಲ್ಲರಿಗಿಂತ ಹೆಚ್ಚು ಸೇವೆ ಮಾಡಿದ್ದಾನೆ. ಇದುವರೆಗೂ ಜಾತಿ ಗೊತ್ತಿರಲಿಲ್ಲ. ಗೊತ್ತಾದ ಮೇಲೆ ಮನಸ್ಸಿಗೆ ಬೇಜಾರು, ನಾನು ಸುಳ್ಳು ಹೇಳಿದ್ರೆ ನಂಬ್ತಿದ್ದೆ. ಹುಟ್ಟಿದ ಜಾತಿ ಏನೂ ಮಾಡುವುದಿಲ್ಲ. ನಮ್ಮ ಮನೆ ಬಾಡಿಗೆ ಇರುವ ಬ್ರಾಹ್ಮಣರು ನಮ್ಮನ್ನು ಶೂದ್ರ ಅಂತ ಒಳಗೆ ಸೇರಿಸದೆ ಇದ್ದರೆ ನಿನ್ನ ಮನಸ್ಸು ಹೇಗಾಗುತ್ತೆ. ಹಾಗೆ ಮುದ್ದಣ್ಣನು ಸಹ ಅಲ್ಲವೆ? ಆದ್ದರಿಂದ, ನೀವು ಬೇಜಾರು ಪಟ್ಟುಕೊಳ್ಳಬೇಡಿ" ಎಂದು ತಾಯಿಯವರಿಗೆ ಜಾತೀಯತೆಯ ಕರಾಳಮುಖ ಪರಿಚಯಿಸಿದರು. ಅಂದಿನಿಂದ ಮುದ್ದಣ್ಣ ಇವರ ಮನೆಯ ಸದಸ್ಯನಾದ. ಇದರಿಂದ ತಾಯಿಯವರ ಔದಾರ್ಯ

ಪ್ರದರ್ಶನವಾಯಿತು. ಮುಂದೊಂದು ದಿನ ಮುದ್ದಣ್ಣ ಹರಿಜನ ಮಕ್ಕಳಿಗಾಗಿ ಒಂದು ಹಾಸ್ಟೆಲ್ ತೆರೆದ. ಅದರ ಹೆಸರು ಕಸ್ತೂರ ಬಾ ವಿದ್ಯಾರ್ಥಿ ನಿಲಯ. ಅದಕ್ಕಾಗಿ ಬೇಕಾದಷ್ಟು ಶ್ರಮಿಸಿದನು.

ಕಾಂಗ್ರೆಸ್ ಅಧಿವೇಶನ

1951ರಲ್ಲಿ ಅಖಿಲಭಾರತ ಕಾಂಗ್ರೆಸ್ ಅಧಿವೇಶನ ಬೆಂಗಳೂರಿನ ಲಾಲ್‌ಬಾಗಿನಲ್ಲಿ ನಡೆಯಿತು. ಆ ವೇಳೆಗೆ ಡಾ॥ ಹೊ. ಶ್ರೀನಿವಾಸಯ್ಯ ಅವರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ರಜೆ ಹಾಕಿ ಸ್ವಯಂಸೇವಕನಾಗಿ ಕೆಲಸಮಾಡಿದರು. ಇವರಿಗೆ ಕಾರ್ಯನಿರ್ವಾಹಕ ಸಮಿತಿ ಸದಸ್ಯರುಗಳನ್ನು ನೋಡಿಕೊಳ್ಳುವ ಹಾಗೂ ಅವರಿಗೆ ಸಹಾಯ ಮಾಡುವ ಜವಾಬ್ದಾರಿ ವಹಿಸಲಾಯಿತು. ಕುಮಾರಪಾರ್ಕಿನ ಅಥಿತಿ ಗೃಹದಲ್ಲಿ ಕಾರ್ಯ ನಿರ್ವಾಹಕ ಸಭೆ. ಪುರುಷೋತ್ತಮದಾಸ್ ತಂಡನ್ ಅವರು ಕಾಂಗ್ರೆಸ್ ಅಧ್ಯಕ್ಷ. ನಾಯಕರನ್ನು ನೋಡಲು ಜನ ನೂಕು ನುಗ್ಗಲು. ಆದರೆ ಅವರ ರಕ್ಷಣೆ ನೋಡಿಕೊಳ್ಳುವುದು ಜವಾಬ್ದಾರಿ ಕೆಲಸ. ನೆಹರೂಜಿಯುವರು, ರಾಜ್ಯಪಾಲರ ಅತಿಥಿ ಗೃಹದಲ್ಲಿ ಉಳಿದುಕೊಂಡಿದ್ದರು. ಊಟಕ್ಕೆ ಎಲ್ಲಾ ನಾಯಕರು ಕುಳಿತರು. ಪಂಡಿತ್‌ಜೀಯವರೇ ಬಂದು ಎಲ್ಲರನ್ನು ವಿಚಾರಿಸಿ ಊಟ ಬಡಿಸಲು ಪ್ರಾರಂಭಿಸಿದರು. ಶ್ರೀ ಪುರುಷೋತ್ತಮ ದಾಸ್ ಟಂಡನ್‌ರವರ (ಕಾರ್ಯದರ್ಶಿ) ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಸ್ನೇಹಿತರಾದರು. ಗೋವಿಂದ ವಲ್ಲಭ ಪಂತ್, ಪಟೇಲ್, ನೆಹರು, ಷೇಕ್ ಅಬ್ದುಲ್ಲಾ ಇಂತಹ ನಾಯಕರ ದರ್ಶನದ ಜೊತೆಗೆ ಅವರ ವಾಣಿಯನ್ನು ಹತ್ತಿರ ಕೂತು ಕೇಳಲು ಇವರಿಗೆ ಅವಕಾಶವಾಯಿತು. ಆಗ ಕೆಂಗಲ್ ಹನುಮಂತಯ್ಯನವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು.

ವಿದ್ಯಾರ್ಥಿ ಸಮ್ಮೇಳನ

ನಂಜನಗೂಡಿನಲ್ಲಿ ಅಖಿಲ ಮೈಸೂರು ವಿದ್ಯಾರ್ಥಿ ಸಮ್ಮೇಳನ ನಡೆಯಿತು. ಅಶೋಕ ಮೆಹ್ತಾ ಸಮ್ಮೇಳನದ ಅಧ್ಯಕ್ಷರು. ಶ್ರೀ ಸಿದ್ಧವನಹಳ್ಳಿ

ಕೃಷ್ಣಶರ್ಮರ ಜೊತೆ ಡಾ॥ ಹೊ. ಶ್ರೀನಿವಾಸಯ್ಯ ಅವರು ಹೋಗಿದ್ದರು. ಇವರು ಪ್ರಯಾಣಿಸುತ್ತಿದ್ದ ರೈಲು ಗಾಡೀಲಿ ಪಾರ್ಥನಾರಾಯಣ ಪಂಡಿತ್, ಜಿ. ರಾಮಚಂದ್ರರಾವ್, ಸಿದ್ಧವನಹಳ್ಳಿ ಕೃಷ್ಣಶರ್ಮ ಎಲ್ಲರೂ ಇದ್ದರು. ರೈಲುಗಾಡಿಯ ತುಂಬಾ ವಿದ್ಯಾರ್ಥಿಗಳೇ ಇದ್ದರು.

ಸಮ್ಮೇಳನಕ್ಕೆ ಅಶೋಕ ಮೆಹ್ತಾ, ಅಚ್ಯುತ ಪಟವರ್ದನ್ ಬಂದಿದ್ದರು. ಮೂರು ಸಾವಿರ ವಿದ್ಯಾರ್ಥಿಗಳು ಸೇರಿದ್ದರು. ನಿರ್ಣಯಗಳ ಸಮಿತಿ ಸೇರಿತು. ಅಶೋಕ ಮೆಹ್ತಾ ಅಧ್ಯಕ್ಷತೆ ವಹಿಸಿದ್ದರು. ಸಿದ್ಧವನಹಳ್ಳಿ ಕೃಷ್ಣಶರ್ಮರನ್ನು ಅಧ್ಯಕ್ಷತೆ ವಹಿಸುವ ಹಾಗೆ ಹೇಳಿ ಮೆಲ್ಲಗೆ ಜಾರಿಕೊಂಡರು. ಒಂದು ಗಂಟೆ ಒಳಗೆ ಶರ್ಮಾಜಿಯವರು ಎಲ್ಲ ನಿರ್ಣಯಗಳನ್ನು ಪೂರೈಸಿ ಸಭೆಯನ್ನು ಮುಕ್ತಾಯಗೊಳಿಸಿದರು. ಸಮಾರೋಪ ಭಾಷಣ ಅಚ್ಯುತಪಟವರ್ಧನ ಅವರದು. ಮರೆಯಲಾಗದಂತಹ ವಿದ್ಯಾರ್ಥಿ ಸಮ್ಮೇಳನ ಎಂದರೆ ನಂಜನಗೂಡಿನ ಸಮ್ಮೇಳನವೇ. ಒಮ್ಮೆ ಅಖಿಲಾ ಭಾರತ ಯುವಕರ ಕಾಂಗ್ರೆಸ್ ಸಮ್ಮೇಳನ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ನಡೆಯಿತು. ರವೀಂದ್ರ ವರ್ಮ ಆಗಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರು. ಭಾರತದ ಎಲ್ಲಾ ಪ್ರಾಂತ್ಯಗಳಿಂದ ವಿದ್ಯಾರ್ಥಿಗಳು ಬಂದಿದ್ದರು. ಕಲ್ಕತ್ತಾದಿಂದ ಬಂದ ಒಂದು ಗುಂಪಿನ ಮೇಲ್ವಿಚಾರಣೆ ಡಾ॥ ಹೊ. ಶ್ರೀನಿವಾಸಯ್ಯ ಅವರದ್ದು.

ಈ ಸಮ್ಮೇಳನಕ್ಕೆ ಆಚಾರ್ಯ ಕೃಪಲಾನಿ, ಶ್ರೀಮತಿ ಸುಚೇತಾ ಕೃಪಲಾನಿ ಅವರುಗಳು ಆಗಮಿಸಿದ್ದರು. ಇಂದಿಗೂ ಇದರ ಸವಿನೆನಪು ಡಾ॥ ಹೊ. ಶ್ರೀನಿವಾಸಯ್ಯ ಅವರಲ್ಲಿ ಉಳಿದಿದೆ.

1947ರ ಸ್ವಾತಂತ್ರ್ಯ ಚಳವಳಿ

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಪ್ರದೇಶ ಮಹಾರಾಜರ ಆಡಳಿತದಲ್ಲಿತ್ತು. ಅದಕ್ಕಾಗಿ ರಾಷ್ಟ್ರದಾದ್ಯಂತ ಬಾರಿ ಚಳವಳಿಯನ್ನೇ ಹೂಡಲಾಯಿತು. ಡಾ॥ ಹೊ. ಶ್ರೀನಿವಾಸಯ್ಯ ಅವರು ಸ್ನೇಹಿತ ಗೋಪಾಲಕೃಷ್ಣರಾವ್ ಚಳವಳಿಯಲ್ಲಿ ಹೆಚ್ಚು ಭಾಗವಹಿಸಬೇಕೆಂದು ಮಾರನೆಯ ದಿವಸವೇ ಕಳ್ಳಪತ್ರಿಕೆ ಹೊರಡಿಸಲು

ಪ್ರಾರಂಭಿಸಿದರು. ಪತ್ರಿಕೆಗೆ ದಿನಕ್ಕೊಂದು ಹೆಸರು. ದಿನಕ್ಕೊಬ್ಬ ಸಂಪಾದಕ. ಪ್ರಕಟಿಸುತ್ತಿದ್ದ ಸ್ಥಳವೂ ಬೇರೆ ಬೇರೆ. ಪೋಲಿಸಿನವರಿಗೆ ಮೋಸಮಾಡಿ ಕಳ್ಳಪತ್ರಿಕೆಯನ್ನು ಹೊರಡಿಸುತ್ತಿದ್ದರು. ಪತ್ರಿಕೆಗಳಲ್ಲಿ ಚಳವಳಿಯ ಸಮಾಚಾರ ಬರುತ್ತಿರಲಿಲ್ಲ. ಆದರೆ ಮದರಾಸಿನಿಂದ ಈ ಬಗ್ಗೆ ಮಾಹಿತಿ ಬರುತ್ತಿದ್ದ ಇಂಡಿಯನ್ ಎಕ್ಸ್‌ಪ್ರೆಸ್‌ನ ಕೆಲವು ಭಾಗಗಳನ್ನು ಸ್ನೇಹಿತರಿಂದ ತರಿಸುತ್ತಿದ್ದರು. ಅವುಗಳನ್ನು ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಸ್ನೇಹಿತ ಜನಾರ್ಧನ ಕಳಿಸುತ್ತಿದ್ದ. ಇವರೇ ಅಂಚೆ ಕಚೇರಿಗೆ ಹೋಗಿ ಅಂಚೆಯನ್ನು ತರುತ್ತಿದ್ದರು. ಪೋಲಿಸಿನವನಿಗೆ ಇದು ಗೊತ್ತಾಯಿತು. ಡಾ॥ ಹೊ. ಶ್ರೀನಿವಾಸಯ್ಯ ಅವರು ಸಹ ಗುಪ್ತಪತ್ರಿಕೆ ಅವರಲ್ಲಿ ಕೊಟ್ಟು ಬೇರೆ ಕಡೆಗೆಲ್ಲಾ ಪ್ರಚಾರ ಮಾಡಿಸುತ್ತಿದ್ದರು. ಈ ಕಳ್ಳಪತ್ರಿಕೆಯನ್ನು ಎಲ್ಲಾ ಸರ್ಕಾರಿ ಅಧಿಕಾರಿಗಳಿಗೂ, ಪೊಲೀಸ್ ಅಧಿಕಾರಿಗಳಿಗೂ ಅಂಚೆ ಮೂಲಕ ಕಳಿಸಿಕೊಡುತ್ತಿದ್ದರು. ಈ ಕಾಗದ ಎಲ್ಲರಿಗೂ ಸೇರುತ್ತಿತ್ತೋ ಇಲ್ಲವೋ ಅಂತ ಅವರಿಗೆ ಬೇಕಾದ ಸ್ನೇಹಿತರಿಗೂ ಕಳಿಸಿದರು. ಒಮ್ಮೊಮ್ಮೆ ಬೇರೆ ಬೇರೆ ಪೋಸ್ಟ್ ಡಬ್ಬದಲ್ಲಿ ಹಾಕುತ್ತಿದ್ದರು. ಡಾ॥ ಹೊ. ಶ್ರೀನಿವಾಸಯ್ಯ ಅವರು ಕಲ್ಲಚ್ಚಿನ ಕಾಗದ ತಂದು ಮನೆಯ ಒಲೆಯಲ್ಲಿ ಸುಡುತ್ತಿದ್ದರು. ಮುದ್ರಣ ಆದ ಮೇಲೆ ಒಮ್ಮೆ ಇವರ ತಾಯಿಯವರು, "ಇದೇನೋ ಕಾಗದ ಸುಡುತ್ತಿದ್ದೀಯಾ ಕಾಗದದಲ್ಲಿ ಅಕ್ಷರ ಬೇರೆ ಕಾಣುತ್ತಿದೆ" ಅಂದರು. ಅದ್ಯಾವುದೋ ಹಳೆಕಾಗದ ಎಂದು ಶ್ರೀನಿವಾಸಯ್ಯ ಮರೆಮಾಚುತ್ತಿದ್ದರು.

ಕೈಬಾಂಬ್ ಪ್ರಸಂಗ

ಮಹಾರಾಜಾ ಮಿಲ್ಲಿನ ತಿಲಕ್ ಸಂಘದ ಸ್ನೇಹಿತರಾದ ಮುನಿಸ್ವಾಮಪ್ಪ, ಕೈಬಾಂಬ್ ಅಂತ ಹೇಳಿ ಕಂಟೋನ್‌ಮೆಂಟಿನಲ್ಲಿ ಸ್ನೇಹಿತರ ಮೂಲಕ ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಒಂದು ಗಂಟನ್ನು ಕೊಡಿಸಿದರು. ಬ್ಯಾಗನ್ನು ತೆಗೆದುಕೊಂಡು ಮನೆಗೆ ಬಂದು ಬಿಚ್ಚಿ ನೋಡಿದರೆ ಒಂದು ದೊಡ್ಡ ಬಾಟಲು. ಅದರಲ್ಲೇನೋ ಇತ್ತು. ಅದಕ್ಕೆ ಅಂಟಿಕೊಂಡಂತೆ ಬತ್ತಿ. ಇದು ಮನೆಯಲ್ಲಿ ಇಟ್ಟರೆ ತಾಪತ್ರಯ ಎಂದು ಎದುರಿಗಿರುವ ಮರದ ಮೇಲೆ ಡಾ॥ ಹೊ. ಶ್ರೀನಿವಾಸಯ್ಯ ಕಟ್ಟಿ ಇಟ್ಟರು. ಮತ್ತೊಂದನ್ನು ಮಲ್ಲೇಶ್ವರಂ ಹೈಸ್ಕೂಲಿನ ಕೆಮಿಸ್ಟ್ರಿ

ಲ್ಯಾಬೋರೇಟರಿ ಸುಡೋದಕ್ಕೆ ಬಳಸಿದರು. ಡಾ॥ ಹೊ. ಶ್ರೀನಿವಾಸಯ್ಯ ಅವರು ಮತ್ತು ನಾಗರಾಜು ಇಂಟರ್‌ಮಿಡಿಯಟ್ ಕಾಲೇಜಿಗೆ ಬಾಂಬ್ ಹಾಕಲು ಕೈಹಾಕಿದರು. ಇವರಿಗೆ ಧೈರ್ಯ ಜಾಸ್ತಿ. ದೇಶಕ್ಕೆ ಪ್ರಾಣ ಕೊಡಲೂ ಸಿದ್ಧ ಅಷ್ಟು ಧೈರ್ಯ, ಕೈಬಾಂಬುನ್ನು ಕಿಟಕಿಯ ಕನ್ನಡಿ ಹೊಡೆದು ಒಳಕ್ಕೆ ತೂರಿಸಿ ಇಟ್ಟು ಬತ್ತಿ ಹಚ್ಚಿದರು. ಓಡಿ ಬಂದು ದೂರ ಬರುವುದರಲ್ಲಿ ಬಾಂಬು ಸಿಡಿಯಿತು. ಎಲ್ಲರೂ ಓಡಿದರು. ಕಾಲೇಜಿನಲ್ಲಿ ಏನೋ ಆಯ್ತು ಅಂತ, ಎಲ್ಲರೂ ಜೊತೆ ಇವರೂ ಸೇರಿದರು. ಒಬ್ಬರನ್ನೂ ಒಳಗಡೆ ಬಿಡಲಿಲ್ಲ. ಅನಾಹುತ ಹೆಚ್ಚಾಗಿ ಅಗಿರಲಿಲ್ಲ. ಮತ್ತೊಂದು ಬಾಂಬ್, ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮನೆಗೆ ಹಾಕಬೇಕು ಎಂಬುದು ಡಾ॥ ಹೊ. ಶ್ರೀನಿವಾಸಯ್ಯ ಅವರ ಯೋಜನೆ. ಅವರನ್ನು ದಿವಾನಗಿರಿಯಿಂದ ಇಳಿಸಬೇಕು ಅನ್ನೋದೇ ಇವರ ಚಿಂತೆ. ಎರಡು ದಿವಸ ಸಂಚು ಹಾಕಿದರು. ಅವರಿದ್ದ ಕಾರಲ್‌ಟನ್ ಹೌಸ್ ಒಳಗೆ ಹೇಗೆ ಹೋಗೋದು. ಕಾವಲುಗಾರರು ಟಾರ್ಚ್‌ದೀಪ ಹಾಕಿ ಬೇಲಿನೆಲ್ಲಾ ನೋಡುತ್ತಿದ್ದರು. ಸದ್ಯ ತಪ್ಪಿಸಿಕೊಂಡೆವು ಅಂತ ಮನೆ ಸೇರಿದರು. ಇವರ ಕೆಲಸ ಅಲ್ಲಿಗೆ ಮುಗಿಯಲಿಲ್ಲ.

ಭೂಗತ ಪತ್ರಿಕೆ

ಡಾ॥ ಹೊ. ಶ್ರೀನಿವಾಸಯ್ಯ ಅವರು ಕಳ್ಳಪತ್ರಿಕೆ ಜೇಬಿನಲ್ಲಿಟ್ಟು ಕೊಂಡಿರುತ್ತಿದ್ದರು. ಗೊತ್ತಿದ್ದವರು ಸಿಕ್ಕಿದರೆ ಇದ್ದಕಿದ್ದ ಹಾಗೆ ಜೇಬಿಗೆ ಕೈ ಹಾಕಿ ತೆಗೆದು ಕೊಡುತ್ತಿದ್ದರು. ಅವರು ಮೂರು ಕಾಸು, ಒಂದಾಣೆ ಕೊಡುತ್ತಿದ್ದರು. ಅವರು ಓದಿ ಬೇರೆಯವರಿಗೆ ಕೊಡುತ್ತಿದ್ದರು ಅಥವಾ ಹರಿದು ಹಾಕುತ್ತಿದ್ದರು. ಹಾಗೆ ಸಿಕ್ಕಿಹಾಕಿಕೊಂಡು ಜೈಲಿಗೆ ವೆಂಕಟಾಚಾರ್ ಹೋದ್ರೂ ಅವನಂಗಡಿ ನೋಡಿಕೊಳ್ಳೋದ್ದಕ್ಕೆ ಬಾಬು ಅಂತ ಹುಡುಗ ಇದ್ದ. ಅಂಗಡಿಯಲ್ಲಿ ಅನೇಕ ಹಿರಿಯ ಮಿತ್ರರು ಬಂದು ಕುಳಿತುಕೊಳ್ಳುತ್ತಿದ್ದರು. ಹಾಗೆಯೇ ಪೋಲಿಸ್ ಸಿ.ಐ.ಡಿ. ರಾಘವೇಂದ್ರಾಚಾರ್‌ರು ಅಲ್ಲಿಗೆ ಬರುತ್ತಿದ್ದರು. ಒಂದು ಸಾರಿ ಪಕ್ಕದ ಮನೇಲಿ ಇದ್ದ ಪೋಲೀಸ್ ಸಿ.ಐ.ಡಿ. ರಾಘವೇಂದ್ರಾಚಾರ್‌ರವರು

ಗುಂಡೂರಾಯರ ಬಗೆಗೆ ಡಾ॥ ಹೊ. ಶ್ರೀನಿವಾಸಯ್ಯ ಅವರಲ್ಲಿ ವಿಚಾರಿಸಿದರು. ಇವರೆಲ್ಲ ಗಾಂಧೀ ಸಾಹಿತ್ಯ ಸಂಘದವರು ಗಾಂಧೀ ಭಕ್ತರು. ಯಾವ ಹಿಂಸಾತ್ಮಕ ಕಾರ್ಯದಲ್ಲೂ ಇವರಿಗೆ ಇಷ್ಟವಿಲ್ಲ. ರಚನಾತ್ಮಕ ಕಾರ್ಯ ಮಾಡುವುದಷ್ಟೆ ಇವರ ಉದ್ದೇಶ ಎಂದು ಉತ್ತರಿಸಿದರು. ಆಗ "ಪೌರವಾಣಿ" ಎಂಬ ಪತ್ರಿಕೆಯನ್ನು ಶ್ರೀ ಎಚ್.ಎಸ್. ದೊರೆಸ್ವಾಮಿಯುವರು ಪ್ರಕಟಿಸುತ್ತಿದ್ದರು. ಶ್ರೀ ಗುಂಡೂರಾಯರು ಮನೆಯಲ್ಲಿದ್ದ ಪತ್ರಿಕೆ ನೋಡಿದರು. ಇದೆಲ್ಲಿಂದ ಬಂತು? ಎಂದು ಪ್ರಶ್ನಿಸಿದರು. ಮೂರು ಕಾಸು ಕೊಟ್ಟೆ ಕೊಟ್ಟರು. ಡಾ॥ ಹೊ. ಶ್ರೀನಿವಾಸಯ್ಯ ಅವರ ಮನೆಯನ್ನು ಶೋಧಿಸುವರೆಂದು ಸುದ್ದಿ ತಿಳಿಯಿತು. ಆ ದಿನ ಗಾಂಧೀಜಯಂತಿ ಇರಬೇಕು. ಡಾ॥ ಹೊ. ಶ್ರೀನಿವಾಸಯ್ಯ ಅವರು ರಾಮಮಂದಿರದಲ್ಲಿ ಮಲಗುತ್ತಿದ್ದರು. ಮಾರನೆಯ ದಿನ ಸುಮಾರು ರಾತ್ರಿ ಹನ್ನೆರಡುವರೆ ಗಂಟೆಯಲ್ಲಿ ಪೋಲಿಸಿನವರು ಡಾ॥ ಹೊ. ಶ್ರೀನಿವಾಸಯ್ಯ ಅವರ ಮನೆ ಬಾಗಿಲು ತಟ್ಟಿದರು. ಅವರ ತಾಯಿ ಬಾಗಿಲು ತೆಗೆದರು. ಪೋಲೀಸಿನವರು ಬಂದಿದ್ದರು. ಇನ್ಸ್‌ಪೆಕ್ಟರ್ ರುದ್ರಪ್ಪ ಅವರ ಜೊತೆ ಎಂಟು ಜನ ಪೋಲೀಸ್ ನಿಂತಿದ್ದರು. ಜಿಲ್ಲಾಧಿಕಾರಿಗಳ ಆದೇಶವಿಲ್ಲದೆ ಹಾಗೆ ಬರುವ ಹಾಗಿಲ್ಲ. ಶೋಧಿಸುವಂತೆಯೂ ಇಲ್ಲ. ಅದರಲ್ಲಿ ಹೊ. ಶ್ರೀನಿವಾಸಯ್ಯ ಅವರ ವಿಳಾಸ ಇದ್ದುದಲ್ಲದೆ ಮನೆ ಶೋಧಿಸುವ ಅಧಿಕಾರ ನೀಡಲಾಗಿತ್ತು. ಅವರ ಕೊಠಡಿಯನ್ನು ಶೋಧಿಸುತ್ತಿದ್ದರು. ಪೋಲೀಸಿನವರು ಬಂದದ್ದು ಬಾಂಬ್ ಹಾಗೂ ಕಳ್ಳಪತ್ರಿಕೆ ಹುಡುಕಲು. ಮನೇಲಿ ಏನೂ ಸಿಗಲಿಲ್ಲ. ಪಕ್ಕದಲ್ಲಿದ್ದ ಗಾಂಧೀ ಸಾಹಿತ್ಯ ಸಂಘವನ್ನು ಶೋಧಿಸಿದರು. ಡಾ॥ ಹೊ. ಶ್ರೀನಿವಾಸಯ್ಯ ಅವರನ್ನು ಪೋಲೀಸ್ ವ್ಯಾನಿನಲ್ಲಿ ಕುಳಿತುಕೊಳ್ಳಲು ಹೇಳಿದರು. ತಾಯಿ ಪೋಲಿಸರಲ್ಲಿ ಮಗನನ್ನು ಬಿಡಲು ಬೇಡಿಕೊಂಡರು. ಇವರು ಹೋಗಿ ವ್ಯಾನಿನಲ್ಲಿ ಕುಳಿತರು. ನಂತರ ನಾಳೆ ಬೆಳಗ್ಗೆ ಸ್ಟೇಷನ್‌ಗೆ ಬಂದು ವರದಿ ಮಾಡಿಕೊಳ್ಳಿ

ಎಂದು ಹೇಳಿ ಅವರನ್ನು ಬಿಡುಗಡೆ ಮಾಡಿದರು. ಅಂದಿನ ಪೋಲಿಸ್ ಆದೇಶದ ಪ್ರಕಾರ ಡಾ॥ ಹೊ. ಶ್ರೀನಿವಾಸಯ್ಯ ಅವರು ಪ್ರತಿದಿನ ಪೋಲೀಸ್ ಸ್ಟೇಷನ್ನಿಗೆ ಬಂದು ಹೋಗಬೇಕಾಗಿತ್ತು. ಅದಾದ ಎರಡು ಮೂರು ದಿನದಲ್ಲೇ ಇದ್ದ ಒಂದು ಬಾಂಬನ್ನು, ಡಾ॥ ಹೊ. ಶ್ರೀನಿವಾಸಯ್ಯ ಅವರು ಸ್ಟೇಷನ್ ಮುಂದೆ ಹಚ್ಚಿದರು. ಸ್ವಲ್ಪ ಗಲಾಟೆಯೂ ಆಯ್ತು. ನಾಲ್ಕೈದು ದಿನಗಳಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಬಿಟ್ಟರು. ಮಹಾರಾಜರು ಘೋಷಣೆ ಹೊರಡಿಸಿದರು. ಪ್ರಜಾಪ್ರಭುತ್ವದ ಆಧಾರದ ಮೇಲೆ ಪ್ರಜಾಪ್ರತಿನಿಧಿ ಸಭೆ ಕಾರ್ಯಗತವಾಯಿತು. ಶ್ರೀ ಕೆ.ಸಿ.ರೆಡ್ಡಿಯವರು ಮುಖ್ಯಮಂತ್ರಿಯಾದರು. ಅಂದು ದೊಡ್ಡ ಸಮಾರಂಭವೇ ನಡೆಯಿತು. ಮೈಸೂರು ಸ್ವತಂತ್ರ ಪ್ರಾಂತ್ಯವಾಗಿ ಉಳಿಯಿತು.

ಕಾಲೇಜು ದಿನಗಳ ನೆನಪು

ಡಾ॥ ಹೊ. ಶ್ರೀನಿವಾಸಯ್ಯ ಅವರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿದ್ದಾಗಲೇ 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಮುಷ್ಕರ ಮುಗಿದ ಬಳಿಕ ಕಾಲೇಜಿಗೆ ಹೋದರು. 'ವಂದೇ ಮಾತರಂ' ತರಗತಿ ಸೇರಿದರು. ಎಲ್ಲರೂ ಸೇರಿ ಹಾಡುವುದು ಪದ್ಧತಿಯಾಗಿತ್ತು. ಇವರಿಗೆ ಚೆನ್ನಾಗಿ ಹಾಡಲು ಬರುತ್ತಿತ್ತು. ರೈಟ್ ಹಾನರಬಲ್ ಸಿಲ್ವರ್‌ಟಂಗ್ ಶ್ರೀನಿವಾಸಶಾಸ್ತ್ರಿ ಅವರ ಭಾಷಣ ಕೇಳಿದರು. ವರಕವಿ ದ.ರಾ.ಬೇಂದ್ರೆ ಈ ಸಮಾರಂಭದಲ್ಲಿ ಗಂಗಾವತರಣವನ್ನು ಹಾಡಿದ್ದರು. ಅಲ್ಲಿ ಎಲ್ಲಾ ನಾಯಕರನ್ನು ಭೇಟಿ ಆಗಬಹುದಾದ ಅವಕಾಶವಿತ್ತು. ಆಗ ಇವರ ಉಡುಪು ದಟ್ಟಿ ಪಂಚೆ, ಕಾಲರ್ ಇಲ್ಲದ ಅಂಗಿ. ಗಾಂಧೀಟೋಪಿ. ಬೆಳಗ್ಗೆ ಕಾಲೇಜಿನಲ್ಲಿ ವ್ಯಾಯಾಮಕ್ಕೆಂದು ಒಂದು ಖಾಕಿ ನಿಕ್ಕರ್. ಆ ದಿನಗಳಲ್ಲಿ ಕಾಲೇಜಿಗೆ ನಡೆದೇ ಹೋಗಬೇಕಿತ್ತು.

ಸಂಸ್ಕೃತವನ್ನು ಎರಡನೇ ಭಾಷೆಯನ್ನಾಗಿ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ಇವುಗಳನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡರು. ಇವರಿಗೆ ವಿದ್ಯಾರ್ಥಿ ವೇತನ ಆಗ ಹನ್ನೊಂದು ರೂಪಾಯಿ ಬರುತ್ತಿತ್ತು. ಬಡಹುಡುಗ ಎಂದು ಉಚಿತವಾಗಿ ಮಧ್ಯಾಹ್ನದ ವೇಳೆ ಒಂದು ದೊನ್ನೆ ಅನ್ನ ಕೂಡ ಸಿಗುತ್ತಿತ್ತು. ಇವರಿಗೆ ಹೋಟೆಲ್‌ಗೆ ಹೋಗುವುದಂತೂ ಗೊತ್ತೇ ಇರಲಿಲ್ಲ. ಮನೇಲಿ ತಿಂಡಿ ಕಾಫಿ ಮಾಡಿದರೆ ಉಂಟು, ಇಲ್ಲದಿದ್ದರೆ ಇಲ್ಲ. ಸ್ಕಾಲರ್‌ಷಿಪ್ ದುಡ್ಡಿನಲ್ಲಿ ಪುಸ್ತಕ, ಬಟ್ಟೆ ಪಡೆಯುತ್ತಿದ್ದರು. ಇವರು ಬಡವರಾದುದರಿಂದ ಕಾಲೇಜು ಫೀಸು ಕೊಡಬೇಕಾಗಿರಲಿಲ್ಲ.

ವಿದ್ಯಾರ್ಥಿ ವೇತನ

ಕಡುಬಡತನದಿಂದ ಬಂದ ಹೊ. ಶ್ರೀನಿವಾಸಯ್ಯ ಅವರು ತಮ್ಮ ಇಂಜೀನಿಯರಿಂಗ್ ಪದವಿ ಮುಗಿಸಿದ್ದು ಸರ್ಕಾರ ನೀಡಿದ ಸ್ಕಾಲರ್‌ಶಿಪ್‌ನಿಂದ. ಕುಟುಂಬಕ್ಕೆ ಪರಿಚಯವಿದ್ದ ಸರ್ಕಾರಿ ಕಛೇರಿಯ ಜವಾನ ಶ್ರೀ ತಿಮ್ಮಯ್ಯನವರ ನೆರವಿನಿಂದ ವಿದ್ಯಾರ್ಥಿ ವೇತನ ದೊರಕಿತು. ಶ್ರೀ ತಿಮ್ಮಯ್ಯ ಅವರು ಡಾ॥ ಹೊ. ಶ್ರೀನಿವಾಸಯ್ಯ ಅವರನ್ನು ಮಂತ್ರಿಯವರಲ್ಲಿಗೆ ಕರೆದುಕೊಂಡು ಹೋಗಿ ಸಹಾಯ ದೊರಕಿಸಿಕೊಟ್ಟು "ನೀನು ಒಬ್ಬ ದೊಡ್ಡ ಇಂಜಿನಿಯರ್ ಆಗು" ಎಂದು ಹರಸಿದುದ್ದನ್ನು ಕೃತಜ್ಞತಾ ಭಾವದಿಂದ ಸ್ಮರಿಸುತ್ತಾರೆ. ಇಂಜಿನಿಯರಿಂಗ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದರೂ ರಜಾದಿನಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡಿ ಹಣ ಸಂಪಾದಿಸುತ್ತಿದ್ದರು. ಅಲ್ಲಿ ಕಾರ್ಯ ನಿರ್ವಹಿಸುವಾಗ ಯಾವ ಕಡತಗಳನ್ನೂ ಬಾಕಿ ಉಳಿಸದೆ ಎಲ್ಲರ ಮೆಚ್ಚುಗೆ ಪಡೆದರು. ಸಂಬಳದ ಹಣದಲ್ಲಿ ಒಂದು ಸೈಕಲ್ ಕೊಂಡರು. ಒಮ್ಮೆ ಶ್ರೀನಿವಾಸಯ್ಯ ಅವರ ಮೇಲಾಧಿಕಾರಿಗಳು "ಕಛೇರಿಯ ಉಸ್ತುವಾರಿಗೆ ಅಧಿಕಾರಿಗಳು ಬರುತ್ತಾರೆ, ಆ ಸಂದರ್ಭದಲ್ಲಿ (ಬಿಳಿ) ಖಾದಿಟೋಪಿ ಹಾಕಬೇಡ, ಅಧಿಕಾರಿಗಳಿಗೆ ಟೋಪಿ ಕಂಡರೆ ಕೋಪ ಬರುತ್ತದೆ" ಎಂದು ಎಚ್ಚರಿಸಿದರೂ ಸಹ ಅದಕ್ಕೆ ಒಪ್ಪದೆ ಖಾದಿಟೋಪಿ ಧರಿಸಿ ತಮ್ಮ ಧೈರ್ಯ ಮತ್ತು ರಾಷ್ಟ್ರಪ್ರೇಮ ಪ್ರದರ್ಶಿಸಿದರು. ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಾಂಗದಲ್ಲಿದ್ದಾಗ ಉತ್ತರ ಭಾರತದ ಪ್ರವಾಸಕ್ಕೆ ಹಣದ ಸಹಾಯ

ಮಾಡಿದ ಶ್ರೀ ಸುಬ್ಬರಾಮು ಅವರ ಉಪಕಾರ ಸ್ಮರಿಸಿ ಹೆಚ್.ಎ.ಎಲ್‌ನಲ್ಲಿ ಕೆಲಸಕ್ಕೆ ಸೇರಿದಾಗ ಕಂತುಗಳಲ್ಲಿ ಸಾಲ ಹಿಂತಿರುಗಿಸಿದ ಪ್ರಾಮಾಣಿಕತೆ ಇವರದು. ರಜಾ ದಿನಗಳಲ್ಲಿ ತಾಯಿಯ ಆದೇಶದಂತೆ ತಾಯಿ ತವರೂರಾದ ನಾಗಮಂಗಲ ತಾಲ್ಲೂಕಿನ ಅದಮಗೆರೆಗೆ ಮತ್ತು (ತಂದೆ ಊರಾದ ಚೌದರೀ ಕೊಪ್ಪಲು) ಹೋಗಿ ಅಲ್ಲಿಯ ವ್ಯವಸಾಯದ ಎಲ್ಲ ಅನುಭವ ಪಡೆದು ಅಲ್ಲಿಯೂ ಎಲ್ಲರ ಪ್ರೀತಿ ಗಳಿಸಿದರು.

ಊರಿನ ಭಾಂದವ್ಯ

ತಾಯಿ ತಿಮ್ಮಮ್ಮ ಪೂರ್ವಿಕರ ಜಮೀನಿನ ಸ್ವಾದೀನಕ್ಕೆ ಬಹಳಷ್ಟು ಯಾತನೆ ಪಟ್ಟರು. ಹೊ. ಶ್ರೀನಿವಾಸಯ್ಯ ಅವರು ದೊಡ್ಡವರಾದಾಗ ಸ್ವಗ್ರಾಮ ಚೌದ್ರಿಕೊಪ್ಪಲಿನ ತುಂಡುಭೂಮಿ ಮಾರಲು ಮುಂದಾದಾಗ ಹಿರಿಯರಾದ ತಟ್ಟೇಕೆರೆ ಮಾದಪ್ಪಗೌಡರು ತಿಳಿಹೇಳಿ ಗ್ರಾಮದ ಬಾಂದವ್ಯ ಕಡಿದುಕೊಳ್ಳಬೇಡ ಎಂದು ಒಪ್ಪಿಸಿ ವಾಪಸ್ಸು ಕಳುಹಿಸಿದರು. ಮುಂದೆ ಈ ಜಾಗವನ್ನು 'ಶ್ರೀ ರಾಮ ಮಂದಿರ' ನಿರ್ಮಾಣಕ್ಕೆ ಗ್ರಾಮಕ್ಕೆ ದಾನ ಬರೆದುಕೊಟ್ಟರು. ಬೆಂಗಳೂರಿನಲ್ಲಿ ನೆಲೆಸಿದ್ದ 14 ಕುಟುಂಬದ ಚೌದ್ರಿಕೊಪ್ಪಲಿನ ಗ್ರಾಮಸ್ಥರೆಲ್ಲರನ್ನೂ ಸಂಘಟಿಸಲು ಮನೆಗೆ ಆಹ್ವಾನಿಸಿ, ಬೋಜನ ಏರ್ಪಡಿಸಿ ತಿಂಗಳಿಗೆ 10ರೂವಂತಿಗೆ ಕೊಡುವಂತೆ ಮಾಡಿ 'ಚೌದ್ರಿ ಕೊಪ್ಪಲು ರೈತ ಸೇವಾಸಂಘ' ಸ್ಥಾಪಿಸಿದರು. ಶ್ರೀ ರಾಮಮಂದಿರ ನಿರ್ಮಿಸಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರನ್ನು, ಕರೆಸಿ ಪ್ರಾರಂಭೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಊರಿನವರನ್ನು ಸೇರಿಸಿ 'ಶ್ರೀ ರಾಮ ಯುವಕ ಸಂಘ' ನೊಂದಾಯಿಸಿದರು. ಮಂತ್ರಿಗಳನ್ನು ಆಹ್ವಾನ ಮಾಡಿ ಬೀದಿದೀಪ ಹಾಕಿಸಲಾಯಿತು. ತಿಂಗಳಿಗೊಮ್ಮೆ ಬೆಂಗಳೂರಿನಲ್ಲಿರುವ ಊರಿನವರ ಮನೆಯಲ್ಲಿ ಸೇರಿ ಸಮೂಹ ಭೋಜನ ಮಾಡಿ ಊರಿನ ಪ್ರಗತಿಗೆ ಶ್ರಮಿಸಬೇಕೆಂಬ ಸೇವಾಮನೋಭಾವದ ಅರಿವನ್ನು ಜನರಲ್ಲಿ ಉಂಟುಮಾಡಿ ಹಳ್ಳಿಯ ಜನರಿಗೆ ಆದರ್ಶಪ್ರಾಯರಾಗಿದ್ದಾರೆ.

ಬೆಂಗಳೂರಿನಲ್ಲಿ ಸೇವಾ ಕಾರ್ಯ

ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಶ್ರೀ ರಾಮಮಂದಿರ ಸಮಿತಿ ರಚನೆಯ ಮುಂದಾಳುತನವನ್ನು ಡಾ॥ ಹೊ. ಶ್ರೀನಿವಾಸಯ್ಯ ಅವರು ವಹಿಸಿದರು. ಮಲ್ಲೇಶ್ವರಂನ ತೆಂಗಿನಮರದ ರಸ್ತೆಯ ಶ್ರೀರಾಮಮಂದಿರ ನಿರ್ಮಾಣವು ತಂದೆ ಹೊನ್ನಪ್ಪನವರ ಶ್ರಮದಿಂದ 1928ರಲ್ಲಿ ನಡೆದು ಅದರ ಅಭಿವೃದ್ಧಿಯ ಜವಾಬ್ದಾರಿ ತಂದೆಯಿಂದ ಅವರ ಮಗ ಡಾ॥ ಹೊ. ಶ್ರೀನಿವಾಸಯ್ಯ ಅವರ ಭಾಗಕ್ಕೆ ಬಂದದ್ದು ಒಂದು ಪುಣ್ಯ, ವಿಶೇಷ ಎಂದು ಅದಕ್ಕಾಗಿ ದುಡಿದರು. ಅಂದು ರಾಜ್ಯದ ಹಣಕಾಸು ಸಚಿವರಾಗಿದ್ದ ಶ್ರೀ ಹೆಚ್.ಸಿ. ದಾಸಪ್ಪ ಮತ್ತು ಕಂದಾಯ ಸಚಿವರಾಗಿದ್ದ ಶ್ರೀ ಕಡಿದಾಳ್ ಮಂಜಪ್ಪ ಅವರನ್ನು ಆಹ್ವಾನಿಸಿ ಕಾರ್ಯಕ್ರಮ ಏರ್ಪಡಿಸಿದರು. ಅಂದು ಟೌನ್‌ಪ್ಲಾನ್ ಕಮಿಟಿ ಅಧ್ಯಕ್ಷರಾಗಿದ್ದ ಶ್ರೀ. ಜೆ. ಲಿಂಗಯ್ಯ ಅವರ ನೆರವಿನಿಂದ ಕೇವಲ 350 ರೂಗಳಿಗೆ 30x40 ಅಡಿ ನಿವೇಶನ



ಅಮೆರಿಕಾದ ಇಲಿನಾಯ್ಸ್‌ನಲ್ಲಿ 1997ರಲ್ಲಿ ಕನ್ನಡ ರಾಜ್ಯೋತ್ಸವದಲ್ಲಿ
ಡಾ॥ ಹೊ. ಶ್ರೀನಿವಾಸಯ್ಯನವರು ಭಾಷಣ ಮಾಡುತ್ತಿರುವುದು

ಮಂಜೂರು ಮಾಡಿಸಿಕೊಂಡು ರಾಮಮಂದಿರಕ್ಕೆ ಆದಾಯ ಬರುವಂತೆ ಮಾಡಿದರು. 1953ರಲ್ಲಿ 'ಶ್ರೀ ರಾಮ ಕೋ ಅಪರೇಟಿವ್ ಬ್ಯಾಂಕ್' ಪ್ರಾರಂಭಿಸಿ ಅದರ ಸ್ಥಾಪಕ ಕಾರ್ಯದರ್ಶಿಯಾಗಿ ದುಡಿದು ಬುನಾದಿ ಹಾಕಿದ್ದು, ಅಲ್ಲಿ ಇಂದು ಬ್ಯಾಂಕ್ ಕೋಟ್ಯಾಂತರ ರೂಗಳ ವಹಿವಾಟು ನಡೆಸುವುದರ ಜೊತೆಗೆ ಹತ್ತಾರು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದೆ. ಶ್ರೀ ರಾಮಮಂದಿರಕ್ಕೆ 100X170 ಅಡಿ ಸೈಟನ್ನು 99ವರ್ಷಗಳ ಲೀಸ್ ಮೇಲೆ ಪಡೆಯುವಲ್ಲಿ ಡಾ॥ ಹೊ. ಶ್ರೀನಿವಾಸಯ್ಯ ಅವರು ಯಶಸ್ವಿಯಾದರು. ಕೋಡಿ ಆಂಜನೇಯ ಸ್ವಾಮಿ ದೇವಾಲಯದ ಕಾರ್ಯದಲ್ಲಿಯೂ ಇವರದೇ ಪ್ರಮುಖ ಪಾತ್ರ. ಶೇಷಾದ್ರಿಪುರಂನಲ್ಲಿ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್‌ನ್ನು ಮಿತ್ರರೊಡನೆ ಪ್ರಾರಂಭಿಸಿ ಅದರ ಸ್ಥಾಪಕ ಅಧ್ಯಕ್ಷರಾದರು. ಈ ಎಲ್ಲ ಸಂಸ್ಥೆಗಳ ನೆರವು ಪಡೆದು ಗಾಂಧೀ ಸಾಹಿತ್ಯ ಸಂಘವನ್ನು ಹೆಚ್ಚು ಚಟುವಟಿಕೆಗಳಿಂದ ಬೆಳೆಸಿದರು.

ಭಾರತ ಸೇವಾದಳ

ಶ್ರೀ ಹರ್ಡೀಕರ್ ನೇತೃತ್ವದಲ್ಲಿ ಪ್ರಾರಂಭವಾದ ಸೇವಾದಳ ಅಖಿಲ ಭಾರತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಡಾ॥ ಹೊ. ಶ್ರೀನಿವಾಸಯ್ಯ ಅವರು ಸೇವಾದಳದ ಕವಾಯತು ಮಾಡುತ್ತಿದ್ದರು. ಸೇವಾದಳದ ಶಿಬಿರಗಳು ಮತ್ತು ಅದರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇದರಿಂದ ಇವರ ಉಡುಪು ಸರಳವಾಗಿತ್ತು. ಒಂದು ಖಾದಿನಿಕ್ಕರ್, ಬಿಳಿ ಷರಟು, ಕಾಲಿಗೆ ಇದ್ದರೆ ಚಪ್ಪಲಿ ಇಲ್ಲದಿದ್ದರೆ ಅದೂ ಇಲ್ಲ. ಸೇವಾದಳದ ಪ್ರಭಾವದಿಂದ ಕಾಂಗ್ರೆಸಿನ ಅಧಿವೇಶನ ಮತ್ತು ಸಮ್ಮೇಳನ ನಡೆದಾಗಲೆಲ್ಲಾ ಭಾಗವಹಿಸುತ್ತಿದ್ದರು. 1951ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಬೆಂಗಳೂರಿನಲ್ಲಿ ನಡೆದಾಗ ಇವರು ಒಬ್ಬ ಸೇವಾದಳ ಕಾರ್ಯಕರ್ತನಾಗಿ ಕಾಂಗ್ರೆಸ್ ಸಮಿತಿ ಸದಸ್ಯರ ಮೇಲ್ವಿಚಾರಣೆ ನೋಡಿಕೊಂಡರು.

ಕಾಂಗ್ರೆಸ್ ವಸ್ತುಪ್ರದರ್ಶನ

ಬೆಂಗಳೂರಿನಲ್ಲಿ ವಸ್ತುಪ್ರದರ್ಶನ ಅಂದರೆ ಮೊದಲು ಪ್ರಾರಂಭವಾಗಿದ್ದು ಕಾಂಗ್ರೆಸ್ ವಸ್ತುಪ್ರದರ್ಶನ. ಈಗಿನ ಸುಭಾಷ್‌ನಗರದಲ್ಲಿ ಒಂದು ಭಾರಿ ಕೆರೆ ಇತ್ತು. ಇವರು ನೋಡಿದ ಹಾಗೆ ಇಲ್ಲಿ ನೀರು ತುಂಬಿರುತ್ತಿತ್ತು. ಚಿಕ್ಕವಯಸ್ಸಿನಲ್ಲಿ ಇಲ್ಲಿ ದೇವರ ತೆಪ್ಪೋತ್ಸವ ನಡೆಯುತ್ತಿದ್ದುದ್ದನ್ನು ಜ್ಞಾಪಿಸಿಕೊಳ್ಳುತ್ತಾರೆ. ಶ್ರೀ ಎಚ್.ಸಿ.ದಾಸಪ್ಪನವರು ಬೆಂಗಳೂರು ಅಭಿವೃದ್ಧಿ ವಿಚಾರದಲ್ಲಿ ಯೋಜನೆಗಳನ್ನು ಹಾಕುತ್ತಿದ್ದಾಗ ಅಲ್ಲಿ ಒಬ್ಬ ಇಂಜಿನಿಯರ್ ಸುಭಾಷ್‌ನಗರದ ಸುತ್ತಲೂ ಅಂಗಡಿಗಳನ್ನು ಕಟ್ಟಿಸಿ ಒಂದು ಸ್ಥಿರವಾಗಿ ವಸ್ತು ಪ್ರದರ್ಶನ ಸ್ಥಳ ಮಾಡುವ ಯೋಜನೆ ಹಾಕಿ ತೋರಿಸುತ್ತಿದ್ದುದನ್ನು ಜ್ಞಾಪಿಸಿಕೊಳ್ಳುತ್ತಾರೆ. ಗಾಂಧೀ ಸಾಹಿತ್ಯದ ಪುಸ್ತಕಗಳನ್ನು (ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ) ಮಾರಾಟ ಮಾಡುತ್ತಿದ್ದರು. ನಂತರ ಈ ಪ್ರದರ್ಶನವೂ ಸಹ ವರ್ಷವರ್ಷವೂ ನಡೆಯಲು ಪ್ರಾರಂಭವಾಯಿತು. ಕಾಂಗ್ರೆಸ್ ಪ್ರದರ್ಶನವು ಶ್ರೀ ವಿ.ಎಸ್. ಕೃಷ್ಣಯ್ಯರ್‌ರ ಕಾರ್ಯದರ್ಶಿತ್ವದಲ್ಲಿ ಸುಮಾರು ಹತ್ತು ಹನ್ನೆರಡು ವರ್ಷ ಕಾಲ ನಡೆಯುತ್ತಿತ್ತು. ಇದರಿಂದ ಕಾಂಗ್ರೆಸ್ ಸಂಸ್ಥೆಗೆ ಸ್ವಲ್ಪ ಹಣ ಕೂಡಿಸಲು ಅವಕಾಶವಾಗುತ್ತಿತ್ತು. ವಿದ್ಯಾರ್ಥಿ ದೆಸೆಯಿಂದಲೇ ವಿದ್ಯಾರ್ಥಿ ಕಾಂಗ್ರೆಸ್, ಯುವಕ ಕಾಂಗ್ರೆಸ್‌ನಲ್ಲಿದ್ದು ರಚನಾತ್ಮಕ ಕಾರ್ಯದಲ್ಲಿ ಇವರು ಮುಂದಾಳು. 1942ರ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣತೆತ್ತ ಶಂಕರಪ್ಪ ಎಂಬುವನ ಹೆಸರಿನಲ್ಲಿ ವಿದ್ಯಾರ್ಥಿನಿಲಯ ನಡೆಸುತ್ತಿದ್ದರು. ಕಾಂಗ್ರೆಸ್ ಸಂಸ್ಥೆಯ ಕೆಲಸಗಾರರಿಗೆ ಪ್ರದರ್ಶನದಲ್ಲಿ ಓಡಾಡಲು ಇದು ಒಂದು ಅವಕಾಶ. ಕೃಷ್ಣಯ್ಯರ್‌ರವರಿಂದ ವಸ್ತುಪ್ರದರ್ಶನಕ್ಕಾಗಿ ಒಂದು ಪಾಸು ಬರುತ್ತಿದ್ದುದ್ದನ್ನು ಡಾ॥ ಹೊ. ಶ್ರೀನಿವಾಸಯ್ಯ ಅವರು ಸ್ಮರಿಸುತ್ತಾರೆ.

ರಾಜಾಜಿ ದರ್ಶನ

ಶ್ರೀ ಹೊ. ಶ್ರೀನಿವಾಸಯ್ಯ ಅವರಿಗೆ 1945ರಲ್ಲಿ ರಾಜಾಜಿಯವರ ದರ್ಶನವಾಯಿತು. ಅವರು ಮಿತ್ರರ ಮನೇಲಿ ಇಳಿದುಕೊಂಡಿದ್ದರು. ಶ್ರೀ ಹೊ. ಶ್ರೀನಿವಾಸಯ್ಯ ಅವರು ಗಾಂಧೀ ಸಾಹಿತ್ಯ ಸಂಘಕ್ಕೆ ರಾಜಾಜಿಯವರನ್ನು ಕರೆದು ಭಾಷಣ ಮಾಡಿಸಬೇಕು ಅಂತ ಹೋಗಿ ಭೇಟಿಮಾಡಿ ಆಹ್ವಾನಿಸಿದರು. "ಈಗ ಸಾಧ್ಯವಿಲ್ಲ ಮುಂದಿನ ಸಾರಿ ನೋಡೋಣ" ಎಂದು ರಾಜಾಜಿ ಕನ್ನಡದಲ್ಲಿ ಹೇಳಿದರು. ಇವರಿಗೆ ಆಶ್ಚರ್ಯವಾಯಿತು. ತಮಗೆ ಇಷ್ಟು ಚೆನ್ನಾಗಿ ಕನ್ನಡ ಬರುತ್ತಲ್ಲಾ, ಎಲ್ಲಿ ಕಲಿತುಕೊಂಡಿರಿ ಎಂದು ಕೇಳಿದ್ದಕ್ಕೆ ರಾಜಾಜಿ ಅವರು ಹೇಳಿದರು. "ನಾನು ಬೆಂಗಳೂರಿನಲ್ಲಿ ಓದಿದ್ದು" ಅಂದರು. ಶ್ರೀ ಹೊ. ಶ್ರೀನಿವಾಸಯ್ಯ ಅವರು ಒಂದು ಪುಸ್ತಕ ಕೊಟ್ಟರು. ಅದರಲ್ಲಿ ಕನ್ನಡದಲ್ಲಿ "ಗಾಂಧೀ ಸಾಹಿತ್ಯ ಸಂಘಕ್ಕೆ ನನ್ನ ಆಶೀರ್ವಾದಗಳು."– ಚಕ್ರವರ್ತಿ ರಾಜಗೋಪಾಲಚಾರ್ಯ 7.10.1945 ಎಂದು ಬರೆಸಿಕೊಂಡರು. ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ಜೊತೆ ಕೆಲವು ರಚನಾತ್ಮಕ ಕಾರ್ಯಕರ್ತರ ಸಭೆಗೆ ಹೋಗಿದ್ದಾಗ ರಾಜಾಜಿ ಅವರ ವಾಣಿಯನ್ನು ಕೇಳುವ ಅವಕಾಶ ಸಿಕ್ಕಿದ್ದನ್ನು, ಹಾಗೂ ಹತ್ತಿರ ಕುಳಿತು ಚರ್ಚಿಸುವ ಅವಕಾಶವೂ ದೊರೆತಿದ್ದನ್ನು, ಸ್ಮರಿಸುವುದನ್ನು ಡಾ॥ ಹೊ. ಶ್ರೀನಿವಾಸಯ್ಯ ಅವರು ಮರೆಯುವುದಿಲ್ಲ.

ವಿನೋಬಾ ಭೇಟಿ

ಆಚಾರ್ಯ ವಿನೋಬಾ ಗಾಂಧೀಜಿಯವರ ಆಧ್ಯಾತ್ಮಿಕ ಉತ್ತರಾಧಿಕಾರಿ. ವರ್ಧಾದ ಬಳಿ ಇರುವ ಸಣ್ಣ ಹಳ್ಳಿ ಪವನಾರ್ ಎಂಬಲ್ಲಿ ವಿನೋಬಾಜಿ ಅವರು ನೆಲೆಸಿ ಆಶ್ರಮವನ್ನು ಸ್ಥಾಪಿಸಿದರು. ಅಲ್ಲಿಯೇ ಕೊನೆ ಉಸಿರೆಳೆಯುವತನಕ ದುಡಿದ ನಮ್ಮ ದೇಶದ ಮಹರ್ಷಿ ಆದರು. 11.9.1982ರಂದು ಆಚಾರ್ಯ ವಿನೋಬಾರವರ 88ನೇ ಹುಟ್ಟುಹಬ್ಬ.ವಿನೋಬಾ ಕಾರ್ಯದರ್ಶಿಯಾಗಿದ್ದ ಶ್ರೀ ಜಯದೇವ್‌ರಿಂದ ಶ್ರೀ ಹೊ. ಶ್ರೀನಿವಾಸಯ್ಯ ಅವರಿಗೆ ಪವನಾರ್ ಆಶ್ರಮಕ್ಕೆ ಬರಲು ಆಹ್ವಾನ

ನೀಡಿದರು. ಪವನಾರ್‌ನಲ್ಲಿ ಅವರು ಪಡೆದ ಅನುಭವವನ್ನು ಮನೋಜ್ಞವಾಗಿ ಚಿತ್ರಿಸುತ್ತಾರೆ. ಪಕ್ಕದಲ್ಲಿಯೇ ದಾಮ್ ನದಿ. ವರ್ಧಾಕ್ಕೆ ಹೋಗಲು ಈ ನದಿ ದಾಟಬೇಕು. ನದಿ ದಾಟುವ ಮೊದಲೇ ಪವನಾರ್ ಆಶ್ರಮ. ನದಿ ಹರಿಯುವ ಶಬ್ದ ಬಿಟ್ಟರೆ ಎಲ್ಲೆಲ್ಲೂ ನೀರವ ನಿಃಶಬ್ದ ವಾತಾವರಣ. ವಿನೋಬಾಜಿ ಪವನಾರಿಗೆ ಬಂದದ್ದು 1938ರಲ್ಲಿ. ಪವನಾರ ಆಶ್ರಮ ಕಟ್ಟಿ ಕಾಂಚನ ಮುಕ್ತರಾಗಲು ಪ್ರಯೋಗ ಪ್ರಾರಂಭ ಮಾಡಿದರು. ಋಷಿಖೇತಿ ಅಂದರೆ ಸುಲಭ ಮತ್ತು ಅಗ್ಗದ ಆಯುಧಗಳನ್ನು ಉಪಯೋಗಿಸಿ ಬೇಸಾಯ ಮಾಡುವುದು ಮೊದಲಾದ ಪ್ರಯೋಗ ಇಲ್ಲಿ ನಡೆಯುತ್ತಿದೆ. 1940ರಲ್ಲಿ ವಿನೋಬಾಜಿ ಅವರು ಗಾಂಧೀಜಿಯವರಿಂದ ಪ್ರಥಮ ಸತ್ಯಾಗ್ರಹಿಯಾಗಿ ನೇಮಿಸಲ್ಪಟ್ಟರು. ಅಖಿಲ ಭಾರತ ಭೂದಾನ ಯಾತ್ರೆ ಆದ ಮೇಲಂತೂ ಪ್ರಪಂಚದಲ್ಲಿಯೇ ಒಂದು ದೊಡ್ಡ ಕ್ರಾಂತಿ ಮಾಡಿ ಸುಧಾರಣೆಯನ್ನು ತಂದು ಸುಪ್ರಸಿದ್ಧರಾದರು. "ಸ್ವತಃ ದುಡಿಮೆಯಿಂದ ಮತ್ತು ಸ್ವಾವಲಂಬನೆಯಿಂದ ಪರಮಾತ್ಮನ ಅರಿವಾಗುವುದು". ಇದು ವಿನೋಬಾರವರ ನಂಬಿಕೆ. ಆಶ್ರಮದಲ್ಲಿ ನಿತ್ಯದ ಕಾರ್ಯಕ್ರಮಕ್ಕೆ ಇದೇ ಮೂಲಾಧಾರ.

ಆಶ್ರಮದಲ್ಲಿ ಸರ್ವೋದಯ ಮತ್ತು ಆಧ್ಯಾತ್ಮಿಕ ಗ್ರಂಥಗಳ ಹಾಗೂ "ಮೈತ್ರಿ" ಎಂಬ ಪತ್ರಿಕೆ ಪ್ರಕಟಣೆಯಾಗುತ್ತಿತ್ತು. ನಿಜವಾದ ಗ್ರಾಮ ಜೀವನವೇ ಸಂಸ್ಕೃತಿಯ ಲಕ್ಷಣ ಎಂಬುದು ವಿನೋಬಾ ನಂಬಿಕೆ. ಗ್ರಾಮಜೀವನದಲ್ಲಿ ಸರಳತೆ, ಸತ್ಯಗಳು ತಾನೇ ತಾನಾಗಿ ಬರಲು ಖಾದಿ ಗ್ರಾಮೋದ್ಯೋಗಗಳೇ ಹಾದಿಯೆಂದು ಇವರ ಸಿದ್ಧಾಂತ. ಗಾಂಧೀಜಿಯವರಿಗಿಂತ ಈ ಸಿದ್ಧಾಂತವನ್ನು ಹೆಚ್ಚು ಆಚರಣೆಗೆ ತಂದವರು ಆಚಾರ್ಯ ವಿನೋಬಾ.

ಶ್ರೀ ಹೊ. ಶ್ರೀನಿವಾಸಯ್ಯ ಅವರ ಮಿತ್ರ ಜಯದೇವ್ ವಿನೋಬಾರನ್ನು ದರ್ಶನ ಮಾಡಲು ಒಳಕೊಠಡಿಗೆ ಕರೆದೊಯ್ದರು. ಆಶ್ರಮದ ಒಳಗಡೆ ಎಲ್ಲೆಡೆಯೂ ಸಡಗರ. ತೋರಣ ಮತ್ತು ಹೂವಿನ ಅಲಂಕಾರ. ಆದರೆ ಬಹುಸರಳ. ಅಂದು ವಿನೋಬಾಜಿಯವರ 88ನೇ

ವರ್ಷದ ಹುಟ್ಟುಹಬ್ಬ. ವಿನೋಬಾ ಡಾ॥ ಹೊ. ಶ್ರೀನಿವಾಸಯ್ಯ ಅವರನ್ನು ದೃಷ್ಟಿಸಿ ನೋಡಿ, ಅವರಿಗೆ ಕಿವಿ ಕೇಳಿಸುತ್ತಿರಲಿಲ್ಲ ಆದುದರಿಂದ ಜಯದೇವ್ ಬರೆದ ಚೀಟಿಯಲ್ಲಿ ನೋಡಿ "ಹುಟ್ಟು ಸಾವು ಮುಪ್ಪು ಜಡ್ಡು ದುಃಖ ಮತ್ತು ದೋಷ ಇವುಗಳ ಅರಿವಿಕೆ ಆಗಬೇಕು" ಅಂತ ತಲೆಯ ಮೇಲೆ ಕೈಇಟ್ಟು ಆಶೀರ್ವದಿಸಿದರು. ಡಾ॥ ಹೊ. ಶ್ರೀನಿವಾಸಯ್ಯ ಅವರು ನಮಸ್ಕರಿಸಿದರು. ಶ್ರೀ ಹೊ. ಶ್ರೀನಿವಾಸಯ್ಯ ಅವರು ವಿನೋಬಾ ಭೇಟಿಯಿಂದ ಮೈ ಜುಮ್ಮೆಂದ ಪ್ರಸಂಗವನ್ನು ಜ್ಞಾಪಿಸಿಕೊಳ್ಳುತ್ತಾರೆ. ಅಲ್ಲದೆ ವಿನೋಬಾ ಅವರು ಡಾ॥ ಹೊ. ಶ್ರೀನಿವಾಸಯ್ಯ ಅವರನ್ನು ಕನ್ನಡದಲ್ಲಿ ಆಶೀರ್ವದಿಸಿದರು. ವಿನೋಬಾಜಿ ಅವರಿಗೆ ಕನ್ನಡ ಬಹಳ ಚೆನ್ನಾಗಿ ಜ್ಞಾಪಕವಿದೆಯಲ್ಲಾ ಎಂಬುದು ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಆಶ್ಚರ್ಯ ಉಂಟುಮಾಡಿತು.

ಪ್ರಕೃತಿ ಚಿಕಿತ್ಸೆ

ಗಾಂಧೀ ಶತಮಾನೋತ್ಸವ ಸಂದರ್ಭದಲ್ಲಿ ಗಾಂಧೀ ಸ್ಮಾರಕನಿಧಿಯವರ ಹಣದ ಸಹಾಯದಿಂದ ಗಾಂಧೀ ಸಾಹಿತ್ಯ ಸಂಘದಲ್ಲಿ ಪ್ರಕೃತಿ ಚಿಕಿತ್ಸಾ ತರಗತಿಗಳನ್ನು ಡಾ॥ ಹೊ. ಶ್ರೀನಿವಾಸಯ್ಯ ಅವರು ಪ್ರಾರಂಭಿಸಿದರು. ಇದಕ್ಕೆ ಶ್ಯಾಮರಾವ್ ಚಿತ್ರಾಗಾರ್‌ರನ್ನು-ಹುಬ್ಬಳ್ಳಿಯಿಂದ ಕರೆಸಿದರು. ಎಲ್ಲರನ್ನೂ ಸೇರಿಸಿ ಸದಸ್ಯ ಶುಲ್ಕ ಹತ್ತು ರೂ ಚಂದಾ ವಸೂಲಿ ಮಾಡಿ ಸಿದ್ಧವನಹಳ್ಳಿ ಕೃಷ್ಣಶರ್ಮರ ಸಲಹೆಯ ಮೇರೆಗೆ ಪ್ರಕೃತಿ ಜೀವನ ಕೇಂದ್ರ ಪ್ರಾರಂಭಿಸಿದರು. ವಾರಕ್ಕೊಂದು ದಿನ ಉಚಿತ ಸಲಹೆಯ ವ್ಯವಸ್ಥೆಯನ್ನು ಮಾಡಿದರು.

ಕನ್ನಡದಲ್ಲಿ ಆರೋಗ್ಯದ ಬಗ್ಗೆ ಅದರಲ್ಲೂ ಪ್ರಕೃತಿ ಜೀವನದ ಬಗ್ಗೆ ಪತ್ರಿಕೆ ಇರಲಿಲ್ಲ. ಆಗ ತ್ರೈಮಾಸಿಕ ಪತ್ರಿಕೆಯಾಗಿ 'ಪ್ರಕೃತಿ ಜೀವನ'ವನ್ನು ಕನ್ನಡದಲ್ಲಿ ಪ್ರಥಮವಾಗಿ ಡಾ॥ ಹೊ. ಶ್ರೀನಿವಾಸಯ್ಯ ಅವರು ಪ್ರಾರಂಭಿಸಿದರು. ಇವರು ಅದರ ಪ್ರಕಾಶಕರಾದರು. 1972ರಲ್ಲಿ ಡಾ॥ ದೇ.ಜವರೇಗೌಡ (ಆಗ ಕುಲಪತಿಗಳಾಗಿದ್ದರು) ಪತ್ರಿಕೆಯನ್ನು ಬಿಡುಗಡೆಮಾಡಿದರು. ಕಳೆದ 43 ವರ್ಷಗಳಿಂದ ಈ ಪತ್ರಿಕೆ

ಡಾ॥ ಹೊ. ಶ್ರೀನಿವಾಸಯ್ಯ ಅವರ ಸಂಪಾದಕತ್ವದಲ್ಲಿ ಈಗಲೂ ಮಾಸಿಕ ಪತ್ರಿಕೆಯಾಗಿ ಪ್ರಕಟವಾಗುತ್ತಿದೆ.

ಪ್ರಕೃತಿ ಜೀವನ ಕೇಂದ್ರವು ಅಖಿಲ ಕರ್ನಾಟಕದ ಭಾಗವಾಗಿ, ಕರ್ನಾಟಕ ಪ್ರಕೃತಿ ಚಿಕಿತ್ಸಾ ಪರಿಷತ್ತು ಎಂದು ಪ್ರಾರಂಭವಾಯಿತು. ನಂತರ ಇದು ಅಖಿಲ ಭಾರತ ಪ್ರಕೃತಿ ಚಿಕಿತ್ಸಾ ಫೆಡರೇಷನ್ನಿನ ಅಂಗಸಂಸ್ಥೆಯಾಯಿತು. ಡಾ॥ ಹೊ. ಶ್ರೀನಿವಾಸಯ್ಯ ಅವರು ಮೊದಲು ಕಾರ್ಯದರ್ಶಿಯಾಗಿ ನಂತರ ಉಪಾಧ್ಯಕ್ಷರಾದರು. ಅಖಿಲ ಭಾರತ ಸಮ್ಮೇಳನ ಲಕ್ನೋದಲ್ಲಿ ನಡೆದಾಗ ಕರ್ನಾಟಕದ ಪರಿಷತ್ತಿನ ಪರವಾಗಿ ಡಾ॥ ಹೊ. ಶ್ರೀನಿವಾಸಯ್ಯ ಅವರು ಭಾಗವಹಿಸಿದರು. ದಕ್ಷಿಣ ಭಾರತದ ಪ್ರಕೃತಿ ಚಿಕಿತ್ಸಾ ಸಮ್ಮೇಳನ ಗಾಂಧೀ ಸಾಹಿತ್ಯ ಸಂಘದಲ್ಲಿ ನಡೆಯಿತು. ಕರ್ನಾಟಕ ಸರ್ಕಾರದ ಪ್ರಕೃತಿ ಚಿಕಿತ್ಸಾ ಸಲಹಾ ಸಮಿತಿಯಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಅನೇಕ ಸಲಹೆ ನೀಡಿ ಎಲ್ಲರ ಮೆಚ್ಚುಗೆ ಪಡೆದರು. ಕರ್ನಾಟಕದಲ್ಲಿ ಪ್ರಕೃತಿ ಚಿಕಿತ್ಸೆ ಬೆಳೆಯಲು ಇವರೇ ಕಾರಣ.

ಈಗಿನ ಬಿ. ಎನ್. ವೈ. ಎಸ್(BNYS) ಪದವಿಯ ಪಠ್ಯಕ್ರಮ ಇವರಿಂದಲೇ ಪ್ರಾರಂಭವಾಗಿದ್ದೂ ವಿಶೇಷ. ಇವರ ಪ್ರಯತ್ನದಿಂದ ನಾಗಮಂಗಲದ ಸಮೀಪ ಭಾರತ ಸರ್ಕಾರ ಒಂದು ಪ್ರಕೃತಿ ಚಿಕಿತ್ಸೆ ಸಂಶೋಧನಾ ಕೇಂದ್ರ ಮತ್ತು 100 ಹಾಸಿಗೆಯ ಆಸ್ಪತ್ರೆಯು ಪ್ರಾರಂಭವಾಗಲಿದೆ. ದೆಹಲಿಯ International Naturopathy Organization ಉಪಾಧ್ಯಕ್ಷರೂ ಆಗಿದ್ದಾರೆ. ಪ್ರತಿಯೊಂದು ಬಡಾವಣೆಗಳಲ್ಲೂ ಪ್ರಕೃತಿಜೀವನ ಸಂಘಗಳು ಬೆಳೆದು ಪ್ರತಿಯೊಂದು ರಸ್ತೆಯಲ್ಲೂ ಆರೋಗ್ಯಧಾಮಗಳು ಸ್ಥಾಪಿತವಾಗಿ, ಎಲ್ಲರೂ ಆರೋಗ್ಯವಂತರಾಗಿ ಬಾಳಿ ಆನಂದ ಪಡೆಯ ಬೇಕೆಂಬುದೇ ಡಾ॥ ಹೊ. ಶ್ರೀನಿವಾಸಯ್ಯ ಅವರ ಹಿರಿದಾಸೆ. ಮಾನವನ ಹುಟ್ಟಿದಾಗಿನಿಂದಲೇ ಚಟುವಟಿಕೆ-ಚಲನೆ ಪ್ರಾರಂಭ ವಾಗುತ್ತದೆ ಎಂಬುದನ್ನು ಮನವರಿಕೆಯಾಗುವಂತೆ ಪ್ರತಿಪಾದಿಸುತ್ತಾರೆ.

ವಿದೇಶ ಪ್ರವಾಸ

ಡಾ॥ ಹೊ. ಶ್ರೀನಿವಾಸಯ್ಯ ಅವರು 1954ರಲ್ಲಿ ಜರ್ಮನಿಗೆ ಹೋಗಿದ್ದರು. ಮತ್ತೆ 1957ರಲ್ಲಿ ಹೋಗಬೇಕಾಯಿತು. ಸುಮಾರು 3ವರ್ಷಗಳ ಕಾಲ ಜರ್ಮನಿಯಲ್ಲಿದ್ದರು. ಇವರ ಕಾರ್ಖಾನೆಯಿಂದ ರೈಲುಕೋಚ್‌ಗಳನ್ನು ರಫ್ತು ಮಾಡುವ ವಿಚಾರದಲ್ಲಿ ದೆಹಲಿಗೆ ಹೋಗಿ ಅಲ್ಲಿಂದ ಬಾಂಗ್ಲಾ ದೇಶಕ್ಕೂ ಹೋದರು. ಅಲ್ಲಿ ಎಂಟು ದಿವಸಗಳಿದ್ದು ಮುಖ್ಯ ಊರುಗಳನ್ನು ನೋಡಿ ಭಾರತಕ್ಕೆ ವಾಪಸ್ಸು ಬಂದ ಮೇಲೆ ನಮ್ಮ ರೈಲುಗಾಡಿಗಳನ್ನು ಈ ದೇಶಕ್ಕೆ ರಫ್ತು ಮಾಡುವುದರಲ್ಲಿ ಡಾ॥ ಹೊ. ಶ್ರೀನಿವಾಸಯ್ಯ ಅವರದ್ದು ಪ್ರಧಾನ ಪಾತ್ರ.

ಶ್ರೀಲಂಕಾ ಭಾರತ ದೇಶಕ್ಕೆ ಹತ್ತಿರವಿದ್ದರೂ ಅದರ ಮೇಲೆ ದೃಷ್ಟಿ ಕಡಿಮೆ. ರೈಲುಗಾಡಿಗಳ ಬೇಡಿಕೆ ಬಂದುದರಿಂದ ಎಂಟುದಿನ ಸಿಲೋನಿಗೆ ಡಾ॥ ಹೊ. ಶ್ರೀನಿವಾಸಯ್ಯ ಅವರು ಹೋಗಿ ಬಂದರು. ರಫ್ತು ಮಾಡುವ ವಿಚಾರದಲ್ಲಿ ಇವರಿಗೆ ಪುನಃ ಶ್ರೀಲಂಕಾದ ದರ್ಶನವಾಯಿತು. ಅಲ್ಲಿಗೂ ರೈಲು ಗಾಡಿಗಳನ್ನು ರಫ್ತು ಮಾಡಿದರು. ಶ್ರೀಲಂಕಾದ ಬಗ್ಗೆ ಒಂದು ಪುಸ್ತಕವನ್ನು ಬರೆದರು. ಬೆಂಗಳೂರು ವಿಶ್ವವಿದ್ಯಾನಿಲಯದವರು ಇದನ್ನು ಪ್ರಕಟಿಸಿದ್ದಾರೆ. ಬಾಂಗ್ಲಾ ದೇಶಕ್ಕೂ ಭೇಟಿ ನೀಡಿ, ಆ ದೇಶಕ್ಕೂ ರೈಲು ಗಾಡಿಗಳನ್ನು ರಫ್ತು ಮಾಡುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಹೀಗೆ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಪ್ರಾಂತ್ಯ, ದೇಶ, ಅನ್ಯದೇಶಗಳಿಗೆ ಹೋಗಿ ಬರುವ ಅವಕಾಶ ಸಿಕ್ಕಿ ಇವರಿಗೆ ಇದು ಜ್ಞಾನಾರ್ಜನೆಗೆ ಅವಕಾಶವಾಯಿತು.

ಶ್ರೇಷ್ಠ ಸಾಹಿತಿಗಳ ಸಂಪರ್ಕ

ಡಾ॥ ಹೊ. ಶ್ರೀನಿವಾಸಯ್ಯ ಅವರು ಹಲವಾರು ಸಾಹಿತಿಗಳ, ಲೇಖಕರ ಸಂಪರ್ಕ ಪಡೆದಿದ್ದುದನ್ನು ಸ್ಮರಿಸುತ್ತಾರೆ. ಅವರಲ್ಲಿ ಪ್ರಮುಖರೆಂದರೆ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮನವರು, ಇವರ ಪಕ್ಕದ ಮನೆಯಲ್ಲಿ ಕೆಲಕಾಲ ಇದ್ದ ನಿರಂಜನ ದಂಪತಿಗಳು ರಾಷ್ಟ್ರಕವಿ ಕುವೆಂಪು, ದೇಜಗೌ, ಸಿ.ಪಿ.ಕೆ, ಮಾಸ್ತಿ, ಪುತಿನ, ಎಂ.ವಿ.ಸೀ, ದ.ರಾ.

ಬೇಂದ್ರೆ, ಶ್ರೀ ತ.ರಾ.ಸು, ರಾಜರತ್ನಂ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹೀಗೆ ಈ ಸಾಲು ಬೆಳೆಯುತ್ತದೆ. ಇವರಲ್ಲಿ ಕೆಲವರು ಆಪ್ತರು, ಮತ್ತೂ ಕೆಲವರು ಸ್ನೇಹಿತರು, ಇನ್ನೂ ಕೆಲವರು ಇವರಿಗೆ ಸದಾಪೂಜ್ಯರು. ಅಂಥವರಲ್ಲಿ ಕೆಲವರನ್ನು ಸ್ಮರಿಸಿಕೊಳ್ಳುವುದು ನನ್ನ ಭಾಗ್ಯ ಎನ್ನುತ್ತಾರೆ. "ಈ ಹೊತ್ತಿಗೆ ನನ್ನಲ್ಲಿ ಏನಾದರೂ ಬರಹ ಇದ್ದರೆ ಅದು ಈ ಮೇಲೆ ಹೇಳಿದ ಹಿರಿಯರ ಆಶೀರ್ವಾದ, ಸ್ನೇಹಿತರ ಅಭಿಮಾನ ಕಿರಿಯರ ಪ್ರೀತಿ" ಎಂಬ ಅಂಶವನ್ನು ಧನ್ಯತಾಭಾವದಿಂದ ನೆನೆಯುತ್ತಿರುತ್ತಾರೆ.

1940–45ರಲ್ಲಿ ಶ್ರೀಮಾನ್ ನಿರಂಜನರವರು ಡಾ॥ ಹೊ. ಶ್ರೀನಿವಾಸಯ್ಯ ಅವರ ಮನೆಯಲ್ಲಿ ಬಾಡಿಗೆ ಇದ್ದರು. ತ.ರಾ.ಸು.ರವರ ಪರಿಚಯವಾಗಿದ್ದು ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ಮನೆಯಲ್ಲಿ. ಅವರ ಮನೆಯ ಹಿಂದಿನ ರಸ್ತೆಯಲ್ಲಿ ಒಂದು ಕೊಠಡಿ ಮಾಡಿಕೊಂಡಿದ್ದು ಅಲ್ಲಿ ತ.ರಾ.ಸು. ಇದ್ದರು. ಶರ್ಮಾಜಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ಆಗ ಅವರು ಅನೇಕ ಸದಸ್ಯರುಗಳನ್ನು ಒಟ್ಟುಗೂಡಿಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಸಂಬಂಧ ಬೆಳೆದಿದ್ದು ಶ್ರೀ. ಜಿ. ನಾರಾಯಣ ಅವರ ಮೂಲಕ. ಅವರು ಪರಿಷತ್ತಿನ ಅಧ್ಯಕ್ಷರಾದ ಮೇಲೆ ಅವರ ಮೂಲಕ ಡಾ॥ ಹೊ. ಶ್ರೀನಿವಾಸಯ್ಯ ಅವರು ಪರಿಷತ್ತಿಗೆ ಅಜೀವ ಸದಸ್ಯರಾದರು. ಜಿ. ನಾರಾಯಣರವರು ಸಂಘ ಸಂಸ್ಥೆಗಳ ಪ್ರತಿನಿಧಿಯಾಗಿ ಸಮಿತಿಯ ಸದಸ್ಯರನ್ನಾಗಿ ಇವರನ್ನು ಆರಿಸಿಕೊಂಡರು. ಸಮಿತಿಯ ಸಭೆ ಭಾನುವಾರ ಬೆಳಿಗ್ಗೆ ಆಗುತ್ತಿದ್ದುದ್ದರಿಂದ ಹೆಚ್ಚು ಕಡಿಮೆ ಎಲ್ಲಾ ಸಭೆಗೂ ಡಾ॥ ಹೊ. ಶ್ರೀನಿವಾಸಯ್ಯ ಅವರು ಹೋಗುತ್ತಿದ್ದರು. ಸಾಹಿತಿಗಳ ಮತ್ತು ವಿದ್ವಾಂಸರ ಪರಿಚಯ ಹೆಚ್ಚಾಗಿ ಈ ಗಣ್ಯರ ಮೂಲಕ ಆಯಿತು.

ಸಾಹಿತಿಯಾಗಿ

ಡಾ॥ ಹೊ. ಶ್ರೀನಿವಾಸಯ್ಯ ಅವರು ಕನ್ನಡದಲ್ಲಿ ಲೇಖನಗಳನ್ನು ಬರೆಯಲು ಪ್ರಾರಂಭಿಸಿದ್ದು ಇವರು ಕಾರ್ಖಾನೆಯ ನಿಮಿತ್ತ ಜರ್ಮನಿಗೆ ಹೋದಾಗಲೇ. ಶರ್ಮಾಜಿಯವರ ಪರಿಚಯವಾದ ಮೇಲೆ ಅವರ

ಭಾಷಣಗಳನ್ನು, ಗಾಂಧೀ ಸಾಹಿತ್ಯ ಸಂಘದಲ್ಲಿ ನಡೆಯುವ ಚರ್ಚಾಕೂಟದಲ್ಲಿ ಉಪನ್ಯಾಸಗಳಲ್ಲಿ ಭಾಗವಹಿಸುವುದರ ಜೊತೆಗೆ ಟಿಪ್ಪಣಿಗಳನ್ನು ಕೂಡ ಮಾಡಿಕೊಳ್ಳುತ್ತಿದ್ದರು. ಅನೇಕ ಸಾರಿ ಅದನ್ನು ಶರ್ಮಾಜಿಯವರಿಗೆ ತೋರಿಸಿ ತಿದ್ದುಪಡಿ ಸಹ ಮಾಡಿಕೊಳ್ಳುತ್ತಿದ್ದರು. ಆದರೆ ಬರೆಯುವುದಕ್ಕೆ, ಪ್ರಕಟಿಸುವುದಕ್ಕೆ ಇವರು ಹೋಗಿರಲಿಲ್ಲ. ತಾಯಿನಾಡು ಪತ್ರಿಕೆಗೆ ಜರ್ಮನಿಯಲ್ಲಿನ ಅನುಭವಗಳನ್ನು ಕುರಿತು ಲೇಖನಗಳನ್ನು ಬರೆದಿದ್ದರು. ಜರ್ಮನಿಯಲ್ಲೂ ಸಹ ಶರ್ಮಾಜಿಯ ಸಲಹೆಯಂತೆ ನಿತ್ಯವೂ ಕಂಡದ್ದನ್ನು ಡೈರಿಯಲ್ಲಿ ಟಿಪ್ಪಣಿ ಮಾಡುತ್ತಿದ್ದರು. ಅದನ್ನು ಶರ್ಮಾಜಿಗೆ ತೋರಿಸಿದ ಮೇಲೆ ಇದನ್ನು ವಿವರವಾಗಿ ಬರೆ ಎಂಬ ಸೂಚನೆ ಪಡೆಯುತ್ತಿದ್ದರು. ಸುಮಾರು ಒಂದು ವರ್ಷಕಾಲ ಸಂಜೆ ಮನೆಗೆ ಬಂದ ತಕ್ಷಣ ಬರೆಯುತ್ತಿದ್ದರು. ಇವರ ಬರವಣಿಗೆ ಸುಮಾರು 500ಪುಟಗಳಾದವು. ಅದನ್ನು ಶರ್ಮಾಜಿಯವರು, ಶ್ರೀ ನೀಲತ್ತಹಳ್ಳಿ ಕಸ್ತೂರಿ ಮತ್ತು ಶ್ರೀ ಮತ್ತೂರು ಕೃಷ್ಣಮೂರ್ತಿ ಇವರೆಲ್ಲರೂ ಮೆಚ್ಚಿಕೊಂಡರು. ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆ ಗಳಾದವು. ಶರ್ಮಾಜಿಯವರು ಗಾಂಧೀ ಸಾಹಿತ್ಯ ಸಂಘದಿಂದಲೇ ಪ್ರಕಟಿಸೋಣ ಎಂದು ಸಹಕರಿಸಿದರು. ಆ ಪ್ರವಾಸ ಕಥನವೇ "ನಾ ಕಂಡ ಜರ್ಮನಿ" ಪುಸ್ತಕ ಆಯಿತು. ಇದನ್ನು ಪಿ.ಯು.ಸಿ. ಮೊದಲನೇ ತರಗತಿಗೆ, ಎರಡು ಬಾರಿ ಪಠ್ಯಪುಸ್ತಕವಾಗಿ ಆರಿಸಲಾಯಿತು. ಇದು ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಪಡೆಯಿತು. ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಚಾರವಾಗಿ ವಿಶ್ವಕೋಶಕ್ಕೆ ಲೇಖನವನ್ನು ಬರೆದರು. ಈ ಮೂಲಕ ಪ್ರಸಾರಾಂಗದಲ್ಲಿ ಪ್ರಧಾನ ಸಂಪಾದಕರಾದ ಶ್ರೀ ಕೆ.ಟಿ. ವೀರಪ್ಪನವರ ಪರಿಚಯವೂ ಆಯಿತು.

1962 ಮತ್ತು 63ರಲ್ಲಿ ಆಕಾಶವಾಣಿಯ ಸಂಪರ್ಕವೂ ಇವರಿಗೆ ದೊರೆತು, ಇವರ ಮೊದಲನೆ ಭಾಷಣ "ಕೈ ಕೆಸರಾದರೆ ಬಾಯಿ ಮೊಸರು" ಎಂಬ ವಿಚಾರ ಸರಣಿಯಿಂದ ಪ್ರಾರಂಭವಾಯಿತು.

ಗಾಂಧೀ ಭವನಕ್ಕೆ ಕಾಯಕಲ್ಪ

ಗಾಂಧೀಭವನವನ್ನು ಇವರು ಸೇರಿದ್ದು ಒಂದು ಆಕಸ್ಮಿಕ. ಇವರ ಪಾಲಿಗೆ ಬಂದ ಭಾಗ್ಯವೆಂದೇ ಪರಿಗಣಿಸುತ್ತಾರೆ. ಹಿರಿಯ ಗಾಂಧೀವಾದಿ, ಮಾಜಿ ಮುಖ್ಯಮಂತ್ರಿ ಶ್ರೀ ಕಡಿದಾಳು ಮಂಜಪ್ಪನವರು, ಕರ್ನಾಟಕ ಗಾಂಧಿಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದರು. ಶ್ರೀ ಸರ್ದಾರ್ ವೆಂಕಟರಾಮಯ್ಯನವರು ಕಾರ್ಯದರ್ಶಿಗಳಾಗಿದ್ದರು. ಗಾಂಧೀ ಭವನಕ್ಕೆ ಆಗಾಗ್ಗೆ ಹೋಗುತ್ತಿದ್ದ ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಒಂದು ದಿನ ಕಡಿದಾಳ್ ಮಂಜಪ್ಪನವರು ದೂರವಾಣಿ ಮಾಡಿ ನಿಧಿಗೆ ಬರುವಂತೆ ಹೇಳಿದರು. ಇವರ ಗಾಂಧಿ ವಿಚಾರಾಸಕ್ತಿ ಮತ್ತು ಸೇವಾ ಮನೋಭಾವ ನೋಡಿ ಗಾಂಧೀಭವನದ ಜವಾಬ್ದಾರಿ ತೆಗೆದು ಕೊಳ್ಳುವಂತೆ ಹೇಳಿದರು. ಹೊ. ಶ್ರೀನಿವಾಸಯ್ಯ ಅವರು ಸ್ವಲ್ಪ ಹೆದರಿದರು. ಆದರೆ ನ್ಯಾಯಮೂರ್ತಿ ಶ್ರೀ. ನಿಟ್ಟೂರು ಶ್ರೀನಿವಾಸ ರಾಯರು ಮತ್ತು ಶ್ರೀ. ಜಿ.ನಾರಾಯಣರವರ ಸಲಹೆಯ ಮೇರೆಗೆ ಸಮಿತಿಯ ಸಭೆಗೆ ಹೋದರು. ಕಡಿದಾಳರವರು ಅಧ್ಯಕ್ಷತೆವಹಿಸಿ ಮಾತನಾಡುತ್ತಾ "ನಾನು ಅಧ್ಯಕ್ಷನಾಗಿ 10 ವರ್ಷಗಳಾದವು. ನನಗೆ ವಯಸ್ಸಾದ್ದರಿಂದ ಸಾಕಾಗಿದೆ. ಈಗ ಒಬ್ಬ ಯುವಕನನ್ನು ಅಧ್ಯಕ್ಷನನ್ನಾಗಿ ಮಾಡುತ್ತಿದ್ದೇನೆ" ಎಂದು ಹೇಳಿ ಹೊ. ಶ್ರೀನಿವಾಸಯ್ಯ ಅವರನ್ನು ಕರೆದು ಕುರ್ಚಿಯ ಮೇಲೆ ಕೂಡಿಸಿ ಎಲ್ಲರಿಗೂ ನಮಸ್ಕಾರ ಹೇಳಿ ಹೊರಟೇ ಹೋದರು. ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಭಯ ಆದರೂ ಶ್ರೀ ಮಾಗಡಿ ಯವರು, ಶ್ರೀ ನಿಟ್ಟೂರರವರು ಉತ್ತೇಜನ ಕೊಟ್ಟರು. ಇದು ಆದದ್ದು 1985ರಲ್ಲಿ. ಅಂದಿನಿಂದಲೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾಗಿ ತಮ್ಮ 92ನೇ ವಯಸ್ಸಿನಲ್ಲೂ ಅತ್ಯಂತ ಕ್ರಿಯಾಶೀಲರಾಗಿ ದುಡಿಯುತ್ತಿದ್ದಾರೆ.

ಗಾಂಧೀ ಭವನ ಅವರ ಪಾಲಿಗೆ ಕೇವಲ ಕಲ್ಲುಮಣ್ಣುಗಳ ಕಟ್ಟಡವಲ್ಲ. ಅದು ಡಾ॥ ಹೊ. ಶ್ರೀನಿವಾಸಯ್ಯ ಅವರ ಒಂದು ಕರ್ಮಭೂಮಿ, ಪುಣ್ಯಭೂಮಿ, ನಿಜವಾದ ದೇವಮಂದಿರ. ಈ ಪ್ರದೇಶದಲ್ಲಿ ಗಾಂಧೀ ನಡೆದಾಡಿದ್ದು ಒಂದು ರೀತಿಯ ಅಯಸ್ಕಾಂತಕ ಶಕ್ತಿ ಈ ಪ್ರದೇಶಕ್ಕಿದೆ.

ನಿಧಿಗೆ ಆಧಾರ ಪುಸ್ತಕ ಮಾರಾಟದಿಂದ ಮತ್ತು ಕೇಂದ್ರ ಸಮಿತಿಯಿಂದ ಬರುವ ವಾರ್ಷಿಕ ಅನುದಾನ. ಪ್ರಾರಂಭದಲ್ಲಿ ನಿಧಿ ಕೆಲಸ ಕೇವಲ ಹಣ ಹಂಚುವ ಕೆಲಸವಾಗಿತ್ತು. ಗಾಂಧೀ ಶಾಂತಿ ಪ್ರತಿಷ್ಠಾನದ ಕೆಲಸ ಕಾರ್ಯಕ್ರಮ ಏರ್ಪಡಿಸುವುದು. ವಸ್ತು ಸಂಗ್ರಹಾಲಯ, ಪುಸ್ತಕ ಭಂಡಾರ ಪ್ರತಿಷ್ಠಾನದ ಅಧೀನದಲ್ಲಿ ಇತ್ತು. ಇದು ಡಾ॥ ಹೊ. ಶ್ರೀನಿವಾಸಯ್ಯ ಅವರಿಗೆ ಇಷ್ಟವಾಗಲಿಲ್ಲ. ಹಣ ಹಂಚುವುದನ್ನು ಯಾರಾದರೂ ಮಾಡಬಹುದು. ಆದರೆ ಚಟುವಟಿಕೆ ನಡೆಯದಿದ್ದರೆ ಭವನ ಅರ್ಥ ಕಳೆದುಕೊಳ್ಳುತ್ತದೆ ಎಂದು ಹತ್ತಾರು ಚಟುವಟಿಕೆ ಪ್ರಾರಂಭ ಮಾಡಿದರು. ಇವುಗಳನ್ನು ನಿಧಿಯ ವಶಕ್ಕೆ ತೆಗೆದುಕೊಂಡದ್ದು ಕೆಲವರಿಗೆ ಇಷ್ಟವಿರಲಿಲ್ಲ. ಆದರೂ ಹೊ. ಶ್ರೀನಿವಾಸಯ್ಯ ಅವರು ಬಿಡಲಿಲ್ಲ. ಪ್ರಾರಂಭದಲ್ಲಿ ಹಾಲಿನಲ್ಲಿ ಕುಳಿತುಕೊಳ್ಳಲು ಜಮಖಾನ ಹಾಕಿಸಿ ನಂತರ ಹಣದ ಕೊರತೆ ಇದ್ದ ನಿಧಿಯನ್ನು ಸುಸ್ಥಿತಿಗೆ ತರಲಾಯಿತು. ನಿಧಾನವಾಗಿ ಗಾಂಧೀಭವನದ ಅಭಿವೃದ್ಧಿಯಲ್ಲಿ ಬದಲಾವಣೆಗಳನ್ನು ತಂದು ಸ್ವಲ್ಪ ಚಟುವಟಿಕೆಗಳು ಅಲ್ಲಿ ಕಾಣುವ ಹಾಗೆ ಮಾಡಲಾಯಿತು.

ಗಾಂಧೀ ಭವನಕ್ಕೆ ಸ್ಥಳದಾನ

ಶ್ರೀ ರಾಮಕೃಷ್ಣ ಹೆಗ್ಗಡೆಯವರನ್ನು ಕೋರಿದಾಗ ಅವರು ಸಂಸದರ ನಿಧಿಯಿಂದ 5ಲಕ್ಷ ಕೊಟ್ಟರು. ಇದರಿಂದ ಕಟ್ಟಡ ರಿಪೇರಿ ಮತ್ತು ಕಾಂಪೌಂಡು ನಿರ್ಮಿಸಲಾಯಿತು. ನಂತರ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಧನಸಹಾಯದಿಂದ ಗಾಂಧೀಜಿ ಆತ್ಮಕಥೆಯನ್ನು ಕನ್ನಡದಲ್ಲಿ ಮುದ್ರಿಸಲಾಯಿತು. ಪುಸ್ತಕ ಮಾರಾಟವನ್ನು ಒಂದು ರೂಪಕ್ಕೆ ತರಲಾಯಿತು. ಗಾಂಧೀ ಭವನ ಇರುವ ಜಾಗ 50 ವರ್ಷದ "ಲೀಸ್" ಮೇಲೆ ಪಡೆಯಲಾಗಿತ್ತು. ಗಾಂಧೀ ಭವನವನ್ನು ಬೆಳೆಸುವುದರ ಜೊತೆಗೆ ಕಾರ್ಯಕ್ರಮಗಳನ್ನು ಮಾಡಲು ಈ ಜಾಗವನ್ನು ಸ್ವಂತಕ್ಕೆ ಕೊಡಬೇಕೆಂದು ಅವರನ್ನು ಡಾ॥ ಹೊ. ಶ್ರೀನಿವಾಸಯ್ಯ ಮತ್ತು ಶ್ರೀ ರಾಮಕೃಷ್ಣ ಹೆಗ್ಗಡೆಯವರ ಅಕ್ಕ ಮಾತಾ ಮಹದೇವಿ ಅವರು ಕೋರಿದಾಗ ಅದಕ್ಕೆ ಒಪ್ಪಿ,

ಮಂತ್ರಿಮಂಡಲದ ಒಪ್ಪಿಗೆ ಪಡೆದು, ಗಾಂಧೀ ಭವನದ ಜಾಗವನ್ನು ಲೀಸ್ ಬದಲಿಸಿ ಗಾಂಧೀ ಮತ್ತು ವಿನೋಬಾ ವಿಚಾರ ಧಾರೆಯನ್ನು ಪ್ರಚಾರ ಮಾಡಲು ದಾನದ ರೂಪದಲ್ಲಿ ಹಾಲಿ ಇರುವ ಜಾಗವನ್ನು ಗಾಂಧೀಭವನಕ್ಕೆ ಕೊಟ್ಟು ಸಹಾಯ ಮಾಡಿದರು.

ಗಾಂಧೀಭವನಕ್ಕೆ ಸರ್ಕಾರದ ನೆರವು

ಮಾನ್ಯಶ್ರೀ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ; ಗಾಂಧೀ ಪ್ರತಿಮೆಯನ್ನು ಉದ್ಘಾಟಿಸಲು ಕರೆದಾಗ ಬಂದು ಆಗಿನ ಗಾಂಧೀ ಭವನವನ್ನು ನೋಡಿ, ತಕ್ಷಣ ಅಧಿಕಾರಿಗಳನ್ನು ಕರೆದು ಗಾಂಧೀ ಭವನ ಒಂದು ಸ್ಮಾರಕ ಭವನವಾದುದರಿಂದ ದುರಸ್ತಿಯನ್ನು ಮಾಡಿ ಹೊಸ ರೂಪ ಕೊಟ್ಟರು. ಅತಿಥಿ ಗೃಹ ನಿರ್ಮಾಣದ ಜೊತೆಗೆ ಹಲವು ಕೋಟಿಗಳಲ್ಲಿ ಭವನವನ್ನು ಸುಂದರ ಮಾಡಿ ಅನುದಾನವನ್ನು ಕೊಟ್ಟರು.

ಮಾನ್ಯಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ; 3 ಕೋಟಿ ಅನುದಾನ ನೀಡಿ 2ನೇ ಮಹಡಿ ಸಭಾಂಗಣ ಕಟ್ಟಿಸಿದರು. ಅಲ್ಲದೆ 1 ಕೋಟಿ ರೂಗಳನ್ನು ಸುವರ್ಣ ಮಹೋತ್ಸವ ಆಚರಣೆಗೆ ನೀಡಿದರು. ಮಾನ್ಯಶ್ರೀ ಸದಾನಂದ ಗೌಡರು ಮುಖ್ಯಮಂತ್ರಿಗಳಾಗಿದ್ದಾಗ 1.5 ಕೋಟಿ ಕೊಟ್ಟು ಹವಾನಿಯಂತ್ರಣ ಕಟ್ಟಡಕ್ಕೆ ಒಪ್ಪಿಗೆ ಕೊಟ್ಟು ಕೆಲಸ ಪೂರೈಸಿದರು.

ಮಾನ್ಯಶ್ರೀ ಜಗದೀಶ ಶೆಟ್ಟರ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಅನುದಾನ ಹೆಚ್ಚಿಸಿದರು. ಪುಸ್ತಕಗಳನ್ನು ಪ್ರಕಟಿಸಲು ಸಹಾಯ ಮಾಡಿದರು. ಇಂದು ಮುಖ್ಯಮಂತ್ರಿಗಳಾಗಿರುವ ಮಾನ್ಯಶ್ರೀ ಸಿದ್ಧರಾಮಯ್ಯನವರು ಅನುದಾನ ಹೆಚ್ಚಿಸಿದರು. ಸರಕಾರ ಗಾಂಧೀ ಭವನದ ಜೊತೆ ಸೇರಿ ಸರ್ಕಾರದ ಕಾರ್ಯಕ್ರಮವಾಗಿ ಗಾಂಧೀ ಜಯಂತಿಯನ್ನು ಆಚರಿಸುವಂತೆ ಮಾಡಿದರು. ಅಲ್ಲದೆ ಹಲವು ಉದ್ದೇಶಗಳಿಗೆ 4 ಕೋಟಿ ಅನುದಾನವನ್ನು ಮಂಜೂರು ಮಾಡಿದ್ದಾರೆ.

ಗಾಂಧೀ ಕಾರ್ಯಕ್ರಮಗಳನ್ನು ನಡೆಸಲು ವಾರ್ತಾ ಇಲಾಖೆಯನ್ನು "ನೋಡಲ್ ಇಲಾಖೆಯನ್ನಾಗಿ ಮಾಡಿ ಸರ್ಕಾರ ಗಾಂಧೀ ಜಯಂತಿ ಮಾಡುವುದರ ಜೊತೆಗೆ ಎಲ್ಲಾ ಜಿಲ್ಲೆಗಳಲ್ಲಿ ವಾರ್ತಾ ಇಲಾಖೆಯ ಸಹಯೋಗದಿಂದ ಗಾಂಧೀ ಜಯಂತಿ ಆಚರಿಸುವಂತೆ ಮಾಡಿದರು.

ಬಿ.ಡಿ.ಎ. ನೆರವಿನಿಂದ ಅತಿಥಿ ಗೃಹ ನಿರ್ಮಾಣ ಮಾಡುವಂತೆ ಮಾಡಿದರು, ಶ್ರೀ ಜಾಫರ್ ಶರೀಷರವರು ಸಂಸದರ ನಿಧಿಯಿಂದ ಪುಸ್ತಕ ಭಂಡಾರ ಕಟ್ಟಿಸಿದರು ಹಾಗೂ 15ಲಕ್ಷ ರೂ.ಗಳನ್ನು ಕಸ್ತೂರಬಾ ಭವನ ನಿರ್ಮಾಣಕ್ಕೆ ನೆರವು ನೀಡಿದರು. ಶ್ರೀ ಎಂ.ವಿ.ರಾಜಶೇಖರ್‌ನ್‌ರವರ ಸಂಸದರ ನಿಧಿಯಿಂದ 20ಲಕ್ಷ ರೂಗಳ ನೆರವು ನೀಡಿದರು. ಹೀಗೆ ಸರ್ಕಾರದ ಎಲ್ಲಾ ಮಂತ್ರಿಗಳ ಮತ್ತು ಅಧಿಕಾರಿಗಳ ಸಹಾಯದಿಂದ ಗಾಂಧೀ ಭವನ ಬೆಳೆಯಲು ಸಾಧ್ಯವಾಯಿತು. ಕಸ್ತೂರ ಬಾ ಭವನದ ಮೇಲೆ ಮಹಡಿ ಹಾಕಲಾಯಿತು. ಮ್ಯೂಸಿಯಂಗೆ ಹೊಸ ರೂಪ ನೀಡಿ ಅದನ್ನು ವಿದ್ಯುನ್ಮಾನಕ್ಕೊಳಪಡಿಸಿ ಯುವಕರನ್ನು ಆಕರ್ಷಿಸಲು ಇಂದಿನ ಮಂತ್ರಿಗಳ ನೆರವಿನಿಂದ ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಸರ್ಕಾರವು ಪ್ರಾರಂಭದಲ್ಲಿ 5ಲಕ್ಷ ರೂ ನೆರವನ್ನು ನೀಡಲು ಪ್ರಾರಂಭಿಸಿ ಈಗ ಅದನ್ನು 50ಲಕ್ಷ ರೂ.ಗಳಿಗೆ ಹೆಚ್ಚಿಸಿ ವಾರ್ಷಿಕ ಅನುದಾನ ಕೊಡಲು ಸಮ್ಮತಿಸಿದೆ. ಇಲ್ಲಿ ಒಳ್ಳೆಯ ಪುಸ್ತಕ ಭಂಡಾರವಿದೆ. ಪುಸ್ತಕ ಮಾರಾಟದ ಮಳಿಗೆ ಇದೆ. 50ನೇ ವರ್ಷದ ಕಾರ್ಯಕ್ರಮ ಕರ್ನಾಟಕದ ಎಲ್ಲಾ ವಿಭಾಗದಲ್ಲೂ ಯಶಸ್ವಿಯಾಗಿ ನೆರವೇರಿಸಲಾಯಿತು. ಇದರ ಅಂಗವಾಗಿ 50 ಅಮೂಲ್ಯವಾದ ಗಾಂಧಿ ಸಾಹಿತ್ಯದ ಪುಸ್ತಕಗಳನ್ನು ಪ್ರಕಟಿಸಲಾಯಿತು. ಇದೇ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆ ಹೊರತರಲಾಯಿತು. ಒಳ್ಳೆಯ ವಸ್ತುಸಂಗ್ರಾಹಾಲಯ ಮಾಡುವ ಯೋಜನೆ ಹಾಕಲಾಗಿದೆ. ಪ್ರಕೃತಿ ಚಿಕಿತ್ಸಾಲಯವೂ ಸಹ ಇಲ್ಲಿ ಇದೆ.

ಗಾಂಧೀಭವನಕ್ಕೆ ಬಂದವರೆಲ್ಲ ಆಶ್ರಮದ ವಾತಾವರಣ ಇದೆ ಎಂದು ಹೇಳುತ್ತಾರೆ. ಇನ್ನೂ ಬಹಳಷ್ಟು ಕಾರ್ಯಮಾಡಬೇಕಿದೆ. ದಿನೇ ದಿನೇ ಗಾಂಧೀ ಭವನದ ಚಟುವಟಿಕೆಗಳಿಂದ ಯುವಕರು ಆಕರ್ಷಿತರಾಗುತ್ತಿದ್ದಾರೆ. "ಶಾಲೆಯಿಂದ ಶಾಲೆಗೆ-ಕಾಲೇಜಿನಿಂದ ಕಾಲೇಜಿಗೆ ಗಾಂಧಿ" ಎಂಬ ಚಟುವಟಿಕೆಯ ಮೂಲಕ ಶಾಲಾ-ಕಾಲೇಜುಗಳಿಗೆ ಹೋಗಿ ಗಾಂಧೀ ಸಾಹಿತ್ಯವನ್ನು ಉಚಿತವಾಗಿ ವಿತರಿಸಿ ಉಪನ್ಯಾಸ ಕಾರ್ಯಕ್ರಮ ನಡೆಸಲಾಗುತ್ತಿದೆ. ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ, ಸರ್ಟಿಫಿಕೇಟ್ ನೀಡಲಾಗುತ್ತಿದೆ. ಗಾಂಧಿ ವಿಚಾರಗಳು ಯುವಜನರ

ಮೇಲೆ ಪರಿಣಾಮ ಬೀರುವಂತೆ ಮಾಡಲು "ಗಾಂಧೀ ತತ್ವ ಪ್ರಣೀತ ಯುವ ಪ್ರೇರಣಾ ಶಿಬಿರಗಳನ್ನು" ನಡೆಸಲಾಗುತ್ತಿದೆ. ಕೆಲವು ಶಿಬಿರಗಳನ್ನು ರಾಷ್ಟ್ರೀಯ ಸೇವಾ ಯೋಜನೆ ಜೊತೆ ಸೇರಿಸಿ ನಡೆಸಲಾಗುತ್ತಿದೆ. 'ಗಾಂಧೀಭವನದೆಡೆಗೆ ನಮ್ಮ ನಡಿಗೆ' ಎಂಬ ಕಾರ್ಯಕ್ರಮದಲ್ಲಿ ಯುವಜನರು ಗಾಂಧೀಭವನಕ್ಕೆ ಬಂದು ಇಲ್ಲಿನ ವೀಕ್ಷಣೆಯಿಂದ ಅನುಭವದಿಂದ ಪ್ರಭಾವಿತರಾಗುತ್ತಿದ್ದಾರೆ. ಆಸಕ್ತ ಶಾಲಾ-ಕಾಲೇಜುಗಳಲ್ಲಿ ಇದುವರೆಗೂ 65 ಗಾಂಧೀ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಡಾ॥ ಹೊ. ಶ್ರೀನಿವಾಸಯ್ಯ ಅವರು ಕಳೆದ 14 ವರ್ಷಗಳಿಂದ ದೆಹಲಿಯ ಕೇಂದ್ರ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಸೇವೆಸಲ್ಲಿಸುತ್ತಿದ್ದಾರೆ. ಕಳೆದ 30ವರ್ಷಗಳಿಂದ ಗಾಂಧೀ ಭವನದ ಅಧ್ಯಕ್ಷರಾಗಿ ಸೇವೆಸಲ್ಲಿಸುತ್ತಿದ್ದು ಇಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳು ಇವರಿಗೆ ಹೆಚ್ಚು ತೃಪ್ತಿ, ನೆಮ್ಮದಿ ಹಾಗೂ ಸಂತೋಷ ತಂದಿರುವುದನ್ನು ಕೃತಜ್ಞಾಭಾವದಿಂದ ಸ್ಮರಿಸುತ್ತಾರೆ.

"ಬೆಂಗಳೂರಿನ ಗಾಂಧೀಭವನ ಭವ್ಯವಾಗಿ ಬೆಳೆಯುವ ಭರವಸೆ ಇದೆ. ಇದು ಬಹು ದೊಡ್ಡದಾಗಿ ಬೆಳೆದು ಗಾಂಧೀ ಮಾರ್ಗದಲ್ಲಿ ಜನ ನಡೆಯಲಿ, ಜಿಲ್ಲೆಗೊಂದು ಗಾಂಧೀಭವನವಾಗಲಿ ಎಲ್ಲರೂ ಪ್ರೀತಿ ವಿಶ್ವಾಸದಿಂದ ಬದುಕಲೆಂಬುದು ನನ್ನ ಹಿರಿದಾಸೆ" ಎನ್ನುತ್ತಾರೆ.

ಕರ್ನಾಟಕದಲ್ಲಿ ಗಾಂಧಿ ಸೇವಾ ಪ್ರಶಸ್ತಿ

ರಾಷ್ಟ್ರಮಟ್ಟದಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿ ಗಾಂಧಿ ಬದುಕಿನಲ್ಲಿ ಬಾಳಿದ ಗಣ್ಯರೊಬ್ಬರಿಗೆ ಗಾಂಧಿ ಸೇವಾ ಪ್ರಶಸ್ತಿ ಸ್ಥಾಪಿಸಬೇಕೆಂಬುದು ಡಾ॥ ಹೊ. ಶ್ರೀನಿವಾಸಯ್ಯರವರ ಹಲವು ವರ್ಷಗಳ ಹಂಬಲವಾಗಿತ್ತು. 2014ರಲ್ಲಿ ಡಾ॥ ಹೊ. ಶ್ರೀನಿವಾಸಯ್ಯರವರ ಮನವಿಗೆ ಸ್ಪಂದಿಸಿದ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು 5 ಲಕ್ಷ ರೂ.ಗಳ ನಗದು, ಪ್ರಶಸ್ತಿ ಫಲಕವನ್ನು ಗಾಂಧಿ ಮಾರ್ಗದಲ್ಲಿ

ನಡೆದ ಗಣ್ಯರಿಗೆ ಗಾಂಧಿ ಸೇವಾ ಪ್ರಶಸ್ತಿ ನೀಡಲು ಕ್ರಮ ಕೈಗೊಂಡರು. 2014ರಲ್ಲಿ ಅಂತರ ರಾಷ್ಟ್ರೀಯ ಖ್ಯಾತಿಯ ಗಾಂಧಿ ಅನುಯಾಯಿ ಡಾ॥ ಎಸ್.ಎನ್. ಸುಬ್ಬರಾವ್ ಅವರಿಗೆ ಡಾ॥ ಹೊ. ಶ್ರೀನಿವಾಸಯ್ಯ ಅಧ್ಯಕ್ಷತೆಯ ಆಯ್ಕೆ ಸಮಿತಿ ಈ ಪ್ರಶಸ್ತಿಯನ್ನು ನೀಡಿತು. 2015ರಲ್ಲಿ ಅಪ್ಪಟ ಗಾಂಧಿ ಬದುಕಿಗಾಗಿ ಹಾಗೂ ತಮ್ಮ ಜೀವಮಾನದ ಸಾಧನೆಗಾಗಿ ಡಾ॥ ಹೊ. ಶ್ರೀನಿವಾಸಯ್ಯರವರಿಗೆ ಗಾಂಧಿ ಸೇವಾ ಪ್ರಶಸ್ತಿ ನೀಡಿತು. ರಾಜ್ಯಮಟ್ಟದಲ್ಲಿ ಇಂತಹ ಪ್ರಶಸ್ತಿ ಸ್ಥಾಪಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆ ಕರ್ನಾಟಕ ರಾಜ್ಯದ್ದಾಯಿತು.

ಗ್ರಂಥಾಲಯಕ್ಕೆ ಕೊಡುಗೆ

ತಾವು ಸುಮಾರು ತಮ್ಮ ಜೀವಿತಾವಧಿಯ ಏಳು ದಶಕಗಳ ಕಾಲ ಜೋಪಾನವಾಗಿ ಹಾಗೂ ಪರಿಶ್ರಮದಿಂದ ಜೀವಮಾನದ ಸಾಧನೆ ಎಂದೇ ಹೇಳಬಹುದಾದ 20,000 ಅಮೂಲ್ಯವಾದ ಪುಸ್ತಕಗಳ ಸಂಗ್ರಹವನ್ನು ಗಾಂಧೀ ಭವನಕ್ಕೆ ಡಾ॥ ಹೊ. ಶ್ರೀನಿವಾಸಯ್ಯ ಅವರು ಉಚಿತವಾಗಿ ನೀಡಿದ್ದು ಇದು ಗಾಂಧೀಭವನಕ್ಕೆ ಒಂದು ಅಪೂರ್ವ ಕಾಣಿಕೆಯಾಗಿದ್ದು ಇದು ಅವರಿಗೆ ಸಂತಸ ತಂದಿದೆ. ಈ ಕಾರ್ಯ ಅರ್ಥ ಪೂರ್ಣವಾದುದು ಹಾಗೂ ಗಾಂಧೀಭವನ ಇವುಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಸೂಕ್ತವಾದ ಸ್ಥಳ ಎಂದು ತೀರ್ಮಾನಿಸಿದುದು ಇದೊಂದು ಪುಣ್ಯದ ಕೆಲಸ ಎಂಬ ತೃಪ್ತಿಯೂ ಅವರಿಗಾಗಿದೆ.

ವಿದ್ಯಾಸಂಸ್ಥೆಗಳಲ್ಲಿ ಸೇವೆ

ವಿದ್ಯಾ ಕ್ಷೇತ್ರದಲ್ಲಿನ ಇವರ ಸೇವೆ ಅನನ್ಯವಾದುದು. ಅನೇಕ ವಿದ್ಯಾ ಸಂಸ್ಥೆಗಳೊಂದಿಗೆ ಇಂದಿಗೂ ಸಂಪರ್ಕ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಮಲ್ಲೇಶ್ವರಂನಲ್ಲಿರುವ ಬೆಂಗಳೂರು ವಿದ್ಯಾಸಂಸ್ಥೆ (ಬಿ.ಇ.ಎಸ್) ಖಜಾಂಚಿಯಾಗಿ: ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ, ಈಗ ಅಧ್ಯಕ್ಷರಾಗಿ ಸಂಸ್ಥೆಯನ್ನು ಬೆಳೆಸಿದ್ದಾರೆ. ಬಾಡಿಗೆ ಮನೆಯಲ್ಲಿ ಇದ್ದ ಸಂಸ್ಥೆಗೆ ಗಾಂಧೀ

ಸಾಹಿತ್ಯಸಂಘದಲ್ಲಿ ಸ್ಥಳ ಕೊಟ್ಟು, ಸ್ವಂತ ಕಟ್ಟಡಕ್ಕೆ ಅವಕಾಶ ನೀಡಿ ಈ ದಿನ ದೊಡ್ಡ ಸಂಸ್ಥೆಯಾಗಿ, ಗಾಂಧೀ ಮಾರ್ಗದಲ್ಲಿ ಸಂಸ್ಥೆಯನ್ನು ನಡೆಸಲಾಗುತ್ತಿದೆ. ಇಲ್ಲಿ ಪ್ರಾಂಶುಪಾಲರಿಂದ ಹಿಡಿದು ಆಯಾಗಳು, ಎಲ್ಲಾ ಮಕ್ಕಳು ಖಾದಿ ಧರಿಸುತ್ತಾರೆ. ಗಾಂಧೀ ಆತ್ಮಕಥೆಯನ್ನು ಕಡ್ಡಾಯವಾಗಿ ಎಲ್ಲರಿಗೂ ನೀತಿಪಾಠವಾಗಿ ಭೋದಿಸಲಾಗುತ್ತದೆ. ಇಲ್ಲಿ ಓದಿದ ಮಕ್ಕಳಿಗೂ ಬೇರೆ ಮಕ್ಕಳಿಗೂ ವ್ಯತ್ಯಾಸವನ್ನು ಅವರ ನಡವಳಿಕೆಗಳಲ್ಲಿ ಸುಲಭವಾಗಿ ಕಾಣಬಹುದು. ಪುಸ್ತಕ ಭಂಡಾರವನ್ನು ಮಕ್ಕಳು ಹೆಚ್ಚು ಉಪಯೋಗಿಸಿ ಪುಸ್ತಕ ಓದಿದವರಿಗೆ ಶ್ರೀನಿವಾಸಯ್ಯನವರು ಬಹುಮಾನವನ್ನು ಕೊಡುವ ಏರ್ಪಾಡು ಮಾಡಿದ್ದಾರೆ.

"ಪೀಪಲ್ ಟ್ರಸ್ಟ್" ಎಂಬ ಸಂಸ್ಥೆಯ ಅಧ್ಯಕ್ಷರಾಗಿ, ದೊಡ್ಡ ಬಳ್ಳಾಪುರದ ಹತ್ತಿರ ಒಂದು ಹಳ್ಳಿಯಲ್ಲಿ ಒಳ್ಳೆಯ ವಿದ್ಯಾಸಂಸ್ಥೆಯನ್ನು ಕಟ್ಟಿದ್ದಾರೆ. ಈ ಸಂಸ್ಥೆ ಪೂರ್ಣಗ್ರಾಮವನ್ನು ದತ್ತು ತೆಗೆದುಕೊಂಡು ಕೆಲಸ ಮಾಡುತ್ತಿದೆ. ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಮೈಸೂರು ಬ್ಯಾಂಕಿನ ಹತ್ತಿರ ಇರುವ ಆಂಜನೇಯ ಸ್ವಾಮಿ ದೇವಸ್ಥಾನದ ಧರ್ಮದರ್ಶಿಯಾಗಿ 25 ವರ್ಷ ಸೇವೆ ಸಲ್ಲಿಸಿ ಉತ್ತಮ ಸ್ಥಿತಿಗೆ ತಂದಿದ್ದಾರೆ.

ಜಿ. ಹೆಚ್. ಇ. ಎಲ್ ಕನ್ನಡ ಸಂಘದ ಅಧ್ಯಕ್ಷರಾಗಿ 12 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆ ಸೌಹಾರ್ದ ವಾತಾವರಣ ನಿರ್ಮಾಣ ಮಾಡಿ ಅವರಲ್ಲಿ ಯಾವ ಘರ್ಷಣೆಯೂ ಇಲ್ಲದೆ ಎಲ್ಲರೂ ಒಟ್ಟಾಗಿ ಕಾರ್ಯಕ್ರಮ ಮಾಡಲು ಏರ್ಪಾಡು ಮಾಡಿದ್ದಾರೆ. ಒಳ್ಳೆಯ ಪುಸ್ತಕ ಭಂಡಾರ ಹೊಂದಿದ ಕನ್ನಡ ಸಂಘ ಸ್ಥಾಪಿಸಿದ್ದಾರೆ. ಆಡಳಿತ ವರ್ಗದ ಜೊತೆ ನೌಕರರು ಪೂರ್ಣವಾಗಿ ಸಹಕರಿಸುವಲ್ಲಿ ಹೊ. ಶ್ರೀನಿವಾಸಯ್ಯನವರು ಶ್ರಮ ಪಟ್ಟಿದ್ದಾರೆ.

ವೃದ್ಧಾಶ್ರಮ

ಶ್ರೀರಾಮ ಮಂದಿರ ಟ್ರಸ್ಟ್ ವತಿಯಿಂದ ಒಂದು ವೃದ್ಧಾಶ್ರಮ ಪ್ರಾರಂಭಿಸಿ, ಅತಿ ಕಡಿಮೆ ಖರ್ಚಿನಲ್ಲಿ ಉತ್ತಮ ಮಟ್ಟದ ಸಂಸ್ಥೆ

ನಡೆಸುತ್ತಿದ್ದಾರೆ. ಅದರ ಅರ್ಧ ಖರ್ಚು ಶ್ರೀರಾಮ ಸಮುದಾಯ ಭವನದಿಂದ ಬರುವ ಹಣದಿಂದ ಭರಿಸುತ್ತಾರೆ. ಒಂದು ಸಾರಿ ಸೇರಿಕೊಂಡವರು ಕೊನೆಯವರಿಗೂ ಬಿಡುವುದೇ ಇಲ್ಲ. ವೃದ್ಧರ ಪ್ರವಾಸಕ್ಕೆ ಏರ್ಪಾಟು ಮಾಡಿದ್ದಾರೆ. ರಾಮ ಮಂದಿರದ ಕಾರ್ಯಕ್ರಮದಲ್ಲಿ ಅವರೆಲ್ಲ ಸಂಪೂರ್ಣವಾಗಿ ಭಾಗವಹಿಸಿಕೊಂಡು ಸಂತೋಷವಾಗಿದ್ದಾರೆ ಎಂದು ಹೆಮ್ಮೆಯಿಂದ ಹೇಳಬಹುದು.

ಹಿರಿಯ ನಾಗರಿಕರ ವೇದಿಕೆ

ಹಿರಿಯ ನಾಗರಿಕರಿಗೆ ಹಲವು ಉಪಯುಕ್ತ ಕಾರ್ಯಕ್ರಮ ಪ್ರಾರಂಭಿಸಿದ್ದಾರೆ. ಅವರು ಮಲ್ಲೇಶ್ವರದ ಹಿರಿಯ ನಾಗರಿಕ ವೇದಿಕೆ ಸ್ಥಾಪಿಸಿದರು. ಮೊದಲನೆಯ ವರ್ಷವೇ 300 ಜನ ಸದಸ್ಯರಾಗಿದ್ದಾರೆ. ಎಲ್ಲರೂ ಸೇರಿ ಪ್ರವಾಸ ಮಾಡಲು ಅವಕಾಶ ಮಾಡಿದ್ದಾರೆ. ಹಿರಿಯರು ಸಂತೋಷವಾಗಿ ಕಾಲ ಕಳೆಯಲು ಅವಕಾಶ ಮಾಡಿ ಕೊಟ್ಟಿದ್ದಾರೆ.

ಸಹಕಾರಿ ಕ್ಷೇತ್ರ

ಸಹಕಾರಿ ಕ್ಷೇತ್ರದಲ್ಲಿ ಇವರ ಸೇವೆ ಅಪಾರ. 1952ರಲ್ಲಿ ಶ್ರೀರಾಮ ಕೋ-ಆಪರೇಟ್ ಬ್ಯಾಂಕ್ ಪ್ರಾರಂಭಿಸಿದರು. ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರವರ ಸಹಾಯದಿಂದ ಬಡವರಿಗಾಗಿ ಒಂದು ಬ್ಯಾಂಕ್ ಸ್ಥಾಪಿಸಿದರು. ಅಂದು ಅದು ಹೆಬ್ಬೆಟ್ಟು ಗುರುತಿನ ಬ್ಯಾಂಕು ಎಂದೇ ಪ್ರಸಿದ್ಧಿ ಆಗಿತ್ತು. ಅದರ ದಶಮಾನೋತ್ಸವ ಆಚರಿಸಲಾಗಿತ್ತು. ಈ ಸಮಾರಂಭಕ್ಕೆ ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಬಂದಿದ್ದರು. ನೀವು ಜನಕ್ಕೆ ಹಣ ಕೂಡಿಹಾಕಿ ನಿಮ್ಮ ಕಾಲ ಮೇಲೆ ನಿಂತುಕೊಳ್ಳುವುದನ್ನು ಹೇಳಿ ಕೊಡಬೇಕು ಎಂದು ಸಲಹೆ ನೀಡಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು, ಸಹಕಾರ ಸಂಬಂಧಪಟ್ಟ ಅಧಿಕಾರಿಗಳು, ಮಂತ್ರಿಗಳು ಬಂದರೆ, ಶ್ರೀರಾಮ ಕೋ-ಆಪರೇಟಿವ್ ಬ್ಯಾಂಕಿನ ಆಡಳಿತ ನೀತಿ ನೋಡಲು ಕಳುಹಿಸಿಕೊಡುತ್ತಿದ್ದರು. ಆಗಿನ ಕೇಂದ್ರದ ಸಹಕಾರ ಮಂತ್ರಿಗಳಾದ

ಕೆ.ಸಿ. ದೇಯವರನ್ನು ಈ ಬ್ಯಾಂಕಿಗೆ ನೋಡಲು ಕಳುಹಿಸಬಹುದು ಎಂದು ಪ್ರಶಂಸಿಸಿದರು. ಡಾ॥ ಹೊ. ಶ್ರೀನಿವಾಸಯ್ಯನವರ ಈ ಸಾಧನೆಯ ದೊಡ್ಡ ಚಾರ್ಟ್ ನೋಡಿ ಸಂದರ್ಶಕರ ಪುಸ್ತಕದಲ್ಲಿ ಅವರನ್ನು ಪ್ರಶಂಸೆ ಮಾಡಿ ಅಭಿಪ್ರಾಯವನ್ನು ಬರೆದಿದ್ದಾರೆ. ಇಲ್ಲಿನ ಸದಸ್ಯರು ಬಹುಪಾಲು ಬಡವರಾದರೂ 5 ವರ್ಷಗಳಲ್ಲಿ ಸಾಲದ ಸುಸ್ಥಿತಿಯೂ ಇರಲಿಲ್ಲ. ಇದಕ್ಕೆ ಕರ್ನಾಟಕ ಸರ್ಕಾರ ಒಂದು ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ.

ಬೆಂಗಳೂರು ಯೋಗ ಕೇಂದ್ರ

ಬೆಂಗಳೂರು ಯೋಗ ಕೇಂದ್ರದ ಸ್ಥಾಪಕ ಸದಸ್ಯರಾಗಿ; ಈಗ ಅದರ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಯೋಗ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಪ್ರಕೃತಿ ಜೀವನ ಕೇಂದ್ರದ ಅಧ್ಯಕ್ಷರಾಗಿ ಈಗಲೂ ಯೋಗಾಸನ ತರಗತಿಗಳು; ಪ್ರಕೃತಿ ಚಿಕಿತ್ಸಾ ತರಗತಿಗಳನ್ನು ಆಗಾಗ ಉಚಿತ ಸಲಹಾ ಕ್ಯಾಂಪುಗಳನ್ನು ನಡೆಸುತ್ತಲೇ ಇದ್ದಾರೆ.

ಸಮಾಜದ ನಡುವೆ

ನಮ್ಮ ಸಮಾಜದ ಋಣ ತೀರಿಸುವ ಉದ್ದೇಶ ಪೂರೈಸಲು ಡಾ॥ ಹೊ. ಶ್ರೀನಿವಾಸಯ್ಯ ಅವರು 'ಜಯಶ್ರೀ' ಟ್ರಸ್ಟ್ ಸ್ಥಾಪನೆ ಮಾಡಿದರು. ಈ ಸಂಸ್ಥೆ 1979ರಲ್ಲಿ ಆರಂಭವಾಗಿ. ಜಾತಿಮತ ಭೇದವಿಲ್ಲದೆ ಅರ್ಹತೆ ಇರುವ ವಿದ್ಯಾರ್ಥಿಗಳಿಗೆ, ಬಲಹೀನರಿಗೆ, ಸಮಾಜದ ಸೇವಾ ಸಂಸ್ಥೆಗಳಿಗೆ ಸಹಾಯ ಮಾಡುವ ಮುಖ್ಯ ಉದ್ದೇಶ ಹೊಂದಿದೆ. ಮಕ್ಕಳಿಗೆ ಪುಸ್ತಕ ಕೊಂಡುಕೊಡುವುದು, ಪರೀಕ್ಷಾ ಶುಲ್ಕ ನೀಡಿ ಸಹಾಯ ಮಾಡುವ ಹಲವು ಸಮಾಜಮುಖಿ ಗುರಿಗಳನ್ನು ಟ್ರಸ್ಟ್ ಹೊಂದಿದೆ. ಜೊತೆಗೆ ಉತ್ತಮವಾದ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಹಾಗೂ ಬಲಹೀನ ಕುಟುಂಬದವರಿಗೆ ಟ್ರಸ್ಟ್ ಮೂಲಕ ಸಹಾಯಮಾಡಲಾಗಿದೆ. "ಎಷ್ಟೋ ಜನರ ಕೃಪಾಶ್ರಯ, ಹಿರಿಯರ ಪ್ರೀತಿ, ಸ್ನೇಹಿತರ ಬೆಂಬಲ, ತಾಯಿ ತಂದೆಯರ ಆಶೀರ್ವಾದ ನನ್ನನ್ನೂ, ನನ್ನ ಮನೆಯ ವಾತಾವರಣವನ್ನು

ನೆಮ್ಮದಿಯಾಗಿ ಇರಿಸಿದೆ. ನಾವು ಬದುಕುವುದು ಮಾತ್ರವಲ್ಲ, ಸುತ್ತಲಿನವರ ಬದುಕು ಸಹ್ಯಗೊಳ್ಳುವಂತೆ ಬದುಕಬೇಕು, ಅವರು ಬದುಕಿ ನಾವೂ ಬದುಕಬೇಕು, ಇದು ನನ್ನ ಜೀವನ ಸೂತ್ರ. ಇದಕ್ಕೆ ತಕ್ಕಂತೆ ಈ ನನ್ನ ಜೀವನ ಸುಖ ದುಃಖಗಳನ್ನು ಕಂಡು ಸಮರಸವಾಗಿ ನಡೆದುಕೊಂಡು ಬಂದಿದೆ". ಎಂಬುದನ್ನು ಅತ್ಯಂತ ಕೃತಾರ್ಥ ಭಾವ ದಿಂದ ಡಾ॥ ಹೊ. ಶ್ರೀನಿವಾಸಯ್ಯ ಅವರು ಸ್ಮರಿಸುತ್ತಾರೆ.

ಡಾ॥ ಹೊ. ಶ್ರೀನಿವಾಸಯ್ಯ ಚಾರಿಟಬಲ್ ಟ್ರಸ್ಟ್ ಸ್ಥಾಪನೆ

ಡಾ॥ ಹೊ. ಶ್ರೀನಿವಾಸಯ್ಯನವರ ಅಭಿಮಾನಿಗಳು ಮತ್ತು ಬಂಧುಗಳು ಸೇರಿ ಗಾಂಧಿ ವಿಚಾರ ಪ್ರಚಾರ ಮತ್ತು ಗಾಂಧಿ ಕನಸಿನ ಗ್ರಾಮ ಸ್ವರಾಜ್ಯದ ಅನುಷ್ಠಾನಕ್ಕೆ "ಡಾ॥ ಹೊ. ಶ್ರೀನಿವಾಸಯ್ಯ ಚಾರಿಟ ಬಲ್ ಟ್ರಸ್ಟ್" ಅನ್ನು 2015ರ ನವೆಂಬರ್‌ನಲ್ಲಿ ಸ್ಥಾಪಿಸಿದ್ದಾರೆ. ಸಮಾನ ಉದ್ದೇಶ ಹೊಂದಿದ ಜಯಶ್ರೀ ಟ್ರಸ್ಟ್ ಅನ್ನು ಡಾ॥ ಹೊ. ಶ್ರೀನಿವಾಸಯ್ಯ ಟ್ರಸ್ಟ್‌ನೊಂದಿಗೆ ವಿಲೀನಗೊಳಿಸಿ ಸಮಾಜ ಮುಖಿ ಕಾರ್ಯಗಳನ್ನು ಈ ಆದರ್ಶ ದಂಪತಿಗಳ ಹೆಸರಿನಲ್ಲಿ ಮುಂದುವರಿಸಲಾಗಿದೆ.

ಆಧ್ಯಾತ್ಮಿಕ ಸೇವೆ

ಆಧ್ಯಾತ್ಮಿಕ ವಿಚಾರಗಳಲ್ಲಿ ನಂಬಿಕೆ ಹುಟ್ಟಿದ್ದು ತಾಯಿ ತಿಮ್ಮಮ್ಮ ಮತ್ತು ಗುರು ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ ಪ್ರಭಾವದಿಂದ. ಮಲ್ಲೇಶ್ವರಂನಲ್ಲಿ ಶ್ರೀರಾಮ ಮಂದಿರ, ಶ್ರೀ ಆಂಜನೇಯ ಮೊದಲಾದ ದೇವಮಂದಿರಗಳನ್ನು ಸ್ಥಾಪಿಸಲು ಪ್ರಮುಖ ಪಾತ್ರ ವಹಿಸಿದ್ದರು. ಆಗಾಗ್ಗೆ ತನ್ನ ತಾಲ್ಲೂಕಿನಲ್ಲಿರುವ ಆದಿಚುಂಚನಗಿರಿ ಮಠಕ್ಕೆ ಹೋಗಿ ಬರುತ್ತಿದ್ದರು. ಶ್ರೀನಿವಾಸಯ್ಯನವರಿಗೆ ಮಠದ ಹೆಚ್ಚು ಸಂಪರ್ಕವಾದದ್ದು 1974ರಲ್ಲಿ. ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಪೀಠಾಧಿಪತಿಗಳಾದ ಮೇಲೆ ಬೆಂಗಳೂರಿನಲ್ಲಿ ಪ್ರವಾಸ ಮಾಡಲು ಏರ್ಪಾಡು ಮಾಡುವುದರಲ್ಲಿ ಹೆಚ್ಚು ಆಸಕ್ತಿ ವಹಿಸಿ ಬೆಂಗಳೂರಿನ ಜನರಿಗೆ ಶ್ರೀ ಸ್ವಾಮಿಗಳನ್ನು ಮತ್ತು ಮಠವನ್ನು ಪರಿಚಯ ಮಾಡುವುದರಲ್ಲಿ ಪ್ರಮುಖ ಪಾತ್ರವಹಿಸಿದರು.

ನಂತರ ಐ.ಟಿ.ಐ (I.T.I) ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿ ಹಳ್ಳಿಯವರಿಗೆ ತಾಂತ್ರಿಕ ಶಿಕ್ಷಣ ಕೊಡಿಸಿದರು. ಶ್ರೀ ಸ್ವಾಮಿಗಳು ಇವರನ್ನು ಧರ್ಮದರ್ಶಿಯನ್ನಾಗಿ ಮಾಡಿ ಶ್ರೀ ಆದಿಚುಂಚನಗಿರಿ ಪತ್ರಿಕೆ ಪ್ರಾರಂಭಿಸಲು ಜವಬ್ದಾರಿ ಕೊಟ್ಟರು. "ಆದಿಚುಂಚನಗಿರಿ" ಪತ್ರಿಕೆಯ ಸಂಪಾದಕ, ಪ್ರಕಾಶಕನಾಗಿ ನೊಂದಾಯಿಸಿಕೊಂಡರು. ತ್ರೈಮಾಸಿಕ ಪತ್ರಕೆಯನ್ನಾಗಿ ಪ್ರಕಟಿಸಲು ಪ್ರಾರಂಭಿಸಿದರು. ಶ್ರೀ ಸ್ವಾಮಿಗಳ ಸಂದೇಶ ಕರ್ನಾಟಕದ ಎಲ್ಲೆಡೆ ಹರಡಲು ಈ ಪತ್ರಿಕೆಯನ್ನು ಸಾಧನವನ್ನಾಗಿ ಮಾಡಿದರು.

ಶ್ರೀ ಮಠದ ಮತ್ತು ಕರ್ನಾಟಕದ ಕೆಲವು ಮಠಗಳಿಂದ 10 ಜನ ಸ್ವಾಮಿಗಳನ್ನು ಪ್ರಪಂಚ ಪರ್ಯಟನೆ ಮಾಡಿಸಿದರು.

ಈಗಲೂ ಮಠದ ಧರ್ಮದರ್ಶಿಗಳಾಗಿದ್ದಾರೆ. ಅದೇ ರೀತಿಯ ಪ್ರೀತಿ ಗೌರವಗಳನ್ನು ಡಾ॥ ಹೊ. ಶ್ರೀ ಅವರ ಬಗ್ಗೆ ಇಂದಿನ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ತೋರುತ್ತಿರುವುದು ಅವರ ಸೇವೆಗೆ ಶ್ರೀಕ್ಷೇತ್ರ ನೀಡುತ್ತಿರುವ ಗೌರವವನ್ನು ಸೂಚಿಸುತ್ತದೆ. ಒಕ್ಕಲಿಗರ ಸಂಘದ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯನಾಗಿ ಮತ್ತು ಖಜಾಂಚಿಯಾಗಿ ಸುಮಾರು 20 ವರ್ಷಗಳ ಕಾಲ ಸೇವೆಸಲ್ಲಿಸಿದ್ದಾರೆ. ಇಂಜಿನಿಯರಿಂಗ್ ಕಾಲೇಜು, ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಶ್ರಮಿಸಿದ್ದಾರೆ.

ಡಾ॥ ಹೊ. ಶ್ರೀನಿವಾಸಯ್ಯ ಅವರ 9ದಶಕಗಳ ಬದುಕು ಹಲವಾರು ಏಳುಬೀಳುಗಳನ್ನು ಕಂಡು, ಕಠಿಣ ಪರಿಶ್ರಮದಿಂದ, ಅತ್ಯಂತ ಸರಳ ಹಾಗೂ ಪ್ರಾಮಾಣೀ ಕತೆಯಿಂದ ರೂಪಿಸಿಕೊಂಡಿದ್ದು. ಅವರದು ಇಂದಿನ ಸಮಾಜದಲ್ಲಿ ಒಂದು ಅಪೂರ್ವವಾದ ಆದರ್ಶದ ಬದುಕಾಗಿದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಅವರು ವಹಿಸಿದ ಧೈರ್ಯ, ಸ್ಥೈರ್ಯದ ವಿಶಿಷ್ಟ ಪಾತ್ರ, ಗಾಂಧೀಜಿ ವ್ಯಕ್ತಿ ವಿಚಾರಗಳನ್ನು ನಾಡಿನ ಮೂಲೆಮೂಲೆಗೆ ಬಿತ್ತುವಲ್ಲಿ ಮತ್ತು ಅವುಗಳನ್ನು ನಂಬಿ ಬದುಕುವುದರಲ್ಲಿ ಇವರ ಜೀವನ ಇಂದಿನ ಜಗತ್ತಿನಲ್ಲಿ ಒಂದು ಮಾದರಿಯ ಜೀವನವಾಗಿ ರೂಪುಗೊಂಡಿದೆ. ನಮ್ಮ ಸಮಾಜದಲ್ಲಿ

ಅವರು ಕೇವಲ ಒಬ್ಬ ವ್ಯಕ್ತಿಯಾಗಿ ಬದುಕದೆ ಬಹುದೊಡ್ಡ ಆದರ್ಶದ ಶಕ್ತಿಯಾಗಿ ಬದುಕುತ್ತಿದ್ದಾರೆ. ಅವರು ತಮಗಾಗಿಯೇ ಬದುಕದೆ ಸಮಾಜಕ್ಕಾಗಿ ಬದುಕುತ್ತಿರುವ ಆದರ್ಶಜೀವಿ. ಡಾ॥ ಹೊ. ಶ್ರೀನಿವಾಸಯ್ಯ ಅವರನ್ನು ಬಲ್ಲವರೆಲ್ಲ ಅವರನ್ನು 'ಕರ್ನಾಟಕದ ಗಾಂಧೀ' ಎಂದೇ ಗೌರವಭಾವದಿಂದ ಕರೆಯುತ್ತಾರೆ.

ಗಣ್ಯರು ಕಂಡಂತೆ ಡಾ॥ ಹೊ. ಶ್ರೀನಿವಾಸಯ್ಯ

"ಶ್ರೀಮಾನ್ ಹೊ. ಶ್ರೀನಿವಾಸಯ್ಯ ಅವರದು ಅಪೂರ್ವವಾದ ವ್ಯಕ್ತಿತ್ವ, ಉತ್ತಮವಾದ ಜೀವನಾದರ್ಶ, ಸಮದೃಷ್ಟಿ, ಸಮಾಜ ಕಲ್ಯಾಣದೃಷ್ಟಿ, ಐಹಿಕ ಪಾರಲೌಕಿಕಗಳ ಮಧುರ ಮಿಲನ. ಕರ್ಮಜ್ಞಾನ ಭಕ್ತಿ ಸೇವಾ-ಪೂಜೆ ಇವುಗಳ ಸಮೀಕರಣದಿಂದ ಲಭ್ಯವಾದ ಒಂದು ಪೂರ್ಣದೃಷ್ಟಿ. ದೇಹ, ಆತ್ಮ ಭಾವನೆಗಳು, ಸೇವಾತತ್ಪರತೆ, ಮಾನವೀಯತೆ ಎಲ್ಲವನ್ನೂ ಒಳ್ಳೆ ಹದದಲ್ಲಿ ವೈಣಿಕ ತನ್ನ ವೀಣೆಯ ತಂತಿಗಳನ್ನು ನುಡಿಸಲು ಸಿದ್ದಮಾಡಿಟ್ಟಿರುವಂತೆ ಇಟ್ಟಿದ್ದಾರೆ. ಇವರ ಒಂದೊಂದು ಸಾಧನೆಯೇ, ಒಬ್ಬ ಮನುಷ್ಯನಿಗೆ ಜೀವಿತದ ಪೂರ್ತಿಯ ಗುರಿ ಆಗಬಹುದು. ಅವರ ಬುದ್ಧಿಯ ಸ್ವಚ್ಛತೆ ಮತ್ತು ಚುರುಕು, ಆ ಬಗೆಯ ಸ್ವಸುಖಾಭಿಲಾಷಿ ತಾಮಸಕ್ಕೆ ಎಡಗೊಡಲಿಲ್ಲ. ಅವರ ಹೃದಯದಲ್ಲಿ ಜನತಾ ಸೇವೆಯ ಕಿಡಿ ಸದಾ ಜಾಗೃತವಾಗಿದೆ. "ಬುದ್ಧಿವಂತರು ಒಳ್ಳೆಯವರಲ್ಲ. ಒಳ್ಳೆಯವರು ಬುದ್ಧಿವಂತರಲ್ಲ" ಎಂಬ ಒಂದು ನುಡಿಯುಂಟು. ಶ್ರೀನಿವಾಸಯ್ಯವನರು ಬುದ್ಧಿವಂತರೂ ಹೌದು ಒಳ್ಳೆಯವರು ಹೌದು".

-ಡಾ॥ ಗೋರೂರು ರಾಮಸ್ವಾಮಿ ಐಯ್ಯಂಗಾರ್
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಾಹಿತಿಗಳು

"ಬಹುಮುಖ ಪ್ರತಿಭಾಶೀಲರಾದ, ಸೇವಾ ಸನ್ಮಾರ್ಗಿಗಳಾದ, ಸುಸಂಸ್ಕೃತರೆನಿಸಿದ ಡಾ॥ ಹೊ. ಶ್ರೀನಿವಾಸಯ್ಯ ಗ್ರಾಮೀಣ ಪರಿಸರದಲ್ಲಿ ಜನ್ಮ ತಳೆದು ಸ್ವತಃ ಪರಿಶ್ರಮ, ಶ್ರದ್ಧೆಗಳಿಂದ ಸಾರ್ಥಕ ಹೆಜ್ಜೆಗಳನ್ನು ತುಳಿದು ಗಾಂಧೀಜಿಯವರ ತತ್ವನಿಷ್ಠರಾಗಿ, ಶಿಕ್ಷಣ ತಜ್ಞರೆನಿಸಿ, ಸಾಹಿತ್ಯ ಕೃಷಿಕರಾಗಿ, ಸೇವೆಯೇ ಶಿವಪೂಜೆಯೆಂದರಿತು ಸಾತ್ವಿಕ ಜೀವನ ನಡೆಸಿದ ಅಪಾರ ಅಭಿಮಾನೀ ಬಳಗ ಸಂಪನ್ನರು. ಅವರ ಬಾಳು ಇಂದಿನ ಯುವಜನತೆಗೆ ದಾರಿದೀಪ".

- ಡಾ॥ ಶಿವಕುಮಾರ ಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಸಿದ್ಧಗಂಗಾ ಕ್ಷೇತ್ರ

"ಹುಟ್ಟು ಹೋರಾಟಗಾರರಾದ, ತುಂಬು ಚಟುವಟಿಕೆಯ ಶಿಸ್ತಿನ ಸೇವಕರಾದ ಡಾ॥ ಹೊ. ಶ್ರೀನಿವಾಸಯ್ಯ ಅವರು ಅನೇಕ ಸಂಘ ಸಂಸ್ಥೆಗಳಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೇ ಸೇವೆ ಸಲ್ಲಿಸಿ ಹಿರಿಯ ಕಿರಿಯರೆಲ್ಲರಿಗೂ ಆತ್ಮೀಯ ವ್ಯಕ್ತಿಯಾಗಿದ್ದಾರೆ. ಪ್ರಕೃತಿ ವಿಜ್ಞಾನ, ತಂತ್ರಜ್ಞಾನ, ಗಾಂಧೀಜಿ ವಿಚಾರಗಳನ್ನು ಮೊದಲ್ಗೊಂಡು ಆತ್ಮಜ್ಞಾನದವರೆಗೆ ಬಹಳ ಕ್ಷೇತ್ರಗಳಿಗೆ ಅವರು ಸಲ್ಲಿಸಿರುವ ಸೇವೆ ಅನುಪಮವಾದುದು. ಅವರು ಲೋಕವನ್ನೇ ತನ್ನದಾಗಿಸಿಕೊಂಡಿರುವ ಸರಳಜೀವನದ ಸೌಜನ್ಯಮೂರ್ತಿ. ಅವರ ಪಾಲಿಗೆ ಲೋಕಸೇವೆಯೇ ಈಶ ಪೂಜೆಯಾಗಿದೆ".

– ಡಾ॥ ಬಾಲಗಂಗಾಧರನಾಥ ಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಕ್ಷೇತ್ರ

"ನುಡಿದಂತೆ ನಡೆದ ಮಹಾನುಭಾವರ ಶ್ರೇಣಿಗೆ ಸೇರಿದವರು ಪೂಜ್ಯ ಸಿದ್ಧವನಹಳ್ಳಿ ಕೃಷ್ಣಶರ್ಮಾಜಿ ಅವರು. ಅವರ ನೇತೃತ್ವದಲ್ಲಿ ಇದ್ದ ಹದಿನೈದು ಇಪ್ಪತ್ತು ಯುವಕರಿಗೆ ಡಾ॥ ಹೊ. ಶ್ರೀನಿವಾಸಯ್ಯ ಲೀಡರ್, ಕ್ಯಾಪ್ಟನ್, ಹಿರಿಯಣ್ಣ ಇದ್ದಹಾಗೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿ ಜನಪ್ರಿಯರಾಗಿದ್ದವರು. ಗಾಂಧೀಜಿ ಅವರ ಆದರ್ಶಗಳನ್ನು ಪಾಲಿಸುತ್ತಿದ್ದರು. ಚರಕದಲ್ಲಿ ನೂಲುವುದು, ಶೌಚಾಲಯಗಳನ್ನು ಚೊಕ್ಕಟವಾಗಿಡುವುದು. ಗಾಂಧೀ ಸಾಹಿತ್ಯವನ್ನು ಓದುವುದು, ಗಾಂಧೀ ಜಯಂತಿಗೆ ಮನೆ ಮನೆಗೆ ಅಂಗಡಿ ಮುಂಗಟ್ಟುಗಳಿಗೆ ಹೋಗಿ ಚಂದಾ ವಸೂಲಿ ಮಾಡುವುದು, ಭಾಷಣ ಮಾಡುವುದನ್ನು ರೂಢಿಸಿಕೊಳ್ಳುವುದು –ಮೊದಲಾದವುಗಳಲ್ಲಿ ತಾವೂ ತೊಡಗಿ, ನಮ್ಮನ್ನು ತೊಡಗಿಸಿದರು.

"ಯಾವುದೇ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು ಎಂಬುದನ್ನು ನನ್ನ "ಅಣ್ಣ" ಶ್ರೀನಿವಾಸಯ್ಯನವರಿಂದ ನಮ್ಮಲ್ಲಿ ಕೆಲವರು ಕಲಿತೆವು ಎಂದರೆ ಅತಿಶಯೋಕ್ತಿ ಆಗದು. ಶ್ರೀನಿವಾಸಯ್ಯನವರಿಂದ ನಾನು ಕಲಿತ ರಾಷ್ಟ್ರನಿಷ್ಠೆಯ ಮೌಲ್ಯ ಮತ್ತು ಸೇವಾ ಮನೋಭಾವನೆಯನ್ನು ನಾನು ಗೌರವದಿಂದ ನೆನೆಯುತ್ತೇನೆ".

- ಡಾ॥ ಮತ್ತೂರು ಕೃಷ್ಣಮೂರ್ತಿ
ಮಾಜಿ ಅಧ್ಯಕ್ಷರು, ಭಾರತೀಯ ವಿದ್ಯಾಭವನ, ಬೆಂಗಳೂರು.

"ಡಾ॥ ಹೊ. ಶ್ರೀನಿವಾಸಯ್ಯ ಅವರು "ವಿಶೇಷವಾಗಿ ಸದಾಚಾರ ಸತ್ಯಸಂಧತೆಗಳ ಪುಣ್ಯ ಸಂಚಯದ ಫಲವಾಗಿ ಬಹುಮುಖ ಪ್ರತಿಭೆಯಿಂದ, ತಮ್ಮ ಸರಳ ಸ್ವಭಾವದೊಂದಿಗೆ ಸದಾ ತೀವ್ರ ಚಟುವಟಿಕೆಯುಳ್ಳವರಾಗಿ ತಮ್ಮ ಬಹುಮುಖ ವ್ಯಕ್ತಿತ್ವದಿಂದ ಸಮಾಜದ ಎಲ್ಲ ರಂಗಗಳ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಾನ್ ಚೇತನ".

- ಶ್ರೀಶ್ರೀಶ್ರೀ ಶಿವಾನಂದಭಾರತಿ ಸ್ವಾಮೀಜಿ
ಸುಕ್ಷೇತ್ರ, ಇಂಚಲಾ, ಸವದತ್ತಿ

"ಡಾ॥ ಹೊ. ಶ್ರೀನಿವಾಸಯ್ಯ ಅವರು ಅಚ್ಚ ಗಾಂಧೀವಾದಿಗಳು, ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಗಾಢ ವಿಶ್ವಾಸವುಳ್ಳವರು. ಮಾತೃಭಾಷೆಯಾದ ಕನ್ನಡದ ಕಟ್ಟಭಿಮಾನಿಗಳು. ಅವರು ವೃತ್ತಿಯಲ್ಲಿ ಎಂಜಿನಿಯರ್. ಆದರೆ ಅವರ ಪ್ರವೃತ್ತಿ ಬರವಣಿಗೆ. ನಿರಾಡಂಬರ ಜೀವಿಯಾದ ಡಾ॥ ಹೊ. ಶ್ರೀನಿವಾಸಯ್ಯ ಅವರು ಎಂದೂ ತಮ್ಮ ಕೆಲಸ ಕಾರ್ಯ ಸಾಧನೆಗಳ ಬಗ್ಗೆ ಪ್ರಚಾರ ಬಯಸಿದವರಲ್ಲ. ಎಲೆಮರೆಯ ಹೂವಾಗಿ ದುಡಿಯುತ್ತಲೇ ಬಂದಿದ್ದಾರೆ. ಅದರ ಪರಿಮಳದಂತೆ ಅವರ ದುಡಿಮೆಯ ಪ್ರಭಾವವು ಮಾತ್ರ ಎಲ್ಲ ಕ್ಷೇತ್ರಗಳಲ್ಲಿಯೂ ಪಸರಿಸಿದೆ".

- ಪ್ರೊ॥ ಜಿ.ವೆಂಕಟಸುಬ್ಬಯ್ಯ
ನಿಘಂಟು ತಜ್ಞರು

"ಬಡಕುಟುಂಬದಲ್ಲಿ ಜನಿಸಿ ಸ್ವಯಂಪ್ರತಿಭೆ ಸಾಹಸಗಳಿಂದ ಉಚ್ಚವ್ಯಾಸಂಗ ಮಾಡಿ ಒಂದು ದೊಡ್ಡ ಕೈಗಾರಿಕಾ ಸಂಸ್ಥೆಯಲ್ಲಿ ಮುಖ್ಯ ಸ್ಥಾನದಲ್ಲಿದ್ದದ್ದು ಡಾ॥ ಹೊ. ಶ್ರೀನಿವಾಸಯ್ಯನವರ ಒಂದು ಸಾಧನೆಯಾದರೆ, ಅದಕ್ಕಿಂತ ಹೆಚ್ಚಿನ ಸಾಧನೆಯೆಂದರೆ, ಅವರ ನಿರಂತರ ಸ್ವಾರ್ಥರಹಿತ ಸಾರ್ವಜನಿಕ ಸೇವೆ. ಅವರ ಸರಳತೆ, ಸೌಜನ್ಯ, ನಿರಾಡಂಬರ, ಪರಿಶುದ್ಧ ಜೀವನ, ಆದರ್ಶವಾದಿತ್ವ ಮತ್ತು ಸೇವಾಮನೋಭಾವಗಳು ಅವರ ಸಂಗಡ ಕೆಲಸ ಮಾಡುವ ಯಾರಿಗಾದರೂ ಸ್ಫೂರ್ತಿಯನ್ನು ಕೊಡದಿರಲಾರವು".

- ನ್ಯಾಯಮೂರ್ತಿ ಡಿ.ಎಂ.ಚಂದ್ರಶೇಖರ್
ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು

"ಶ್ರೀ ಹೊ. ಶ್ರೀನಿವಾಸಯ್ಯ ಅವರ ನಿಕಟ ಸಂಪರ್ಕವನ್ನು ಸ್ವಾತಂತ್ರ್ಯ ಸಂಗ್ರಾಮದ ವೇಳೆಯಿಂದಲೂ ಹೊಂದಿರುವವರಲ್ಲಿ ನಾನು ಒಬ್ಬ. ತ್ಯಾಗಮಯಿ, ಸಾಹಿತ್ಯ ಪ್ರೇಮಿ, ಸಮಾಜ ಸೇವೆಗೆ ಸದಾ ದುಡಿಯುತ್ತಿರುವ ಹಾಗೂ ಸ್ನೇಹಪರ ವ್ಯಕ್ತಿಯಾಗಿರುವ ಶ್ರೀ ಹೊ. ಶ್ರೀನಿವಾಸಯ್ಯ ಅವರು ಬಡ ಕುಟುಂಬದಲ್ಲಿ ಹುಟ್ಟಿ, ಬಹಳ ಕಷ್ಟಪಟ್ಟು ವಿದ್ಯಾಭ್ಯಾಸ ಪೂರೈಸಿ ಇಂಜಿನಿಯರ್ ಆಗಿ ಇಂದು ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದಾರೆ. ಅದರೂ ಕೂಡ ಅವರ ಜೀವನದಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ಖಾದಿ ಬಟ್ಟೆಯನ್ನು ಬಿಡದ ಈ ಖಾದಿಪ್ರೇಮಿಯ ದೇಶಪ್ರೇಮ ಪ್ರತಿಯೊಬ್ಬರೂ ಅನುಕರಣೆ ಮಾಡುವಂಥದ್ದಾಗಿದೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ದುಡಿದು, ಮಹಾತ್ಮ ಗಾಂಧೀಜಿಯವರ ಅನುಯಾಯಿಗಳಾಗಿ ಹಲವಾರು ಸಮಾಜಸೇವಾ ಕೆಲಸಗಳನ್ನು ಮಾಡಿದ್ದಾರೆ. ಗಾಂಧಿ ಸಾಹಿತ್ಯ ಸಂಘವನ್ನು ಸ್ಥಾಪಿಸಿ, ಆ ಮೂಲಕ ಗಾಂಧೀಜಿಯವರ ತತ್ವಗಳನ್ನು ಪ್ರಚುರ ಪಡಿಸಲು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಕನ್ನಡಭಾಷೆಯ ಮೇಲೆ ಅಪಾರ ಅಭಿಮಾನವಿದ್ದು ಅಚ್ಚ ಕನ್ನಡಿಗ ಶ್ರೀ ಹೊ. ಶ್ರೀನಿವಾಸಯ್ಯ ಅವರು ಹಲವಾರು ಪ್ರವಾಸ ಸಾಹಿತ್ಯ ಮತ್ತು ಮಕ್ಕಳ ಪುಸ್ತಕಗಳನ್ನು ಬರೆದಿದ್ದಾರೆ. ಶ್ರೀ ಹೊ. ಶ್ರೀನಿವಾಸಯ್ಯರವರು ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟಿದ್ದಾರೆ. ಅವರು ಸ್ಥಾಪಿಸಿರುವ ಸಂಘ ಸಂಸ್ಥೆಗಳಿಂದ ಇಂದು ಸಮಾಜಕ್ಕೆ ಆಗಿರುವ ಉಪಕಾರ ಅಪಾರವಾದುದು".

- ವಿ.ಎಸ್.ಕೃಷ್ಣಯ್ಯರ್

ಗಾಂಧೀ ಅನುಯಾಯಿ ಮತ್ತು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು.

"ಖಾದಿ ಲುಂಗಿ, ಅರೆತೋಳಿನ ಖಾದಿ ಶರಟು, ಸೈಕಲ್ ಮೇಲೆ ಓಡಾಟ. ಗಾಂಧೀ ಸಾಹಿತ್ಯ ಸಂಘದ ಕಾರ್ಯಕ್ರಮಗಳನ್ನು ಮಲ್ಲೇಶ್ವರದಲ್ಲಿ ಪ್ರಚಾರಮಾಡಲು ಕೈಯಲ್ಲಿ ಡಬ್ಬ ತಗಡಿನ ತುತ್ತೂರಿ ಹಿಡಿದು ಹಣ ವಸೂಲಿ ಮಾಡಲು ಮನೆಮನೆಗೆ ಅಲೆತ. ಸಂಘದಲ್ಲಿ ಕಸ ಗುಡಿಸುವುದು, ಜಮಖಾನ ಎತ್ತುವುದು, ಪುಸ್ತಕ ಜೋಡಿಸುವುದು, ಬಂದವರಿಗೆ ಪುಸ್ತಕ ಕೊಡುವುದು ಇತ್ಯಾದಿ ಕೆಲಸ. ಇದ್ದದ್ದು ಮಲ್ಲೇಶ್ವರದ ಆರನೆಯ ಕ್ರಾಸಿನಲ್ಲಿ ಶಾಲೆ ಹಿಂದೆ ಒಂದು ಸಣ್ಣ ಮನೆ. ಬಡತನದಲ್ಲೇ ಹುಟ್ಟಿ ಬೆಳೆದ ವ್ಯಕ್ತಿ ಶ್ರೀನಿವಾಸಯ್ಯ, ನಾಲ್ಕಾರು ಜನರ ನೆರಳಿನಿಂದ ಪ್ರೋತ್ಸಾಹದಿಂದ ರೂಪುಗೊಂಡ ವ್ಯಕ್ತಿತ್ವ. ಶಿಸ್ತಿನ ನಡೆ, ಹಿಡಿದುದನ್ನು ಬಿಡದೆ ನಡೆಸುವ ಹಠ, ಕಾರ್ಯಕ್ಷಮತೆ, ನಾಲ್ಕು ಜನರನ್ನು ಕಟ್ಟಿಕೊಂಡು ಕೆಲಸ ಮಾಡುವ ರೀತಿ, ಇಲ್ಲಿರಲಿ, ಜರ್ಮನಿಯಲ್ಲಿರಲಿ, ಎಲ್ಲೆಲ್ಲೂ ತಮ್ಮತನವನ್ನು ತಮ್ಮ ತತ್ವನಿಷ್ಠೆಯನ್ನು ಕಾಪಾಡಿಕೊಳ್ಳುವ ದೃಢತೆ, ತಮ್ಮ ಆನಂದವನ್ನು ಇತರರಿಗೆ ನೀಡಲು ಕಾತರ–ಎಲ್ಲ ಅವರ ಬದುಕನ್ನು ತುಂಬಿವೆ. ಎಲ್ಲ ಶರ್ಮಾಜಿಯಿಂದ ಬಂದ ಬಳುವಳಿ, ಬೆಳಕು".

- ನೀಲತ್ತಹಳ್ಳಿ ಕಸ್ತೂರಿ

ಹಿರಿಯ ಗಾಂಧೀ ಅನುಯಾಯಿ

"ಶ್ರೀ ಶ್ರೀನಿವಾಸಯ್ಯನವರು ವೃತ್ತಿಯಿಂದ ಇಂಜಿನಿಯರು, ಪ್ರವೃತ್ತಿಯಿಂದ ಗಾಂಧೀತತ್ತ್ವೋಪಾಸಕರು; ಸಾಹಿತ್ಯಕೃಷಿ ಅವರ ಪ್ರೀತಿಯ ಹವ್ಯಾಸ. ನಿಷ್ಠಾವಂತ ಸಮಾಜಸೇವಕರಾದ ಶ್ರೀ ಶ್ರೀನಿವಾಸಯ್ಯನವರ ಆಳವಾದ ಅನುಭವ ಎಂಥ ಕ್ಲಿಷ್ಟಕರವಾದ ವಿಷಯವನ್ನಾದರೂ ಸರಸವಾಗಿ ಕನ್ನಡದಲ್ಲಿ ಹೇಳಬಲ್ಲರೆಂಬುದಕ್ಕೆ "ನಾ ಕಂಡ ಜರ್ಮನಿ" ಹಾಗೂ ಅವರ ಇತರ ಲೇಖನಗಳು ಸಾಕ್ಷಿಯಾಗಿವೆ. ಕನ್ನಡ ಜನ ಅವರ ಲೇಖನಿಯಿಂದ ಅಪಾರ ವೈಚಾರಿಕ ಹಾಗು ವೈಜ್ಞಾನಿಕ ಸಾಹಿತ್ಯವನ್ನು ನಿರೀಕ್ಷಿಸುತ್ತಾರೆ'.

- ದೇ.ಜ.ಗೌ

ವಿಶ್ರಾಂತ ಕುಲಪತಿ ಮತ್ತು ಸಾಹಿತಿಗಳು

ಡಾ॥ ಹೊ. ಶ್ರೀನಿವಾಸಯ್ಯನವರು ಈ ನಾಡುಕಂಡ, ಗಾಂಧೀ ಬದುಕನ್ನು ಅಪ್ಪಿಕೊಂಡು ಬದುಕುತ್ತಿರುವ ಅಪ್ಪಟ ಗಾಂಧಿ ಅನುಯಾಯಿ. ತಮ್ಮ 92ನೇ ವಯಸ್ಸಿನಲ್ಲೂ ರಾಜ್ಯದಾದ್ಯಂತ ಪ್ರವಾಸಮಾಡಿ ಗಾಂಧಿ ವ್ಯಕ್ತಿ ವಿಚಾರಗಳನ್ನು ಜನರಲ್ಲಿ, ವಿಶೇಷವಾಗಿ ಯುವಜನರಲ್ಲಿ ಬಿತ್ತಿ ಅವರಲ್ಲಿ ಜೀವನೋತ್ಸಾಹ ತುಂಬುತ್ತಿರುವ ಚೈತನ್ಯ ಚಿಲುಮೆ. ಗ್ರಾಮೀಣ ಜನರ ಬಗ್ಗೆ ಅವರ ಕಾಳಜಿ ಅನುಕರಣೀಯ"

- ಶ್ರೀ ಹೆಚ್.ಕೆ. ಪಾಟೀಲ್
ಗ್ರಾಮಸ್ವರಾಜ್ಯ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು,

" ಗ್ರಾಮೀಣ ರೈತ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಡಾ॥ ಹೊ. ಶ್ರೀನಿವಾಸಯ್ಯ ತಮ್ಮ ಬೇರುಗಳನ್ನು ಮರೆಯದಿರುವುದು ಅವರ ಬದುಕು-ಬರಹ-ಕಾರ್ಯಕ್ಷಮತೆಯಿಂದ ವ್ಯಕ್ತವಾಗುತ್ತದೆ. ತಾವು ಬೆಳೆಯುತ್ತಾ, ಸಾವಿರಾರು ಶಿಷ್ಯರನ್ನು ಬೆಳೆಸಿದ ಕೀರ್ತಿ ಇವರದ್ದು."

- ಡಾ॥ ವೂಡೆ. ಪಿ. ಕೃಷ್ಣ
ಅಧ್ಯಕ್ಷರು, ಗಾಂಧಿ ಶಾಂತಿ ಪ್ರತಿಷ್ಠಾನ

ಡಾ|| ಹೊ. ಶ್ರೀನಿವಾಸಯ್ಯ ಅವರ ಜೀವನದ ಮೈಲಿಗಲ್ಲು

4.1.1925 ರಂದು ಜನನ

ಜನ್ಮ ಸ್ಥಳ : ಚೌದರಿಕೊಪ್ಪಲು.

ತಂದೆ : ಶ್ರೀ ಹೊನ್ನಪ್ಪ.

ತಾಯಿ : ಶ್ರೀಮತಿ ತಿಮ್ಮಮ್ಮ.

1934 : ಮಲ್ಲೇಶ್ವರಂನಲ್ಲಿ ಗಾಂಧೀಜಿಯ ಮೊದಲ ದರ್ಶನ.

1942–47 : ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಹಸ್ಯ ಪತ್ರಿಕೆಗಳ ಪ್ರಕಟಣೆ ಮತ್ತು ಹಂಚಿಕೆ (ಅಂಡರ್‌ಗ್ರೌಂಡ್ ಪೇಪರ್) ಕೈಬಾಂಬು ಇಡುವುದು, ಜೈಲುವಾಸ.

1942–45 : ವಿದ್ಯಾರ್ಥಿ ಸಮಿತಿಯ ಸದಸ್ಯರಾಗಿ ಸಕ್ರಿಯ ಪಾತ್ರ.

1942 : ವಿದ್ಯಾರ್ಥಿದೆಸೆಯಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘ ಸ್ಥಾಪನೆ.

ಗಾಂಧಿ ವಿಚಾರ ಸೇವೆಗಾಗಿ ಗ್ರಂಥಭಂಡಾರ ಸ್ಥಾಪನೆ.

1943 : ಚರಕಾ ಕೇಂದ್ರ ಸ್ಥಾಪನೆ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥಾಪನೆ.

1943–44 : ವಿದ್ಯಾರ್ಥಿ ಸ್ವಯಂಸೇವಕರಾಗಿ ಆಹಾರ ಹಂಚಿಕೆ ಸೇವೆ. (ಫುಡ್ ವಾಲೆಂಟಿರ್ಸ್) (ಆಹಾರ ಸ್ವಯಂ ಸೇವಕರು).

1946 : ಮದರಾಸಿನಲ್ಲಿ ಗಾಂಧೀಜಿಯವರಿದ್ದ ಶಿಬಿರದಲ್ಲಿ 3 ದಿವಸ ಸೇವೆ.

1946 : ವಿದ್ಯಾರ್ಥಿಗಳ ವಂದೇ ಮಾತರಂ ಸಂಗ್ರಾಮದಲ್ಲಿ ಸಕ್ರಿಯ ಪಾತ್ರ.

1949 : ಬಿ.ಇ., ಎಫ್.ಐ.ಇ., ಎಂ.ಎಸ್.ಇ.ಐ., ವಿ.ಡಿ.ಐ., ಚಾರ್ಟರ್ ಇಂಜಿನಿಯರಿಂಗ್ (ಇಂಡಿಯ) ಎನ್.ಡಿ.

1949 : ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಗ್ರಾಮಸೇವಾ ಶಿಬಿರ. 200 ವಿದ್ಯಾರ್ಥಿಗಳ ಒಂದು ತಿಂಗಳ ಶ್ರಮದಾನ.

: ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ಡಿಸೈನರ್.

1951 : ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಕಾರ್ಯನಿರ್ವಾಹಕ ಸಮಿತಿ ಮುಖ್ಯ ಉಸ್ತುವಾರಿ.

1953 : ಶ್ರೀ ರಾಮ ಕೋ-ಅಪರೇಟಿವ್ ಬ್ಯಾಂಕ್ ಮಲ್ಲೇಶ್ವರ ಸ್ಥಾಪಕ, ಪ್ರವೋಟರ್, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿ ಸೇವೆ.

1954 : ಪಶ್ಚಿಮ ಜರ್ಮನಿಯ ಎಲ್.ಹೆಚ್.ಬಿ. ಸಂಸ್ಥೆಯಲ್ಲಿ ರೈಲು ನಿರ್ಮಾಣದ ತರಬೇತಿ ಒಂದೂವರೆ ವರ್ಷ.

1957 : ಪಶ್ಚಿಮ ಜರ್ಮನಿಯ ಎಂ.ಎ.ಎನ್. ಕಾರ್ಖಾನೆಯಲ್ಲಿ ಒಂದೂವರೆ ವರ್ಷ ತರಬೇತಿ.

1964 : ಶ್ರೀ ಆಂಜನೇಯ ಕೋ-ಅಪರೇಟಿವ್ ಬ್ಯಾಂಕ್ ಸ್ಥಾಪಕ ಅಧ್ಯಕ್ಷರಾಗಿ ಸೇವೆ.

1974-76 : ಬಾಂಗ್ಲಾದೇಶಕ್ಕೆ ಭೇಟಿ.

1976 : ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ "ನಾ ಕಂಡ ಜರ್ಮನಿ" ಪುಸ್ತಕಕ್ಕೆ.

1976 : ಗೌ. ಅಧ್ಯಕ್ಷ : ಶ್ರೀ ರಾಮ ಕಲ್ಯಾಣ ಮಂಟಪ ಮತ್ತು ವಿದ್ಯಾರ್ಥಿ ನಿಲಯ ಸಮಿತಿ ಸ್ಥಾಪನೆ.

1978 : ಬಾಂಗ್ಲಾದೇಶಕ್ಕೆ ಭೇಟಿ.

1978-81 : ಶ್ರೀಲಂಕಾಕ್ಕೆ ಭೇಟಿ.

1982 : ವಾರ್ಧಾದ ಪೌನಾರ್ ಆಶ್ರಮದಲ್ಲಿ ವಿನೋಬಾ ಭಾವೆ ಅವರ ದರ್ಶನ- ಅವರ ಕೊನೆ ಜನ್ಮ ದಿನಾಚರಣೆಯಲ್ಲಿ ಭಾಗಿ.

1983 : ಬಿ.ಇ.ಎಂ.ಎಲ್.ನಲ್ಲಿ ಉಪವ್ಯವಸ್ಥಾಪಕರಾಗಿ ನಿವೃತ್ತಿ.

1985 : ಪಶ್ಚಿಮ ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಶಿಕ್ಷಣ ಸಮ್ಮೇಳನದಲ್ಲಿ ಪ್ರತಿನಿಧಿ. ಪತ್ನಿ ಜಯಲಕ್ಷ್ಮಿಜೊತೆಗೆ 6 ತಿಂಗಳು ಜಗತ್ ಪ್ರದಕ್ಷ ಣೆ.

ದಕ್ಷಿಣ ಭಾರತ ಗೋಸೇವಾ ಸಂಘದ ಧರ್ಮದರ್ಶಿ ಮತ್ತು ಗೌರವ ಅಧ್ಯಕ್ಷ.

ಜಯಶ್ರೀ ಟ್ರಸ್ಟಿನ ಸ್ಥಾಪಕ ಧರ್ಮದರ್ಶಿ, (ಬಡಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಸಂಸ್ಥೆ).

1985 : ರಿಂದ ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ(ರಿ.), ಬೆಂಗಳೂರು.

ಸದಸ್ಯರು ಕೇಂದ್ರ ಗಾಂಧೀ ಸ್ಮಾರಕ ನಿಧಿ, ದೆಹಲಿ
ಅಧ್ಯಕ್ಷರು : ಬಿ.ಹೆಚ್.ಇ.ಎಲ್. ಕರ್ನಾಟಕ ಸಂಘ.

1984 : ಕರ್ನಾಟಕ ಸರಕಾರದಿಂದ 'ರಾಜ್ಯ ಪ್ರಶಸ್ತಿ' 'ಸಮಾಜಸೇವೆಗೆ'.

1988 : 'ಗೌರವ ಡಾಕ್ಟರೇಟ್ ಪ್ರಶಸ್ತಿ' (ಪ್ರಕೃತಿ ಚಿಕಿತ್ಸೆ) ದೆಹಲಿ ಪ್ರಕೃತಿ ಚಿಕಿತ್ಸಾ ಪರಿಷತ್‌ರವರಿಂದ ಪ್ರಕೃತಿ ಚಿಕಿತ್ಸೆಗೆ.

1990 : ಪ್ರಕೃತಿ ಚಿಕಿತ್ಸೆ ಮತ್ತು ಯೋಗದ ಸೇವೆಗಾಗಿ 'ಪತಾಂಜಲಿ ಸುವರ್ಣಪದಕ' (ಕರ್ನಾಟಕ ಸರಕಾರ).

1994 : ಬೆಂಗಳೂರು ಯೋಗ ಸೆಂಟರ್(ರಿ)ರವರಿಂದ "ಯೋಗಶ್ರೀ".

'ಆರ್ಯಭಟ ಪ್ರಶಸ್ತಿ' - ಸ್ವಾತಂತ್ರ್ಯ ಹೋರಾಟ ಮತ್ತು ಪ್ರಕೃತಿ ಚಿಕಿತ್ಸೆ ಪರಿಣತಿಗೆ.

ಕನ್ನಡಶ್ರೀ, ಕರ್ನಾಟಕಶ್ರೀ, ಸಮಾಜ ಸೇವಾ ಭೂಷಣ, ಚುಂಚಶ್ರೀ, ಮಾಸ್ಟರ್ ಆಫ್ ಮಿಲೆನಿಯಮ್, ಗೊರೂರು ಸಾಹಿತ್ಯ ಪ್ರಶಸ್ತಿ, ಕರ್ಮಯೋಗಿ ಎಂ.ಎಸ್.ರಾಮಯ್ಯ ಪ್ರಶಸ್ತಿ.

1997 : 9 ಜೂನ್; ಸನ್ಯಾಸಿಗಳೊಂದಿಗೆ ಜಗತ್ ಪ್ರದಕ್ಷಿಣೆ.

2010 : ವೂಡೇ ಪ್ರಶಸ್ತಿ
ಡಾ॥ ಎ.ಪಿ.ಜೆ.ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ

2012 : ಹಂಸರತ್ನ ಪ್ರಶಸ್ತಿ

2012 : ಎಮಿನೆಂಟ್ ಇಂಜಿನಿಯರ್ ಪ್ರಶಸ್ತಿ

2013 : ಮೈಸೂರು ವಿಶ್ವವಿದ್ಯಾನಿಲಯದಿಂದ 'ಗೌರವ ಡಾಕ್ಟರೇಟ್' ಪದವಿ

2014 : ಪತ್ನಿ ಶ್ರೀಮತಿ ಜಯಲಕ್ಷ್ಮಿ ನಿಧನ. ಅವರ ಶರೀರ ವೈದಕೀಯ ಕಾಲೇಜಿಗೆ ದಾನ. ಯಾವ ಸಂಸ್ಕಾರ ಮಾಡದ ಹಾಗೆ ವಿಲ್ ಮಾಡಿರುವುದು.

2015 : ಗಾಂಧೀ ಸೇವಾ ಪ್ರಶಸ್ತಿ– 2015, ಕರ್ನಾಟಕ ಸರ್ಕಾರ.

ಏಕದಶಾ ವ್ರತಗಳು

ಸತ್ಯ	Truth
ಅಹಿಂಸೆ	Ahimsa or Love
ಅಸ್ತೇಯ (ಕದಿಯದಿರುವುದು)	Non-Stealing
ಬ್ರಹ್ಮಚರ್ಯ	Brahmacharya or Chastity
ಅಸಂಗ್ರಹ (ಅಪರಿಗ್ರಹ)	Non-Possession
ಶರೀರ ಶ್ರಮ	Physical Labour
ಅಸ್ವಾದ (ನಾಲಿಗೆ ಚಪಲ)	Control of the Palate
ಸರ್ವತ್ರ ಭಯವರ್ಜನ (ಅಭಯ)	Fearlessness
ಸರ್ವಧಮ ಸಮಾನತ್ವ	Equality of Religion
ಸ್ವದೇಶಿ	Swadeshi
ಸ್ಪರ್ಶಭಾವನೆ (ಅಸ್ಪೃಶ್ಯತಾ ನಿವಾರಣೆ)	Removal of Untouchability

ಏಳು ಸಾಮಾಜಿಕ ಪಾತಕಗಳು
Seven Social Sins


ತತ್ವ ರಹಿತ ರಾಜಕಾರಣ	Politics Without Principles
ದುಡಿಮೆ ಇಲ್ಲದ ಸಂಪತ್ತು	Wealth Without Work
ಆತ್ಮಸಾಕ್ಷಿ ಇಲ್ಲದ ಸಂತೋಷ	Pleasure Without Conscience
ಚಾರಿತ್ರ್ಯವಿಲ್ಲದ ಶಿಕ್ಷಣ	Education Without Character
ನೀತಿ ಇಲ್ಲದ ವ್ಯಾಪಾರ	Commerce Without Morality
ಮಾನವೀಯತೆ ಇಲ್ಲದ ವಿಜ್ಞಾನ	Science Without Humanity
ತ್ಯಾಗ ಇಲ್ಲದ ಪೂಜೆ	Worship Without Sacrifice

–ಮಹಾತ್ಮಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 Constructive Programmes

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗ	**Other Village Industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basis Education**
ವಯಸ್ಕಶಿಕ್ಷಣ	**Adult Education**
ಮಹಿಳೋದ್ಧಾರ	**Women**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Education in Health and Hygiene**
ಪ್ರಾದೇಶಿಕ ಭಾಷೆ	**Provincial Language,**
ರಾಷ್ಟ್ರಭಾಷೆ	**National Language,**
ಆರ್ಥಿಕ ಸಮಾನತೆ	**Economic Equality**
ರೈತಜನೋದ್ಧಾರ	**Kisan**
ಕಾರ್ಮಿಕರ ಕಲ್ಯಾಣ	**Labor**
ಆದಿವಾಸಿ ಕಲ್ಯಾಣ	**Adivasis**
ಕುಷ್ಠರೋಗ ನಿರ್ಮೂಲನೆ	**Lepers**
ವಿದ್ಯಾರ್ಥಿ	**Students**

–ಮಹಾತ್ಮಗಾಂಧೀಜಿ



ಹಿರಿಯ ಚೇತನ

ಡಾ.ಹೊ. ಶ್ರೀನಿವಾಸಯ್ಯ

ಗಾಂಧೀ–ವಿನೋಬಾತತ್ವಾದರ್ಶ ಪಾಲಕ ಡಾ.ಹೊ. ಶ್ರೀನಿವಾಸಯ್ಯನವರು. ಒಬ್ಬ ಶ್ರೇಷ್ಠ ಇಂಜಿನಿಯರ್ ಆಗಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ನಿವೃತ್ತರಾದರೂ ಇವರ ಸ್ವಾತಂತ್ರ್ಯ ಹೋರಾಟದಲ್ಲಿ ಪಾತ್ರ, ಗಾಂಧೀತತ್ವ ಪ್ರಚಾರ, ಖಾದಿ, ಪ್ರಕೃತಿ ಚಿಕಿತ್ಸೆ, ಯೋಗ ಸಾಹಿತ್ಯದ ಪ್ರೀತಿ, ಬದುಕು ಅನುಕರಣೀಯ. ಇವರು ನಮ್ಮ ನಡುವಣಅತ್ಯಂತ್ಯ ಲವಲವಿಕೆಯ ಹಿರಿಯ ಚೇತನ.ಇವರು ಬರೆದ 'ನಾ ಕಂಡ ಜರ್ಮನಿ' ಇಂಗ್ಲಿಷ್ ಸೇರಿದಂತೆ ಹಲವಾರು ಭಾಷೆಗಳಿಗೆ ಭಾಷಾಂತರವಾಗಿರುವುದಲ್ಲದೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿತ್ತು.ಗಾಂಧೀ ಭವನದ ಗೋಡೆಗಳು ಗಾಂಧೀಜಿಯವರ ಜೀವನ–ಕಥನಹೇಳುವುದರ ಜೊತೆಗೆ ಹೊ.ಶ್ರೀ ಅವರ ಕಾರ್ಯಕ್ಷಮತೆಯನ್ನು ತಿಳಿಸುತ್ತದೆ.ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಗುಪ್ತ ಸುದ್ದಿ ಪತ್ರಿಕೆಗಳನ್ನು ಸಾರ್ವಜನಿಕರಿಗೆ ತಲುಪಿಸಿ ಅವರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಇವರಿಗೆದೊರೆತಿರುವ ಪ್ರಶಸ್ತಿಗಳು ಒಂದಲ್ಲ, ಎರಡಲ್ಲ, ಸಾವಿರಾರು.ಸಿದ್ದವನಹಳ್ಳಿ ಕೃಷ್ಣಶರ್ಮರಮಾರ್ಗದರ್ಶನದಲ್ಲಿತಯಾರಾದ ಇವರು ದೇವಾಲಯಗಳಿಗೆ ಹರಿಜನರ ಪ್ರವೇಶಕ್ಕೆ ಮುಂದಾಳತ್ವ ವಹಿಸಿದ್ದುದು ಒಂದು ದಾಖಲೆ ಪ್ರಸಂಗ.ಕರ್ನಾಟಕಸರ್ಕಾರದಪ್ರತಿಷ್ಠಿತಗಾಂಧೀ ಸೇವಾ ಪ್ರಶಸ್ತಿ ಇವರಿಗೆ ಸಂದದ್ದುಇವರಜೀವಮಾನಸೇವೆಗೆ ದೊರೆತ ಮತ್ತೊಂದು ಗರಿ. ಗ್ರಾಮೀಣ ರೈತ ಕುಟುಂಬ ಹಿನ್ನೆಲೆಯಿಂದ ಬಂದಿರುವ ನಮ್ಮ ಹೊ. ಶ್ರೀಯವರು ತಮ್ಮ ಬೇರುಗಳನ್ನು ಮರಿಯದಿರುವುದು ಅವರ ಬದುಕು–ಬರಹ–ಕಾರ್ಯಕ್ಷಮತೆಯಿಂದ ವ್ಯಕ್ತವಾಗುತ್ತದೆ.ತಾವು ಬೆಳೆಯುತ್ತಾ, ಸಾವಿರಾರು ಶಿಷ್ಯರನ್ನು ಬೆಳೆಸಿದ ಕೀರ್ತಿಇವರದ್ದು.

ಈ ಕೃತಿಯ ಮೂಲಕ ಪ್ರೊ.ಜಿ. ಬಿ. ಶಿವರಾಜುರವರು ಹೊ. ಶ್ರೀ ಅವರನ್ನು ಸಂಕ್ಷಿಪ್ತವಾಗಿಯಾದರೂ ಮನೋಗ್ನವಾಗಿ ಪರಿಚಯಿಸಿದ್ದಾರೆ. ಹೊ.ಶ್ರೀ ಅವರಜೀವನ–ಸಾಧನೆ ಯುವ ಮನಸ್ಸುಗಳನ್ನು ಪ್ರೇರೇಪಿಸುವುದರಲ್ಲಿ ಸಂದೇಹವಿಲ್ಲ.

ಡಾ. ವೂಡೇ ಪಿ. ಕೃಷ್ಣ